
ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 11
ರೂ. 5/-
ಮಾರ್ಚ್ 15, 2009

ಜನಶಕ್ತಿ

ಕನ್ನಡ ವಾರಪತ್ರಿಕೆ



ಮೂಡಿಬರುತಿದೆ ಮೂರನೇ ರಂಗ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಸಮಾನತೆಯತ್ತ ಮತ್ತೊಂದು ಹೆಜ್ಜೆ





ಜ್ವಲಂತ ಸಮಸ್ಯೆಗಳು ಜನರ ದಿಟ್ಟ ಹೋರಾಟ



ಬಜೆಟ್‌ನಲ್ಲಿ ಅನ್ಯಾಯ ಬೀದಿಗಿಳಿದ ಹಮಾಲರು

ಬೆಂಗಳೂರಿನ ಕ್ರೈಂ ಹೊಣೆ ಯಾರು ?

ನಾಲ್ಕು



ಡಾ. ಜಿ. ಭಾಸ್ಕರ ಮಯ್ಯ

ಮತಾಂತರ

ಎಂಬ ದುರ್ಗಮ ಅರಣ್ಯದಲ್ಲಿ ಒಂದು ಪಯಣ

ಹದಿನಾರನೆಯ ಶತಮಾನದಲ್ಲಿ ಫ್ರಾನ್ಸಿಸ್ ಕ್ಸೇವಿಯರ್‌ನ ನೇತೃತ್ವದಲ್ಲಿ ಪೋರ್ಚುಗಲ್ಲಿನ ರೋಮನ್ ಕೆಥೋಲಿಕ್ ಕ್ರೈಸ್ತರು ಬಂದರು. ಅಕ್ಟೋಬರ್ 1552ರಲ್ಲಿ ಬಂದ ಕ್ಸೇವಿಯರ್ ತಮಿಳುನಾಡು ಮತ್ತು ಗೋವಾದಲ್ಲಿ ಮತ ಪ್ರಚಾರ ಕೈಗೊಂಡ. ಆತ ದೇವರ ಸಂದೇಶ, ಹತ್ತು ಆದೇಶಗಳನ್ನು (Ten Commandments) ಬೋಧಿಸಿದ. ಆಗ ದಕ್ಷಿಣ ಕರಾವಳಿಯ ಬೇರೆ ಬೇರೆ ಜಾತಿಯ ಜನರು ಕ್ರೈಸ್ತಮತಕ್ಕೆ ಸೇರ್ಪಡೆಗೊಂಡರು.

ರೊಬರ್ಟ್ ಡಿ ನೊಬಲಿ 1606ರಲ್ಲಿ ಮಧುರೆಗೆ ಬಂದ. ಆತ ಎಲ್ಲರನ್ನೂ ಕ್ರೈಸ್ತ ಮತದೊಳಗೆ ತರುವ ಫ್ರಾನ್ಸಿಸ್ ಕ್ಸೇವಿಯರ್‌ನ ಕ್ರಮವನ್ನು ತಿರಸ್ಕರಿಸಿದ. ಆತ ಗೋವಾದ ದನ ತಿನ್ನುವ, ಹೆಂಡ ಕುಡಿಯುವ 'ಕೊಳಕು' ಕ್ರೈಸ್ತರನ್ನು ದ್ವೇಷಿಸುತ್ತಿದ್ದ. ಆತ ಉಚ್ಚ ಜಾತಿಯವರನ್ನು ಮಾತ್ರ ಮತಾಂತರಗೊಳಿಸುವ ಕಾಯಕಕ್ಕೆ ಇಳಿದ. ತಾನು ಮತ್ತು ತಮ್ಮವರನ್ನು ಆತ 'ನವ ಬ್ರಾಹ್ಮಣ'ರು ಎಂದು ಕರೆದುಕೊಂಡ. ಈ ಹೊಸ ಬ್ರಾಹ್ಮಣರ ನಂಬಿಕೆಯೆಂದರೆ ಮೂಲವೇದವು ನಾಶವಾಗಿದೆ. ರೋಬರ್ಟ್ ಡಿ ನೊಬಲಿ ಅದನ್ನು ಸಂಶೋಧಿಸಿದ್ದಾನಲ್ಲದೆ (ಆತನೇ ಹೇಳಿಕೊಂಡಂತೆ) ಅದಕ್ಕನುಸಾರವಾಗಿಯೇ ಆತ ಉಪದೇಶ ಮಾಡುತ್ತಿದ್ದಾನೆ. ಆತ 'ಹಿಂದು'ಗಳ ಆಚಾರವಿಚಾರಗಳನ್ನು ಅನುಸರಿಸಿದ. ಅಸ್ಪೃಶ್ಯತೆಯನ್ನು ಮಾನ್ಯ ಮಾಡಿದ. ಇದರ ಪರಿಣಾಮವಾಗಿ ಹಲವಾರು ಉಚ್ಚವರ್ಣೀಯರು ಕ್ರೈಸ್ತರಾದರು. ಆತ ಉಚ್ಚಜಾತಿಯವರಿಗೆ ಮತ್ತು ನೀಚ ಜಾತಿಯವರಿಗೆ ಬೇರೆ ಬೇರೆ ಪಾದರಿಗಳನ್ನು ನೇಮಿಸಿದ. ಚರ್ಚುಗಳು ಬ್ರಾಹ್ಮಣ ಚರ್ಚುಗಳು ಮತ್ತು ಪರಯ (ದಲಿತ) ಚರ್ಚುಗಳೆಂದು ವಿಭಾಗಗೊಂಡವು.

ಇನ್ನೂ ಹಲವಾರು ಬದಲಾವಣೆಗಳಾದವು. ಹಾಲೆ ವಿಶ್ವವಿದ್ಯಾಲಯದಲ್ಲಿ ಕಲಿತ ಲುಥೇರಿಯನ್ ಮಿಶನರಿ Christiat Frederick Schwart ಭಾರತಕ್ಕೆ ಬಂದು ಸೆಕ್ಯುಲರ್ ಮಾದರಿಯಲ್ಲಿ ಕೆಲಸ ಮಾಡಿದ.ಅಂತೆಯೇ ಪ್ರೊಟೆಸ್ಟೆಂಟ್ ಮಿಶನರಿಗಳಾದ Zienenbalg ಮತ್ತು Plutchau ಜರ್ಮನಿಯಿಂದ ಬಂದು (1706) ದಲಿತರೊಡನೆ ಬೆರೆತರು. ದಲಿತರಿಗಾಗಿ ಅವರು ಮೊತ್ತ ಮೊದಲಿಗೆ ಈ ದೇಶದಲ್ಲಿ ಚರ್ಚುಗಳನ್ನು ಮತ್ತು ಶಾಲೆಗಳನ್ನು ತೆರೆದರು. ಮೂರು ಶತಮಾನಗಳ ಕಾಲ ಪ್ರಾಟೆಸ್ಟೆಂಟ್ ಮಿಶನರಿಗಳು ದಲಿತರಿಗಾಗಿ ಕೆಲಸ ಮಾಡಿದರು.

ಮಿಶನರಿಗಳು ಭಾರತದ ಜಾತಿವ್ಯವಸ್ಥೆಯ ಸ್ವರೂಪವನ್ನು ಬಹಳ ಚೆನ್ನಾಗಿಯೇ ಅರ್ಥ ಮಾಡಿಕೊಂಡಿದ್ದರು. ಅವರಿಗೆ ಮೇಲು ಜಾತಿಯವರ ಬಗೆಗೆ ಇರುವ ಒಲವು ಕೆಳಜಾತಿಯವರ ಬಗೆಗೆ ಇರಲಿಲ್ಲ. ದಲಿತರ ಬಗ್ಗೆ ಅವರಿಗೆ ಮೇಲ್ಜಾತಿಯ ಹಿಂದುಗಳಂತೆಯೇ ಪೂರ್ವಗ್ರಹವಿತ್ತು. ದಲಿತರನ್ನು ಮತಾಂತರ ಮಾಡುವ ಬಗ್ಗೆ ಮೇಲು ಜಾತಿಯ ಕ್ರೈಸ್ತರ ತೀವ್ರ ವಿರೋಧವಿತ್ತು. 1920ರಲ್ಲಿ National Christian Council (NCC) - ಈ ಮತವನ್ನು ತಾವು ದಲಿತರ ಮತವೆಂದು ಕರೆಯಲು ಬಯಸುವುದಿಲ್ಲ- ಎಂದು ಸ್ಪಷ್ಟೀಕರಣ ನೀಡಿದ್ದಲ್ಲದೇ ಸಾಮೂಹಿಕ ಮತಾಂತರಕ್ಕೇ ತಡೆಯಾಜ್ಞೆಯನ್ನು ವಿಧಿಸಿತು. 25 ಮಾರ್ಚ್ 2003ರಲ್ಲಿ ದಿಲ್ಲಿಯಲ್ಲಿ ದಲಿತ ಕ್ರೈಸ್ತರು "ಕೆಥೋಲಿಕ್ ಬಿಷಪ್ ಕಾನ್ಫರೆನ್ಸ್ ಆಫ್ ಇಂಡಿಯಾ"ದ ಅಧ್ಯಕ್ಷರಿಗೆ ಚರ್ಚ್ ಮತ್ತು ಮಿಷನರಿಗಳಿಗೆ ಸಂಬಂಧಿಸಿದ ಬೇರೆ ಬೇರೆ ಸಂಸ್ಥಾನಗಳಲ್ಲಿ ದಲಿತ ಕ್ರೈಸ್ತರೊಡನೆ ಎಸಗುವ ಜಾತಿಭೇದವನ್ನು ಕೊನೆಗಾಣಿಸಲು ಮನವಿ ಮಾಡಿಕೊಂಡಿದ್ದರು. ಸ್ವಾತಂತ್ರ್ಯ ಬಂದು 60 ವರ್ಷ ಕಳೆದರೂ ದಲಿತ ಕ್ರೈಸ್ತರು ಎಲ್ಲಿದ್ದಾರೆಯೋ ಅಲ್ಲಿಯೇ ಇದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ದಲಿತ ಕ್ರೈಸ್ತರು ಅಸಂಘಟಿತರೂ ನಿರಕ್ಷರ ಕುಕ್ಷಿಗಳು, ಸಾಮಾಜಿಕವಾಗಿ ಶೋಷಿತರೂ, ಬಡತನದ ಬೇಗೆಯಲ್ಲಿ ಬೇಯುತ್ತಿರುವವರೂ ಆಗಿದ್ದರು. ಇಂದಿಗೂ ಅವರಿಗೆ ಕ್ರೈಸ್ತ ಚರ್ಚು ಹಾಗೂ ಅವುಗಳೊಂದಿಗೆ ಸಂಬಂಧಿಸಿದ ಸಂಸ್ಥೆಗಳಲ್ಲಿ ಸೂಕ್ತ ಸ್ಥಾನಮಾನಗಳಿಲ್ಲ. ಅಂಥ ಸಂಸ್ಥೆಗಳಲ್ಲಿ ಭ್ರಷ್ಟಾಚಾರ ಮತ್ತು ಜಾತಿವಾದವು ಆಳವಾಗಿ ಬೇರು ಬಿಟ್ಟಿವೆ.

ಇನ್ನು ಬೌದ್ಧಮತವನ್ನು ಪರಿಶೀಲಿಸುವ

ಗೌತಮ ಬುದ್ಧನ ಪ್ರಕಾರ ದುಃಖವೇ ಆರ್ಯಸತ್ಯ. ಅದರ ನಿವಾರಣೆಗೆ ಅಷ್ಟಾಂಗ ಮಾರ್ಗವನ್ನು ಆತ ಹೇಳಿದ (ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್, ಸಮ್ಯಕ್ ಕರ್ಮಾಂತ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ ಮತ್ತು ಸಮ್ಯಕ್ ಸಮಾಧಿ). ಯಾವ ವ್ಯಕ್ತಿ ಈ ಅಷ್ಟಾಂಗ ಮಾರ್ಗದಲ್ಲಿ ನಡೆಯುತ್ತಾನೋ ಆತ ಪುರೋಹಿತರ ಬಲೆಯೊಳಗೆ ಸಿಲುಕಿಕೊಳ್ಳುವುದಿಲ್ಲ. ಆತ ತನ್ನ ಗುರಿ ಮುಟ್ಟುತ್ತಾನೆ. ಬುದ್ಧನ ಆಚಾರ ಸಂಹಿತೆಯ ಮುಖ್ಯ ನಿಯಮಗಳು 1. ಪರ ಧನಕ್ಕೆ ಲೋಭ ಮಾಡದಿರುವುದು 2. ಅಹಿಂಸೆ 3. ಮತ್ತು ಬರಿಸುವ ಪದಾರ್ಥಗಳನ್ನು ಸೇವಿಸದಿರುವುದು. 4.ದುರಾಚಾರಗಳಿಂದ ದೂರವಿರುವುದು. ಬುದ್ಧ ಮತ್ತು ಮಹಾವೀರ ಜಾತಿ ವ್ಯವಸ್ಥೆಯ ಮೇಲೆ ಬಲವಾದ ಪ್ರಹಾರವನ್ನೇ ಮಾಡಿದ್ದಾರೆ.

ಆದರೆ, ಮೂಲ ಬೌದ್ಧ ದರ್ಶನ ಈಗ ಹಾಗೆಯೇ ಉಳಿದಿದೆಯೆ? ಬುದ್ಧನ ಜೀವಿತಾವಧಿಯಲ್ಲಿ ಬೌದ್ಧ ಧರ್ಮವು ತೀವ್ರವಾಗಿ ಬೆಳೆಯಿತು. ಬುದ್ಧನ ಪರಿನಿರ್ವಾಣದ 200 ವರ್ಷಗಳ ನಂತರ ಸಾಮ್ರಾಟ್ ಅಶೋಕ ಬೌದ್ಧ ಧರ್ಮವನ್ನು ಸ್ವೀಕರಿಸಿದ. ಆತ ಈ ಧರ್ಮವನ್ನು ಮಧ್ಯ ಏಶಿಯಾ, ಪಶ್ಚಿಮ ಏಶಿಯಾ ಮತ್ತು ಶ್ರೀಲಂಕಾದಲ್ಲೆಲ್ಲಾ ಹರಡಿದ. ಆದರೆ, ಭಾರತದಲ್ಲಿ ಬೌದ್ಧ ಧರ್ಮವು ಜನ ಧರ್ಮವಾಗಲಿಲ್ಲ. ಇದರ ಅವನತಿಗೆ ಬರೇ ವೈದಿಕ ಧರ್ಮ ಮಾತ್ರ ಕಾರಣವಲ್ಲ. ಕ್ರಮಕ್ರಮವಾಗಿ ಬೌದ್ಧಧರ್ಮವು ಜಟಿಲ ದಾರ್ಶನಿಕ ಸುಳಿಗಳೊಳಗೆ ಸಿಲುಕುತ್ತಾ ಹೋಯಿತು. ಸ್ವತಃ ಬುದ್ಧ ಜಗತ್ತನ್ನು 'ಮಿಥ್ಯೆ' ಎನ್ನುವವರ ವಾದವನ್ನು ಖಂಡತುಂಡವಾಗಿ ವಿರೋಧಿಸಿದ್ದ, ಆದರೆ ಕಾಲಾಂತರದಲ್ಲಿ ಬೌದ್ಧ ಪಂಥ ಹೀನಯಾನ ಮತ್ತು ಮಹಾಯಾನವಾಗಿ ವಿಭಜನೆಗೊಂಡಿತು. ಮಹಾಯಾನ ಸಂಪ್ರದಾಯದ ನಾಗಾರ್ಜುನನು 'ಶೂನ್ಯವಾದಿ'ಯಾಗಿದ್ದ. ಈ ರೀತಿ ಬುದ್ಧನ ದರ್ಶನ ಪೂರ್ತಿ 'U' ಟರ್ನ್ ತೆಗೆದುಕೊಂಡಿತು. ಅನಂತರ ಮತ್ತೆ ಅದು ವಿಭಜನೆಗೊಂಡು ಸಹಜಮಾನ, ವಜ್ರಮಾನ ಪಂಥಗಳಾದವು. ವಜ್ರಮಾನಿಗಳಂತೂ ಮಾಂಸ, ಮದಿರೆ ಮತ್ತು ಮೈಥುನದ ದಾಸರಾದರು. ಕ್ರಮಕ್ರಮವಾಗಿ ಬೌದ್ಧ ಪಂಥವು ಮಠದಿಂದ ಸಂಚಾಲಿಸಲ್ಪಡುವ ಮತವಾಯಿತು. ಮಠವು ಮತಪ್ರಭುತ್ವದ ಕೇಂದ್ರವಾಯಿತು.

ಕ್ರಿ.ಶ. ಒಂದನೆಯ ಶತಮಾನದಲ್ಲಿ ಬೌದ್ಧರು ಬಹುದೊಡ್ಡ ಸಂಖ್ಯೆಯಲ್ಲಿ ಮೂರ್ತಿ ಪೂಜಕರಾದರು. ಭಕ್ತರಿಂದ ಹೇರಳ ಕಾಣಿಕೆಯನ್ನು ಪಡೆಯತೊಡಗಿದರು. ರಾಜರುಗಳಿಂದಲೂ ಇವರ ವಿಹಾರಗಳಿಗೆ ಹೇರಳ ಉಂಬಳಿ ದೊರೆಯುತ್ತಿತ್ತು. ಬೌದ್ಧ ಭಿಕ್ಷುಗಳ ಜೀವನ ವೈಭವದಿಂದ ಕೂಡಿತು. ನಾಲಂದಾ ಮೊದಲಾದ ಬೌದ್ಧ ಕೇಂದ್ರಗಳು ಇನ್ನೂರು ಮುನ್ನೂರು ಗ್ರಾಮಗಳಿಂದ ಕಂದಾಯ ವಸೂಲಿ ಮಾಡುತ್ತಿದ್ದುವು. 7ನೆಯ ಶತಮಾನಕ್ಕೆ ಬರುವಾಗ ಬೌದ್ಧ ವಿಹಾರಗಳು ವಿಲಾಸೀ ಜನರ ಆಡಳಿತಕ್ಕೆ ಒಳಪಟ್ಟವು. ಬುದ್ಧನು ಯಾವುದನ್ನೆಲ್ಲಾ ನಿಷೇಧಿಸಿದ್ದನೋ ಆ ಎಲ್ಲಾ ಕುಕರ್ಮಗಳು ಅಲ್ಲೇ ಮೈವೆತ್ತು ನಿಂತವು. ವಿಹಾರಗಳ ಅಪಾರ ಸಂಪತ್ತು, ಮಹಿಳೆಯರ ಮತ್ತು ಉಪಸ್ಥಿತಿ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿತು. ಬೌದ್ಧ ಭಿಕ್ಷುಗಳು ಸ್ತ್ರೀಯರನ್ನು ಭೋಗದ ವಸ್ತುವೆಂದೇ ಪರಿಗಣಿಸಿದರು.

ಧಾರ್ಮಿಕವಾಗಿಯೂ ಆ ಕಾಲ ಪತನದ ಕಾಲ. ಹಿಂದುಗಳ ಎಲ್ಲಾ ಕರ್ಮಕಾಂಡಗಳು ಬೌದ್ಧ ಧರ್ಮದೊಳಗೆ ಸೇರಿಕೊಂಡವು. ಬುದ್ಧ ಜನರ ಆಡು ನುಡಿ ಪಾಲಿ, ಪಾಕೃತದಲ್ಲಿ ಬೋಧನೆ ಮಾಡಿದ್ದ. ಸಂಸ್ಕೃತವನ್ನು ವಿರೋಧಿಸಿದ್ದ. ಬದಲಾದ ಬೌದ್ಧ ಧರ್ಮ ಸಂಸ್ಕೃತಕ್ಕೆ ಉನ್ನತ ಸ್ಥಾನಕೊಟ್ಟು ಹೆಚ್ಚಿನ ಸ್ಥಾನ ಕೊಟ್ಟು ಜನರಿಂದ ದೂರಾಯಿತು. ಯಾವ ಜಾತಿವ್ಯವಸ್ಥೆಯ ವಿರುದ್ಧ ಬುದ್ಧ ಹೋರಾಟ ಮಾಡಿದ್ದನೊ, ಸ್ತ್ರೀ ಶೂದ್ರರಿಗೆ ಸಮಾನತೆಯ ಅಧಿಕಾರವನ್ನು ಪ್ರತಿಪಾದಿಸಿದ್ದನೊ ಅವುಗಳೆಲ ಇತಿಹಾಸದ ಪುಟಗಳಿಗೆ ಸೇರಿಹೋದವು. ಜಾ ವ್ಯವಸ್ಥೆ ಸಂಭ್ರಮದಿಂದ ವಿಜೃಂಭಿಸಿತು. ಅಸಂಖ್ಯಾ ದೇವೀ ದೇವತೆಗಳು, ಮಂತ್ರ-ತಂತ್ರ, ದಕ್ಷಿಣೆ ಮೇಲು-ಕೀಳು ಎಲ್ಲವೂ ಬೌದ್ಧ ಧರ್ಮದೊಳ ನುಸುಳಿದವು.

ಭಾರತದಲ್ಲಿ ಪೂಜಿಸಲ್ಪಡುತ್ತಿದ್ದ ಮೊದಲ ಮೂರ್ತಿಗಳೆಲ್ಲವೂ ಬೌದ್ಧ ಮತ್ತು ಜೈನರವು. ಬುದ್ಧ ಮಹಾವೀರ - ಮೂರ್ತಿ ಪೂಜಕರಾಗಿರಲಿಲ್ಲ ಅಶೋಕನೂ ಬುದ್ಧನ ವಿಗ್ರಹವನ್ನು ಸ್ಥಾಪಿಸಿರಲಿಲ್ಲ ಅದಕ್ಕೂ ಕಾರಣವಿದೆ. ಅಶೋಕ 'ಹೀನಯಾನ ಪಂಥದವನಾಗಿದ್ದ. ಹೀನಾಯಾನದಲ್ಲಿ ಬುದ್ಧವಿಗ್ರಹದ ನಿರ್ಮಾಣ ವರ್ಜಿತವಾಗಿತ್ತು. ಮಹಾಯಾನಿಗಳು ಮೂರ್ತಿಪೂಜಕರಾಗಿ ಮಾರ್ಪಟ್ಟರು. ಕನಿಷ್ಕನ ಕಾಲದಲ್ಲಿ ಬುದ್ಧನ ಮೂರ್ತಿಗಳ ನಿರ್ಮಾಣ ಭರದಿಂದ ಸಾಗಿತು. (ಕಲ್ಕತ್ತಾ ಮ್ಯೂಸಿಯಮ್‌ನಲ್ಲಿರುವ ಪ್ರಾಚೀನ ಬುದ್ಧ ವಿಗ್ರಹ ಕ್ರಿ.ಶ. 142ರಲ್ಲಿ ರಚಿಸಲ್ಪಟ್ಟುದು. ಸಾರಾನಾಥ ಸಂಗ್ರಹಾಲಯದ 300 ಬುದ್ಧ ಪ್ರತಿಮೆಗಳು ಗುಪ್ತರ ಕಾಲದವು, ತಾಂತ್ರಿಕ ಬೌದ್ಧರ ದೇವಿಯು ಕೆಲವೊಮ್ಮೆ 'ಲಕ್ಷ್ಮೀ'ಯನ್ನು ಹೋಲುತ್ತಿದ್ದರೆ, ಕೆಲವೊಮ್ಮೆ ರೌದ್ರ ರೂಪದಲ್ಲಿ ದುರ್ಗೆಯನ್ನು ಹೋಲುತ್ತಾಳೆ. ತಾರೆಯ 21 ರೂಪಗಳು ಇವೆ.

ತನ್ನ ಜನ್ಮ ಭೂಮಿಯಲ್ಲಿ ಬೌದ್ಧಧರ್ಮ ನಶಿಸಿ ಹೋದರೂ ಜಗತ್ತಿನ ಹಲವಾರು ದೇಶಗಳಲ್ಲಿ ಅದು ಸಮೃದ್ಧವಾಗಿದೆ. ಅಲ್ಲಿಯ ಬೌದ್ಧರು ಸಂಪದ್ಭರಿತರಾಗಿದ್ದಾರೆ. Bankok Post ನಲ್ಲಿ ಪ್ರಕಟವಾದ ಒಂದು ವರದಿಯ ಪ್ರಕಾರ "ಸಿಸಕಾಬುವಾ" ವಿಹಾರದ ಬೌದ್ಧ ಭಿಕ್ಷುವಿನ ಬಳಿ 60 ವಿಂಟೇಜ್ ಕಾರುಗಳಿವೆ. ಈ ಕಾರುಗಳನ್ನು ಆತ ದಾನಿಗಳ ದುಡ್ಡಿನಿಂದ ತನ್ನ ಸ್ವಂತ ಸಂಗ್ರಹಾಲಯಕ್ಕೆ ಖರೀದಿಸಿದ್ದ.

'ಜಾತಿವ್ಯವಸ್ಥೆ'ಯ ಪ್ರಮುಖ ವಿಚಾರಕ್ಕೆ ಬಂದರೆ ಕ್ರೈಸ್ತ, ಮುಸ್ಲಿಂ ಮತಧರ್ಮಗಳಂತೆಯೇ ಬೌದ್ಧ ಧರ್ಮವೂ ಹಿಂದೂ ಧರ್ಮದ ಎಲ್ಲಾ ಅಸಮಾನತೆಗಳನ್ನು ತನ್ನಲ್ಲಿ ಮೈಗೂಡಿಸಿಕೊಂಡಿದೆ. ಅಂಬೇಡ್ಕರ್ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧ ಮತವನ್ನು ಸ್ವೀಕರಿಸಿದರು. ಅಂಬೇಡ್ಕರ್ ದಲಿತರ ಏಳಿಗೆಗಾಗಿ ದುಡಿದ ಮಹಾಮಾನವ. ಆದರೆ, ನವಬೌದ್ಧರ, ದಲಿತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳಲ್ಲಿ ಪರಿವರ್ತನೆಯಾಯಿತೆ? ಮೀಸಲಾತಿಗಾಗಿ ನವಬೌದ್ಧರ ಧ್ವನಿ ಅವರ ಸಾಮಾಜಿಕ ಸ್ಥಿತಿಯನ್ನು ಬಿಂಬಿಸುತ್ತದೆ. ಮಹಾರಾಷ್ಟ್ರದಲ್ಲಿ ನವಬೌದ್ಧರು ನೌಕರಿಗಳಲ್ಲಿ ಮೀಸಲಾತಿ, ಶೈಕ್ಷಣಿಕ ಸೌಲಭ್ಯ ಹಾಗೂ ಶಾಸಕೀಯ ಸ್ಥಾನಗಳ ಸುರಕ್ಷೆ ಇತ್ಯಾದಿಗಳನ್ನೆಲ್ಲಾ ಒದಗಿಸಿಕೊಡಲು ತಮ್ಮನ್ನು ಪರಿಶಿಷ್ಟ ಜಾತಿಯಲ್ಲಿ ಪರಿಗಣಿಸಬೇಕೆಂದು ಆಗ್ರಹಿಸಿದರು. ನವಬೌದ್ಧರು ಬೌದ್ಧಧರ್ಮವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಜಗತ್ತಿನ ಬೌದ್ಧರೊಡನೆ ಅವರ ಜೀವಂತ ಸಂಬಂಧ ಸಾಧ್ಯವಾಗುತ್ತಿಲ್ಲ. ಬುದ್ಧನ ಸಂದೇಶಗಳಿಗೂ ಇಂದಿನ ಬೌದ್ಧಮತಕ್ಕೂ ಇರುವ ಅಂತರ ಅಜಗಜಾಂತರ.

(ಮುಂದುವರಿಯುವುದು)

ಸಂಪಾದಕೀಯ

ಕರ್ನಾಟಕದಿಂದಲೇ ಮೂರನೇ ರಂಗದ ಘೋಷಣೆ - ಸ್ವಾಗತಾರ್ಹ

ಲೋಕಸಭೆಗೆ ಸಾರ್ವತ್ರಿಕ ಚುನಾವಣೆಗಳು ಘೋಷಿತವಾಗಿರುವ ಹಿನ್ನೆಲೆಯಲ್ಲಿ ರಾಜಕೀಯ ಚಟುವಟಿಕೆಗಳು ಚುರುಕುಗೊಂಡಿವೆ. ಎಲ್ಲಾ ರಾಜಕೀಯ ಪಕ್ಷಗಳೂ ಅಭ್ಯರ್ಥಿಗಳ ಆಯ್ಕೆ ಸಂಪನ್ಮೂಲಗಳ ಕ್ರೋಢೀಕರಣ, ಪ್ರಚಾರ, ಮೈತ್ರಿ ಇತ್ಯಾದಿಗಳ ಲೆಕ್ಕಾಚಾರದಲ್ಲಿ ತೊಡಗಿವೆ.

ಒಂದೆಡೆ ದೀರ್ಘಕಾಲಿಕ ಅಷ್ಟೇ ವಿನಾಶಕಾರಿಯಾಗಿ ಪರಿಣಮಿಸುವ ಜಾಗತಿಕ ಆರ್ಥಿಕ ಕುಸಿತ, ಹಾಗೆಯೇ ಅಮೇರಿಕಾ ಸಾಮ್ರಾಜ್ಯಶಾಹಿಯ ಜಾಗತಿಕ ಅಧಿಪತ್ಯದ ಹವಣಿಕೆ, ಆಕ್ರಮಣಗಳು, ಮುಕ್ತ ಆರ್ಥಿಕ ನೀತಿಯ ದುಷ್ಫಲಗಳ ದುರಂತಗಳು. ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಗೆ ಒದಗಿರುವ ಬೆದರಿಕೆ, ಕೋಮುವಾದ, ಭಯೋತ್ಪಾದನೆ ಸವಾಲು ಹೆಚ್ಚುತ್ತಿರುವ ಜನತೆಯ ಸಂಕಷ್ಟಗಳು ಸಮಸ್ಯೆಗಳ ತತ್ತರ, ಇವುಗಳ ಎದುರಿನಲ್ಲಿ ಈ ಚುನಾವಣೆಗಳು ಹಿಂದೆಂದಿಗಿಂತಲೂ ಅತ್ಯಂತ ಮಹತ್ವದ್ದಾಗಿದೆ. ಸಂಕಷ್ಟಗಳಿಗೆ ಕಾರಣವಾದ ಆಳುವ ವರ್ಗಗಳಿಗೆ ತಕ್ಕ ಉತ್ತರ ಕೊಡುವ ಮತ್ತು ಪರ್ಯಾಯ ರೂಪಿಸುವ ಮಹತ್ತರ ಹೊಣೆ ಜನತೆಯ ಮೇಲಿದೆ.

ಹೀಗಿರುವಾಗ ಕೇಂದ್ರದಲ್ಲಿ ಅಧಿಕಾರದಲ್ಲಿ ಮುಂದುವರೆಯಲು ಮತ್ತು ಅಧಿಕ್ಕಾರಕ್ಕೇರಲು ತಮಗೆ ಮಾತ್ರ ಸಾಧ್ಯ ಎಂದೆಲ್ಲಾ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ನಡೆಸಿರುವ ಕಸರತ್ತು ಹಾಸ್ಯಾಸ್ಪದವೇ. ತಮಗೆ ಬೇಕಾದಂತಹ ಸಮೀಕ್ಷೆ ಏರ್ಪಡಿಸಿಕೊಂಡು ತಮ್ಮ ಪರವಾದ ಅಲೆ ರೂಪಿಸಿಕೊಳ್ಳಲು ಹೆಣಗುವುದು ಮಾಧ್ಯಮಗಳ ಮೂಲಕ ನಡೆದಿದೆ. ಆದರೆ ಭಾರತೀಯ ಮತದಾರನ ತೀರ್ಪು ಇಂತಹ ಎಲ್ಲಾ ಗಿಮಿಕ್ಸ್‌ಗಳನ್ನು ಮೀರಿ ವ್ಯಕ್ತಪಡಿಸುತ್ತಾ ಬಂದಿರುವುದನ್ನು ನೋಡುತ್ತಲೇ ಬಂದಿದ್ದೇವೆ. 'ಭಾರತ ಹೊಳೆಯುತ್ತಿದೆ' ಎಂದೆಲ್ಲಾ ಅಬ್ಬರದ ಪ್ರಚಾರ ಮಾಡುತ್ತಿರುವಾಗಲೇ ಭಾರತದ ಜನತೆಯು ಅಂತಹವರನ್ನು ಇತಿಹಾಸದ ಕಸ ಬುಟ್ಟಿಗೆ ತಳ್ಳಿದ್ದು ಇನ್ನೂ ಹಸಿರಾಗಿಯೇ ಇದೆ. ಒಂದು ಹಾಸ್ಯಾಸ್ಪದ ಸಂಗತಿಯೆಂದರೆ ಕಾಂಗ್ರೆಸ್-ಬಿಜೆಪಿಗೆ, ಬಿಜೆಪಿಗೆ-ಕಾಂಗ್ರೆಸ್ಸೆ ಪರ್ಯಾಯವೆಂದು ಬಿಂಬಿಸಿಕೊಳ್ಳುತ್ತಿರುವುದು. ಈ ಮೂಲಕ ದೇಶದಲ್ಲಿ ಮುಂದಿನ ಸರ್ಕಾರ ರಚನೆ ತಮ್ಮಿಂದ ಮಾತ್ರವೇ ಸಾಧ್ಯವೆಂದು ಹೇಳಿ ಎರಡು ಪಕ್ಷಗಳೊಳಗೆ 'ರಾಜಕೀಯ ದ್ವಿವೀಕರಣ' ಎಂದು ಸಾಧಿಸಿ, ಲಾಭ ಹೊಡೆಯಲು ಬಯಸುತ್ತಿರುವುದು. ಆದರೆ ವಾಸ್ತವ ಭಿನ್ನವಾಗಿಯೇ ಇದೆ. ಇತ್ತೀಚೆಗೆ ಉತ್ತರ ಭಾರತದಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಜನತೆ ಕಾಂಗ್ರೆಸ್ ಬಿಜೆಪಿ ಬಲವಾಗಿದ್ದ ರಾಜ್ಯಗಳಲ್ಲಿಯೇ ಮೊದಲಬಾರಿಗೆ ಇತರೆ ಪಕ್ಷಗಳಿಗೆ ಗಣನೀಯವಾಗಿ (ಶೇ.29ರಷ್ಟು) ಮತ ನೀಡಿದ್ದಾರೆ. ಸರ್ಕಾರ ರಚಿಸಿದ ಕಡೆಗಳಲ್ಲಿ ಬಿಜೆಪಿ ಕಾಂಗ್ರೆಸ್ ಅತ್ಯಂತ ಅಂಚಿನ ಪ್ರಯಾಸದ ಗೆಲುವು ಮಾತ್ರ ಪಡೆದಿವೆ.

ಅಲ್ಲದೇ ಲೋಕಸಭೆಯ ಚುನಾವಣೆಗೆ ಈಗಿರುವ ಅವರ ಮಿತ್ರರೇ ಅವರಿಂದ ಕಳಚಿಕೊಳ್ಳುತ್ತಿದ್ದಾರೆ. ಇದ್ದವರನ್ನು ಉಳಿಸಿಕೊಳ್ಳಲಾಗದೇ, ಹೊಸ ಮಿತ್ರರನ್ನು ಗಳಿಸಿಕೊಳ್ಳಲಾಗದೇ ಕಾಂಗ್ರೆಸ್, ಬಿಜೆಪಿಗಳು ಕಂಗಾಲಾಗಿವೆ. ಅಮೇರಿಕಾ, ಬಹುರಾಷ್ಟ್ರೀಯ ಕಂಪನಿಗಳು, ಭೂ ಮಾಲೀಕ ಪಟ್ಟಭದ್ರರು, ಭ್ರಷ್ಟರ ಬೆಂಬಲ ಇವರಿಗಿದ್ದರೂ, ಭಾರತದ ಜನತೆ ಬೆಂಬಲಿಸಬೇಕಿಲ್ಲ ಎಂಬುದು ಗಹನ ಪ್ರಶ್ನೆ.

ಹೀಗಾಗಿಯೇ ಜನತೆ ಬಿಜೆಪಿ-ಕಾಂಗ್ರೆಸ್‌ಗೆ ಬೇರೊಂದು ಪರ್ಯಾಯವನ್ನೇ ಬಯಸುತ್ತಿದ್ದು ಅಂತಹ ಮೂರನೇಯ ರಂಗ ಸಿದ್ಧಗೊಳ್ಳುತ್ತಿದೆ, ಬಲ ಪಡೆಯುತ್ತಿದೆ. ಇದಕ್ಕೆ ಎಡಪಕ್ಷಗಳೇ ಮುಖ್ಯ ಒತ್ತಾಸೆಯಾಗಿವೆ.

ಇಂತಹ ಪ್ರತಿಕ್ರಿಯೆಯ ಭಾಗವಾಗಿಯೇ ಕರ್ನಾಟಕದಲ್ಲಿಯೂ ಎಡಪಕ್ಷಗಳು ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳು ಒಂದೆಡೆ ಕಲೆತು ರಾಜಕೀಯ ಹೋರಾಟ ನಡೆಸಲು ನಿರ್ಧರಿಸಿರುವುದು ಅತ್ಯಂತ ಸ್ವಾಗತಾರ್ಹ. ಅಧಿಕಾರ ವಂಚಿತರೆಂಬ ಅನುಕಂಪ ಹಿಡಿದು ಅಧಿಕಾರಕ್ಕೇರಿದ ಬಿಜೆಪಿಯು ನಿರಂತರವಾಗಿ ಜನದ್ರೋಹ ಎಸಗುತ್ತ ವಚನಾಭ್ರಷ್ಟವಾಗುತ್ತಿದೆ. ಆರ್ಥಿಕ ಸಂಕಷ್ಟಗಳಲ್ಲಿರುವ ಜನರಿಗೆ, ಪರಿಹಾರ ದೊರಕಿಸುವಲ್ಲಿ ಆಸಕ್ತಿಯೇ ಇಲ್ಲ. ಬದಲಾಗಿ 'ಅಭಿವೃದ್ಧಿ' ಎಂಬ ಒಣ ಮಂತ್ರ ಹೇಳುತ್ತಾ, ಗಿಲೀಟಿನ ಪ್ರಚಾರ ಮಾಡಿ ಕಾಲ ತಳ್ಳುತ್ತಿದೆ. ಆಡಳಿತ ಯಂತ್ರ ಬಳಸಿ ಕೋಮುವಾದಿ ಫ್ಯಾಶಿಸ್ಟ್ ಮಾದರಿಗಳ ಮೂಲಕ ಪ್ರಜಾಸತ್ತೆಗೆ ವಿರೋಧಿಯಾದ ಫ್ಯಾಸಿಸ್ಟ್ ಮನೋಭಾವದ ಮೌಲ್ಯಗಳ ವಿಸ್ತರಣೆಗಳ ತೊಡಗಿದ್ದು, ಆರ್.ಎಸ್.ಎಸ್. ಇದರ ಹಿಂದಿನ ಮುಖ್ಯ ಚಾಲಕವಾಗಿದೆ. ಈ ಒಂಬತ್ತು ತಿಂಗಳಲ್ಲಿ ಸೌಹಾರ್ದ ಕರ್ನಾಟಕವನ್ನು ಕೋಮುದ್ವೇಷದ ಕುದಿವ ಕರ್ನಾಟಕವನ್ನಾಗಿಸಲು ಸಂಘ ಪರಿವಾರ ಬಿಜೆಪಿ ನಡೆಸಿರುವ ಪ್ರಯತ್ನಗಳನ್ನು ಎಲ್ಲರೂ ಕಂಡಾಗಿದೆ. ಈ ಲೋಕಸಭಾ ಚುನಾವಣೆಯಲ್ಲಿಯೂ ಹೇಗಾದರೂ ಅತ್ಯಧಿಕ ಸಂಸದರನ್ನು ಪಡೆಯಲು ಅಕ್ರಮ ಹಣ - ಆಮಿಷಗಳನ್ನು ಬಳಸುತ್ತಿರುವುದು, ಆಪರೇಷನ್ ಕಮಲ ಎಂದು ಇತರೆ ಪಕ್ಷದವರನ್ನು ಖರೀದಿಸುತ್ತಿರುವುದು, ಜಾತಿ-ಮಠಗಳ ಓಲೈಕೆಗೆ ಇಳಿದಿದೆ.

'ಮತ್ತೊಂದಡೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ವೈಫಲ್ಯ. ವಿಶೇಷವಾಗಿ ರಾಜ್ಯದಲ್ಲಿ ವಿರೋಧಪಕ್ಷವಾಗಿರುವ ಕಾಂಗ್ರೆಸ್ ಪಕ್ಷವ ಬಿಜೆಪಿಯನ್ನು ಅದರ ಕೋಮುವಾದವನ್ನು ಎದುರಿಸಲು ಸಿದ್ಧವಿಲ್ಲದಿರುವುದು ಎದ್ದು ಕಾಣುವಂತಹದ್ದು. ಮತ್ತು ಕಾಂಗ್ರೆಸ್ ವೈಫಲ್ಯಗಲೇ ಬಿಜೆಪಿ ಬೆಳವಣಿಗೆ ಕಾರಣವಾಗುತ್ತಿರುವುದು.

ಇಂತಹ ಒಟ್ಟು ಸಂದರ್ಭದಲ್ಲಿಯೇ ಜೆಡಿ(ಎಸ್) ಮತ್ತು ಎಡಪಕ್ಷಗಳು ಮೂರನೇಯ ರಂಗದ ಭಾಗವಾಗಿ ಹೋರಾಟಕ್ಕೆ ಇಳಿದಿರುವುದು ಪ್ರಸ್ತುತವಾಗಿದೆ. ಈ ದಿಕ್ಕಿನಲ್ಲಿ ದೇಶದಲ್ಲಿ ಮೂರನೇಯ ರಂಗದ ಅಸ್ತಿತ್ವ ಹಾಗೂ ಹೋರಾಟವನ್ನು ಸಾರಲು ಇದೇ 12 ರಂದು ತುಮಕೂರಿನಲ್ಲಿ ಬೃಹತ್ ರ್‍ಯಾಲಿ ನಡೆಸುತ್ತಿರುವುದು ಕರ್ನಾಟಕವನ್ನೇ ಅದಕ್ಕಾಗಿ ಆಯ್ಕೆ ಮಾಡಿರುವುದು ಸೂಕ್ತವಾಗಿದೆ. ಕೋಮುವಾದಿಗಳ ಮುನ್ನಡೆಗೆ ತಡೆಯೊಡ್ಡುವ ನಿಟ್ಟಿನಲ್ಲಿ ಈ ಯತ್ನ ಯಶಸ್ವಿಗೊಳ್ಳಬೇಕು. ಸಾಮ್ರಾಜ್ಯಶಾಹಿಗಳಿಗೆ ಭಾರತ ಅಡಿಯಾಳಾಗದಂತೆ ನೋಡಬೇಕು. ಈ ರಂಗವು ಸಾರ್ವತ್ರಿಕ ಚುನಾವಣೆಯ ಫಲಿತಾಂಶದಲ್ಲಿಯೂ ಗಮನಾರ್ಹ ಬೆಳವಣಿಗೆ ಸಾಧಿಸಲು ಸಾಧ್ಯ. ಈ ಪ್ರಕ್ರಿಯೆಯ ಯಶಸ್ವಿಗೆ ಎಲ್ಲಾ ಪ್ರಜಾಸತ್ತಾತ್ಮಕ 'ಪ್ರಗತಿಪರ' ಜಾತ್ಯಾತೀತ ಶಕ್ತಿಗಳ ಕೈಜೋಡಿಸಿ ಬೆಂಬಲಿಸಬೇಕು. ಮೂರನೇಯ ರಂಗವೇ ಮೊದಲ ರಂಗವಾಗಿ ನಿಲ್ಲುವುದರಲ್ಲಿ ಅನುಮಾನವಿಲ್ಲ.

ಬೆಂಗಳೂರಿನ ಕ್ರೈಂ ಹೊಣೆ ಯಾರ ಹೆಗಲಿಗೆ?



'ಬೆಂಗಳೂರು ಕ್ರೈಂ ಸಿಟಿ ಆಗುತ್ತಿದೆಯೇ'? ಇದು ಜನರನ್ನು ಕಾಡುತ್ತಿರುವ ಪ್ರಶ್ನೆ. ಯಾಕೆಂದರೆ ದಿನವೂ ಒಂದಲ್ಲೊಂದು ಪ್ರದೇಶದಲ್ಲಿ ಮನೆಗಳಲ್ಲಿ, ಹಾದಿಯಲ್ಲಿ ದೌರ್ಜನ್ಯ, ಹತ್ಯೆಗಳು, ಲೂಟಿ-ದರೋಡೆಗಳು, ಅಪಹರಣ, ಸುದ್ದಿ ಕೇಳಿದವರಿಗೆ, ದೃಶ್ಯ ಕಂಡವರಿಗೆ ಆತಂಕ ಬರದೇ ಇರಲು ಸಾಧ್ಯವೇ? ಮಹಿಳೆಯರು, ಒಂಟಿ ಗೃಹಿಣಿ, ವೃದ್ಧೆಯರು, ವ್ಯಾಪಾರಿಗಳು, ಸಾಮಾನ್ಯ ನೌಕರರು, ಯುವತಿಯರು ಹೀಗೆ ಅವರನ್ನು ಆತಂಕ ಕಾಡದೇ ಬಿಡುವುದಿಲ್ಲ. 38 ದಿನಗಳಲ್ಲಿ 28 ಕೊಲೆಗಳು ಬೆಳಕಿಗೆ ಬಂದ ಇತ್ತೀಚಿನ ಅಂಕಿ-ಅಂಶಗಳು. ಹೀಗಿರುವಾಗ ಈ ಮಾತನ್ನು ರಾಜ್ಯ ಗೃಹಸಚಿವರು ಒಪ್ಪಲು ಸಿದ್ಧರಿಲ್ಲ. ಅದಕ್ಕೂ ಹೆಚ್ಚಾಗಿ ಬೆಂಗಳೂರು ನಗರದ ಪೋಲಿಸ್ ಕಮೀಷನರ್ ಶಂಕರ್ ಬಿದರಿ ಸುತರಾಂ ಒಪ್ಪುವುದೇ ಇಲ್ಲ. ಒಪ್ಪಿದರೆ ಅಥವಾ ಭಾಗಶಃವಾದರೂ ಒಪ್ಪಿದರೆ ಕಾನೂನು ಸುವ್ಯವಸ್ಥೆ, ಆಡಳಿತದ ದಕ್ಷತೆಯ ಪ್ರಶ್ನೆ ಏಳುತ್ತದೆ ಅಲ್ಲವೇ? ಅವರದೇನಿದ್ದರೂ ಇಂತಹ ಪ್ರಶ್ನೆಗಳು ಎದುರಾದಾಗ ನಿರಾಕರಣೆಯೇ, ನಿರಾಕರಣೆಯೇ ಅಧಿಕಾರಸ್ಥರಿಗೆ ಸುರಕ್ಷತೆ ಅಲ್ಲವೇ?

ಸಿದ್ಧ ಉತ್ತರ

ಪ್ರತಿಯೊಂದಕ್ಕೂ ಅವರಲ್ಲಿ ಸಿದ್ಧ ಉತ್ತರವಿದೆ. "ನೋಡಿ ಕಳೆದ ವರ್ಷ ಇಷ್ಟೊತ್ತಿಗೆ ನಡೆದಿದ್ದ ಕ್ರೈಂಗಳ ಪ್ರಮಾಣ ಈ ವರ್ಷಕ್ಕೆ ಹೋಲಿಸಿದರೆ ಕಡಿಮೆ. ಅದ್ಹೇಗ್ರಿ ಹೇಳುತ್ತೀರಿ ಹೆಚ್ಚಾಗಿದೆ ಎಂದು? ಇದೆಲ್ಲಾ ಮಾಧ್ಯಮದವರ ಸೃಷ್ಟಿಗಳು" ಸಾಕಲ್ಲ! ಇನ್ನೂ ಕಳೆದ ವರುಷದ ಕ್ರೈಂನ ಮಟ್ಟವಿಲ್ಲ. ಆದ್ದರಿಂದ ನಿಟ್ಟುಸಿರು ಬಿಟ್ಟು ಜನ ನೆಮ್ಮದಿಯಿಂದ ನಿದ್ದೆ ಹೋಗಬಹುದು. ಪ್ರಮಾಣ ದಾಟಿದ ಮೇಲೆ ನೋಡಿಕೊಂಡರಾಯಿತು!?

ಇತ್ತೀಚಿಗೆ ನಾಲ್ಕಾರು ದಿನಗಳಲ್ಲೇ ಮೂರು ಯುವತಿಯರ ಮೇಲೆ ದಾಳಿಗಳು ನಡೆದವು. ಕಾರಣ ಒಂಬತ್ತರ ನಂತರ ಓಡಾಡುತ್ತಿದ್ದಾರೆಂದೂ ಜೀನ್ಸ್ ಬಟ್ಟೆ ಧರಿಸಿ ಭಾರತೀಯ ಸಂಸ್ಕೃತಿಯನ್ನು ಧಿಕ್ಕರಿಸಿದ್ದಾರೆಂದು 'ಸಂಸ್ಕೃತಿ ರಕ್ಷಕ'ರು ಛಾರ್ಜ್ ಶೀಟ್ ಹಾಕಿ ತೀರ್ಪು ನೀಡಿದ್ದರು. ಈ ಆಪರೇಷನ್ ಮುಂದುವರೆಸುವುದಾಗಿಯೂ ಅವರು ಹೇಳಿದ್ದಾರೆ. ಇದನ್ನು ಪ್ರತಿಭಟಿಸಿದ ಕೆಲವು ಪ್ರಗತಿಪರ ಸಂಘಟನೆಗಳ ಗೆಳೆಯರು ಕಮಿಷನರ್ ಕಛೇರಿ ಎದುರು ಪ್ರದರ್ಶನ ನಡೆಸಿ ಮನವಿ ಸಲ್ಲಿಸಿದ ಬಳಿಕ ಅವರ ಉತ್ತರ ಕೇಳಿ ಮೂರ್ಛೆ ಹೋಗುವುದೊಂದೇ ಬಾಕಿ. "ನೋಡಿ, ಬೆಂಗಳೂರು ಸುಸಂಸ್ಕೃತ ನಗರ, ರಸ್ತೆಗಳೂ ಸುರಕ್ಷಿತವೇ. ಮಹಿಳೆಯರನ್ನು ಪುರುಷರು ಗೌರವಿಸುತ್ತಾರೆ. ಅಂತಹವುಗಳು ನಡೆಯಲು ಅವಕಾಶವಿಲ್ಲ, ನಾನು ಮನೆಯಿಂದ ಆಫೀಸಿಗೆ ಬರುವ ರಸ್ತೆಯಲ್ಲಿ ಸೀರೆಯುಟ್ಟ ಯುವತಿಯರನ್ನು ನೋಡುವುದೇ ವಿರಳವಾಗಿದೆ. ನೀವೂ ಸರಿಪಡಿಸಿಕೊಂಡು ಹೋಗಬೇಕು. ದೂರು ಕೊಟ್ಟರೆ ನೋಡುತ್ತೇವೆ. ವಾಹನಗಳ ನಂಬರ್ ಕೊಡಿ" ಹೇಗಿದೆ ಸಮರ್ಥನೆ. ಅಂದರೆ ಕಾನೂನು-ಸುವ್ಯವಸ್ಥೆ ರಕ್ಷಕರಾದ ಇವರಿಗೆ ಏನೂ ಕೆಲಸವಿಲ್ಲ. ಸಂಸ್ಕೃತಿ ರಕ್ಷಕರು ಏನೂ ಮಾಡಿದರೂ ಅದು ಸುಸಂಸ್ಕೃತಿಯ ಭಾಗ. ಹೀಗಾಗಿ ಭಾರತೀಯ ಸಂಸ್ಕೃತಿ ಉಳಿಸುವ ಜವಾಬ್ದಾರಿ 'ಭಜರಂಗಿ ಪುಂಡರಿಗೆ ವಹಿಸಲಾಗಿದೆ' ಆ ಕೆಲಸಕ್ಕೆ ಬಿದರಿ ಹೆಗಲು ಕೊಡುವಂತಿದೆ. ಅವರು ಎಲ್ಲವನ್ನೂ ವಿಚಾರಿಸಿಕೊಳ್ಳುತ್ತಾರೆ. ಅದು ಸಮ್ಮತವೇ! ಪೋಲೀಸರಿಗೆ ಮಾಡಲು ಬೇರೆ ಕೆಲಸಗಳಿವೆ! ನಾಗರೀಕ ಆಸ್ತಿ, ಜೀವ ರಕ್ಷಣೆ ಹೊಣೆ ತಮಗಿಲ್ಲ! ಕಮಿಷನರ್ ವಾದ ವೈಖರಿ ನೋಡಿದರೆ ಇದು ಹೀಗೆ ಬೆಳೆಯುತ್ತಿದೆ.

ಕುಮ್ಮಕ್ಕು

ಇಂತಹದ್ದೇ ಮಾತನ್ನೇ ಅಲ್ಲವೇ ಗೃಹಸಚಿವರು ಮಂಗಳೂರಿನ ಪಬ್ ನೆಪದಲ್ಲಿ ಯುವತಿಯರ ಮೇಲೆ ಅಮಾನುಷವಾಗಿ ಧಾಳಿ ನಡೆಸಿದ್ದಾಗ ಹೇಳಿದ್ದು, ಶಾಸಕರೊಬ್ಬರ ಮಗಳನ್ನೇ ಅಪಹರಿಸಿ ಥಳಿಸಿದಾಗಲೂ 'ಅವರವರ ಮಕ್ಕಳನ್ನು ಅವರೇ ನೋಡಿಕೊಳ್ಳಬೇಕು. ಸರ್ಕಾರ ಪ್ರತಿಯೊಬ್ಬರನ್ನು ಕಾಯಲು ಸಾಧ್ಯವಿಲ್ಲ' ಎಂದು ಮುಖ್ಯಮಂತ್ರಿ, ಗೃಹ ಸಚಿವರೇ ಹೀಗೆ ಹೇಳಿದರೆ, ಅದರಂತೆ ಅವರೇ ನಡೆದುಕೊಂಡು ಕ್ರಿಮಿನಲ್‌ಗಳ ರಕ್ಷಣೆಗೆ ಹೊಸ ವ್ಯಾಖ್ಯಾನ ಹೇಳುತ್ತಾ ತಿರುಗಿದರೆ ಇನ್ನೂ ಅಧಿಕಾರಿಗಳ ಪಾಡೇನು? ಇನ್ನು ಕ್ರಿಮಿನಲ್‌ಗಳಿಗೆ ಕುಮ್ಮಕ್ಕು ಸಿಗದೆ.

ಕಡಿವಾಣ ಎಲ್ಲಿ

ಉದಾರೀಕರಣ, ವಿದೇಶಿ ಬಂಡವಾಳ ಮುಕ್ತ ಹರಿವು, ಐಟಿ-ಬಿಟಿ-ಸೇವೆಗಳು. ವಿಪರೀತ ಹೆಚ್ಚಾದ ಭೂ ಬೇಡಿಕೆ, ಅಕ್ರಮ ಭೂ ದಂಧೆಗಳು ಹಣದ ಹರಿದಾಟ - ಅನುಸರಿಸಿ ಬೆಳೆದ ಭೋಗ ಸಂಸ್ಕೃತಿ, ಶಿಥಿಲವಾದ ಸಾಮಾಜಿಕ ಸಂಬಂಧಗಳು, ಇನ್ನೊಂದು ಮಗ್ಗಲಲ್ಲಿ ನಿರುದ್ಯೋಗ, ಬಡತನ, ಅವಕಾಶ ವಂಚಿತತೆ, ಅತೃಪ್ತಿಗಳು.. ಹೀಗೆ ಸಮಾಜದಲ್ಲಿ ಅಪರಾಧ ಪ್ರವೃತ್ತಿಗಳನ್ನು ಬಂಡವಾಳವು ಬೆಳವಣಿಗೆಯಲ್ಲಿ ಅನಿವಾರ್ಯತೆಯನ್ನು, ಅಗತ್ಯವಾಗಿ ಅಪರಾಧ ಪ್ರವೃತ್ತಿಗಳಿಗೆ ಕಡಿವಾಣ ಹಾಕುವುದು ಸರ್ಕಾರದ ಹೊಣೆಯಾಗಿದೆ.

ಪುಟ 14 ಕ್ಕೆ

'ಕೇರಳ ಮಾದರಿಯಲ್ಲಿ ರೇಷನ್ ಒದಗಿಸಿ' - ಕೆ.ಆರ್.ಶ್ರೀಯಾನ್

ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ರೇಗಾ, ಮನೆ ನಿವೇಸನ, ಕೃಷಿ ಸಾಲ, ವಿದ್ಯುತ್, ದಲಿತರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಮಾರ್ಚ್ 4 ರಂದು ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಯಿತು.

ಪ್ರತಿಭಟನೆ ಉದ್ದೇಶಿಸಿ ಹಿರಿಯರೈತ ಕಾರ್ಮಿಕ ಮುಖಂಡರಾದ ಕೆ.ಆರ್. ಶ್ರೀಯಾನ್ ಮಾತನಾಡಿ, "ಮನೆ ನಿವೇಶನ ರಹಿತರಿಗೆ ನಿವೇಶನಕ್ಕಾಗಿ ಭೂಮಿ ಖರೀದಿ ಮಾಡಲು ಅಗತ್ಯವಿರುವ ಹಣವನ್ನು ಬಿಡುಗಡೆ ಮಾಡಬೇಕು. ಆದಾಯ ಘೋಷಣೆಯೊಂದಿಗೆ ನೆಮ್ಮದಿ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲರಿಗೂ ಶಾಶ್ವತ ಬಿಪಿಎಲ್ ರೇಷನ್ ಕಾರ್ಡ್ ವಿತರಿಸಬೇಕು. ಸದ್ಯದ ಯೂನಿಟ್ ಪದ್ಧತಿಯನ್ನು ರದ್ದುಗೊಳಿಸಿಚುನಾವಣೆ ಭರವಸೆಯಂತೆ ರೂಪಾಯಿ 2 ರೂ. ದರಲ್ಲಿ ಕುಟುಂಬಕ್ಕೆ ಕನಿಷ್ಟ 25 ಕೆ.ಜಿ. ಅಕ್ಕಿ ನೀಡಬೇಕು. ಕೇರಳದ ಮಾದರಿಯಲ್ಲಿ ಅಕ್ಕಿ, ಗೋಧಿ, ಸಕ್ಕರೆ ಜತೆಗೆ ಬೇಳೆ, ಅಡಿಗೆ ಎಣ್ಣೆ, ಅಗತ್ಯ ವಸ್ತುಗಳನ್ನೂ ನೀಡಬೇಕು" ಎಂದು ಒತ್ತಾಯಿಸಿದರು.

ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ರಾಮಚಂದ್ರ ಉಚ್ಚಿಲ್ ಮಾತನಾಡಿ 'ಅಡಿಕೆ ಬೆಳೆಗಾರರಿಗೆ ಘೋಷಣೆ ಮಾಡಿದ್ದ ಬೆಂಬಲ ಬೆಲೆ ನಿಜವಾಗಿಯೂ ಅಡಿಕೆ ಬೆಳೆಗಾರರಿಗೆ ಲಾಭವಾಗುವುದಿಲ್ಲ" ಎಂದು ವಿವರಿಸಿದರು.

ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಯಾಧವಶೆಟ್ಟಿ ಮಾತನಾಡಿ, "ಈಗಾಗಲೇ ನಮ್ಮ ಜಿಲ್ಲೆಯ ಬಡಜನರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದೇವೆ. ಸರ್ಕಾರ ಇದನ್ನು ಗಂಭಿರವಾಗಿ ಪರಿಗಣಿಸಬೇಕು. ಇಲ್ಲದಿದ್ದರೆ. ಚುನಾವಣಾ ನಂತರದ ದಿನಗಳಲ್ಲಿ ನಾವು ನಮ್ಮ ಬೇಡಿಕೆ ಈಡೇರುವವರೆಗೆ ಕದಲುವುದಿಲ್ಲ" ಎಂದು ಎಚ್ಚರಿಕೆ ನೀಡಿದರು.

ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ರೇಗಾ ಕೂಲಿಯನ್ನು ರೂಪಾಯಿ 150ಕ್ಕೆ ಏರಿಸಬೇಕು. ಮನೆ ನಿವೇಶನ ರಹಿತರಿಗೆ ನಿವೇಶನ ನೀಡಬೇಕು. ಮನೆ ನಿವೇಶನಕ್ಕಾಗಿ ಭೂಮಿ ಖರೀದಿ ಮಾಡಲು ಅಗತ್ಯವಿರುವ ಬಿಡುಗಡೆ ಮಾಡಬೇಕು. ಆದಾಯ ಘೋಷಣೆಯೊಂದಿಗೆ 'ನೆಮ್ಮದಿ' ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲರಿಗೂ ಶಾಶ್ವತ ಬಿಪಿಎಲ್ ರೇಷನ್ ಕಾರ್ಡ್ ನೀಡಬೇಕು. ತಾತ್ಕಾಲಿಕ ಚೀಟಿ ನೀಡುವುದನ್ನು ತಕ್ಷಣ ನಿಲ್ಲಿಸಬೇಕು. ಬಿಜೆಪಿಯ ಚುನಾವಣಾ ಭರವಸೆಯಂತೆ ಬಿಪಿಎಲ್ ರೇಷನ್ ಕಾರ್ಡ್ ಪಡೆಯಲು ಆದಾಯ ಮಿತಿಯನ್ನು ರೂಪಾಯಿ 30 ಸಾವಿರಕ್ಕೆ ಏರಿಸಬೇಕು. ಅದು ಈಗಿನ ವಿಪರೀತ ಬೆಲೆ ಏರಿಕೆ ಮತ್ತು ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಈ ಆದಾಯ ಮಿತಿಯನ್ನು ರೂಪಾಯಿ 50 ಸಾವಿರಕ್ಕೆ ಏರಿಸಬೇಕು. ಸದ್ಯದ ಯೂನಿಟ್ ಪದ್ಧತಿಯನ್ನು ರದ್ದು ಮಾಡಬೇಕು ಹಾಗೂ ಚುನಾವಣಾ ಭರವಸೆಯಂತೆ ರೂಪಾಯಿ 2 ರ ದರದಲ್ಲಿ ಕುಟುಂಬಕ್ಕೆ ಕನಿಷ್ಠ 25 ಕೆ.ಜಿ. ಅಕ್ಕಿ ನೀಡಬೇಕು. ಕೇರಳ ಮಾದರಿಯಲ್ಲಿ ಅಕ್ಕಿ, ಗೋಧಿ, ಸಕ್ಕರೆ ಜೊತೆಗೆ ಬೇಳೆ, ಅಡಿಗೆ ಎಣ್ಣೆ, ಅಗತ್ಯ ವಸ್ತುಗಳನ್ನು ನೀಡಬೇಕು,



ಕೆ.ಆರ್.ಶ್ರೀಯಾನ್ ಮಾತನಾಡುತ್ತಿರುವುದು

ಸಾರ್ವತ್ರಿಕ ರೇಷನ್ ವ್ಯವಸ್ಥೆ ಜಾರಿಗೆ ತರಬೇಕು ಎಂದು ಪ್ರತಿಭಟನಾಕಾರರು ಸರ್ಕಾರವನ್ನು ಆಗ್ರಹಿಸಿದರು.

ಇತರ ಬೇಡಿಕೆಗಳು

1. ಪುರಸಭೆ, ತಾಲ್ಲೂಕು, ಗ್ರಾಮ ಪಂಚಾಯತ್‌ಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಜನರಿಗೆ ಮೀಸಲಿಟ್ಟ ಶೇ.18 ನಿಧಿಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು.
2. ಶೇ.3 ರ ಬಡ್ಡಿ ದರದಲ್ಲಿ ರೈತರಿಗೆ, ವಿಶೇಷವಾಗಿ ಸಣ್ಣ ರೈತರಿಗೆ ಅಗತ್ಯವಿರುವಷ್ಟು ಬ್ಯಾಂಕುಗಳು ಸಾಲ ನೀಡಬೇಕು.
3. ಗ್ರಾಮೀಣ ಪ್ರದೇಶದ ಪ್ರತಿ ಬ್ಯಾಂಕ್ ಶಾಖೆಗಳು ಪ್ರತಿ ವರ್ಷ ಕನಿಷ್ಠ 1000 ಜನ ರೈತರಿಗೆ ಸಾಲ ನೀಡಬೇಕು.
4. ಡಿಕ್ಲರೇಷನ್ ಕೊಡಲು ಸಾಧ್ಯವಾಗದ ಸಾಗುವಳಿದಾರರಿಗೆ ಸ್ವಾಧೀನವಿರುವ ಭೂಮಿಗೆ ಪುನಃ ಡಿಕ್ಲರೇಷನ್ ಕೊಡಲು ಅವಕಾಶ ಮಾಡಿಕೊಡಬೇಕು. ಈಗಾಗಲೇ ಫಾರಂ ನಂ.50 ಮತ್ತು 53 ರಲ್ಲಿ ಪಡೆದ 30 ಸಾವಿರ ಅರ್ಜಿಯನ್ನು ತಕ್ಷಣ ಇತ್ಯರ್ಥಪಡಿಸಿ ಪಟ್ಟಾ ನೀಡಬೇಕು.
5. ಜಿಲ್ಲೆಯಲ್ಲಿ ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 94ಸಿಯಲ್ಲಿ ಹಕ್ಕು ಪತ್ರ ಸಮಂಜಸವಾಗಿಲ್ಲ. ಅದನ್ನು ಮರು ಪರಿಶೀಲಿಸಿ ಸ್ವಾಧೀನವಿದ್ದ ಎಲ್ಲ ಜಾಗಕ್ಕೂ ಹಕ್ಕು ಪತ್ರ ನೀಡಬೇಕು.
6. ರೈತರಿಗೆ ಪಹಣಿ ಪತ್ರ (ಆರ್.ಟಿ.ಸಿ.) ತಾಲ್ಲೂಕು ಕಛೇರಿಯಲ್ಲಿ ಹೆಚ್ಚುವರಿ ಕಂಪ್ಯೂಟರ್ ಒದಗಿಸಬೇಕು.
7. ಮೂಲಗೇಣಿದಾರರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಮಧ್ಯೆ ಪ್ರವೇಶಿಸಬೇಕು.
8. ತಾಲ್ಲೂಕು ಕಛೇರಿಯಲ್ಲಿ ನಡೆಯುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು.
9. ರೈತರ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ಷರತ್ತು ರಹಿತವಾಗಿ ಜಾರಿಯಾಗಬೇಕು. ದಿನದಲ್ಲಿ ಕನಿಷ್ಠ 12 ಗಂಟೆ ಮೂರು ಫೇಸ್‌ನ ವಿದ್ಯುತ್ ನೀಡಬೇಕು. ಪಂಪ್‌ಸೆಟ್ ಉಪಯೋಗಿಸುವ ರೈತರಿಗೆ ಸೀಮೆಎಣ್ಣೆ ಒದಗಿಸಬೇಕು.

ಹೇಳುವುದು ಒಂದು, ಮಾಡುವುದು ಮತ್ತೊಂದು

ಕ್ಯಾತೆ

ಶ್ರೀ

"ಸಾರ್, ಇವತ್ತು ನೀವು 'ಯಾವುದೇ ಕಾರಣಕ್ಕೂ ವಿದ್ಯುತ್ ಕಡಿತ ಇಲ್ಲ' ಅಂತ ಹೇಳ್ಬೇಕಾಗಿತ್ತು. ಆದರೆ ತಪ್ಪಿ 'ವಿದ್ಯುತ್ ಕಡಿತ ಅನಿವಾರ್ಯ' ಅಂತ ಹೇಳಿದ್ದೀರ ಎಂದು ಅಧಿಕಾರಿಗಳು ಇಂ- ದನ (ಕಾಯುವ) ಸಚಿವರಿಗೆ ವಿವರಿಸಿದರು".

"ಏನ್ರೀ ಅದು ಸುಮ್ ಸುಮ್ನೆ ಏನೇನೋ ಹೇಳಿ ನನಗೆ ಕನ್ ಫ್ಯೂಜ್ ಮಾಡಬೇಡಿ. ಏನು ಹೇಳಬೇಕೋ ಸರಿಯಾಗಿ ಹೇಳಿಕೊಡಿ".

"ನೋಡಿ ಸಾರ್ , ಒಂದು ದಿನ 'ವಿದ್ಯುತ್ ಕೊರತೆ ಇದೆ, ಲೋಡ್ ಶೆಡ್ಡಿಂಗ್ ಅನಿವಾರ್ಯ' ಅಂತ ಹೇಳಬೇಕು. ಮರುದಿನ, 'ಎಷ್ಟೇ ವಿದ್ಯುತ್ ಕೊರತೆ ಇದ್ದರೂ ಎಲ್ಲಿಂದಲಾದರೂ ತಂದು ವಿದ್ಯುತ್ ಪೂರೈಸುತ್ತೇವೆ. ಯಾವ ಕಾರಣಕ್ಕೂ ವಿದ್ಯುತ್ ಕಡಿತ ಇಲ್ಲ. ವಿದ್ಯಾರ್ಥಿಗಳಿಗೆ ಪರೀಕ್ಷೆ ಕಾಲದಲ್ಲಿ ಯಾವುದೇ ತೊಂದರೆ ಇಲ್ಲ. ರೈತರಿಗೆ ಅನಿಯಮಿತ ವಿದ್ಯುತ್ ಒದಗಿಸುತ್ತೇವೆ ಅಂತ ಹೇಳಬೇಕು."

"ಮತ್ತೆ ಇಷ್ಟುದ್ದಾ..., ಡೈಲಾಗ್ ಹೇಳ್ಕೊಡ್ತೀರಲ್ರೀ..., ಸಿಂಪಲ್ಲಾಗಿ ಹೇಳಿಕೊಡ್ರೀ..."

"ನೋಡಿ ಸಾರ್.., ಲೈಟಿನ ಸ್ವಿಚ್ಚು ಆಫ್ ಮತ್ತು ಆನ್ ಇರುತ್ತಲ್ಲ ಹಾಗೆ . ಒಂದಿನ ಪವರ್ ಕಟ್ ಇದೆ ಅನ್ನಿ. ಇನ್ನೊಂದಿನ ಇಲ್ಲ ಅನ್ನಿ. ಇದೆ ಅನ್ನಿ, ಇಲ್ಲ ಅನ್ನಿ. ಅಷ್ಟೇ ಸಿಂಪಲ್..."

"ಅಷ್ಟೇ ತಾನೇ.. ಸರಿ. ನೀವು ಹೇಳ್ಕೊಟ್ಟಂಗೇ ಹೇಳ್ತೀನಿ. ಇದೆ... ಇಲ್ಲ... ಇದೆ... ಇಲ್ಲ...? ಸರಿ ಏನ್ರೀ.."

"ಓ ಕೆ ಸಾರ್".

"ಅಲ್ಲರೀ... ವಿದ್ಯುತ್ ಕೊರತೆಗೆ ಕಾಂಗ್ರೆಸ್ ಕಾರಣ ಅಂತ ಮು. ಮಂತ್ರಿಗಳು ಹೇಳಿದ್ದಾರಲ್ರೀ... ಆ ಥರ ಬೈಯ್ಯೋ ಡೈಲಾಗ್ ಯಾವ್ದಾದ್ರೂ ಹೇಳ್ಕೊಡ್ರೀ... ನಾನೂ ಅವರಿಗಿಂತ ಚನ್ನಾಗಿ ಬೈತೀನಿ."

"ಏ ಅದೇನ್ ಪರವಾಗಿಲ್ಲ ಸರ್. ನಮ್ಮನ್ನ ಬಿಟ್ಟು ಬೇರೆ ಯಾರನ್ನಾದರೂ ಬೇಕಾದ ಹಾಗೆ ಬೈಕೊಂಡು ತಿರುಗಾಡ್ರೀ, ಇನ್ನೂ ಒಳ್ಳೇದ".

"ಕುಟುಂಬ ರಾಜಕಾರಣ, ಕುಟುಂಬ ರಾಜಕಾರಣ ಅಂತ ಕಟಕಿಯಾಡ್ತಾ ಕುಣಿದಾಡುತ್ತಿದ್ದೋರು, 'ಅಪ್ಪ- ಮಗ, ಅಪ್ಪ - ಮಗ' ಅಂತ ಅರಚಾಡುತ್ತಿದ್ದೋರು, ಈಗ ಮಾಡ್ತಿರೋದೇನು? 'ನಾವು ಎಷ್ಟೇ ವಿರೋಧಿಸಿದರೂ ಜನ ಕುಟುಂಬ ರಾಜಕಾರಣಕ್ಕೇ ಮಾನ್ಯತೆ ಕೊಡ್ತಿದ್ದಾರೆ ಅದಕ್ಕೇ' ಅಂತ ಡೈಲಾಗ್ ಹೊಡಿತಿದಾರೆ. 'ಮಚ್ಚು ಲಾಂಗು, ಹೊಡಿ ಬಡಿ ಸಿನಿಮಾಗಳನ್ನ, ಥರ್ಡ್ ರೇಟ್ ಸೆಕ್ಸ್ ಸಿನಿಮಾಗಳನ್ನ ತೆಗೆಯೋ ದರಿದ್ರ ರೀಮೇಕ್ ಸಿನಿಮಾಗಳನ್ನ ತೆಗೆಯೋ ಸಿನಿಮಾ ಮಂದಿನೂ ಇದೇ ಡೈಲಾಗ್ ಹೇಳೋದು: 'ಜನ ಇಂಥದ್ದನ್ನೇ ಬಯಸುತ್ತಾರೆ ಅದಕ್ಕೇ ಇಂಥ ಸಿನಿಮಾ ತಗೀತೀವಿ' ಅಂತ". (ಆದ್ರೆ, ಅಂಥ ಸಿನಿಮಾಗಳ ಗತಿ ಏನಾಗ್ತಿದೆ ಗೊತ್ತಲ್ಲ!).

ದೇವರಾಣೆಗೂ ಅಪ್ಪ-ಮಗ ನಿಲ್ಲಲ್ಲ ಅಂತಿದ್ದೋರು ಈಗ ಹೇಳ್ತಿರೋದೇನು? ಪಾಪ ಆ ದೇವರಿಗೆ ದೇವರೇ ಗತಿ. ಮುನ್ನೆಕ್ಕೆ ಯಾವ ದೇವರ ಮೇಲೆ ಆಣೆ ಅಂತ ಹೇಳಿಲ್ಲವಾದ್ದರಿಂದ ಮೂವತ್ತಮೂರು ಕೋಟಿ ದೇವತೆಗಳೂ ಅವರು ಹೇಳಿದ್ದು 'ನನಗಲ್ಲ' 'ನನಗಲ್ಲ' ಅಂದುಕೊಂಡು ಬಚಾವಾಗಬಹುದು. ಗೊತ್ತಾಯ್ತಲ್ಲ ಈಗ, ಇವರು ದೇವರ ಮೇಲೆ ಆಣೆ ಮಾಡಿ ಹೇಳಿದ್ರೂ ಅದರ ಬೆಲೆ ಏನು ಅಂತ. ರೈತರ ಮೇಲೆ ಪ್ರಮಾಣ , ದೇವರ ಮೇಲೆ ಆಣೆ ಎಲ್ಲ ಥಂ-ಢಮಾರ್!

ನೋಡಿದಿರಾ ನಮ್ಮ ಪಿತೃವಾಕ್ಯ ಪರಿಪಾಲಕ ರಾಮನ ಪಕ್ಷದ ಪಡಿಪಾಟಲನ್ನು. ಕುಡಿಯೋಕೆ ನೀರಿಲ್ಲದಿದ್ದರೂ ಪರವಾಗಿಲ್ಲ. ಗಂಗಾಜಲದ ತೀರ್ಥ ಸಿಗುತ್ತೆ. ಗೋ ಮೂತ್ರ ಸಿಗುತ್ತೆ. ತಿನ್ನೋಕೆ ಎರಡು ಹೊತ್ತು ಊಟ ಇಲ್ಲದಿದ್ರೂ ಪರವಾಗಿಲ್ಲ , ಲಡ್ಡು ಪ್ರಸಾದ ಸಿಗುತ್ತೆ. ಖರ್ಜೂರ ಸಿಗುತ್ತೆ(ಕೆಲವರಿಗೆ). ನಿರುದ್ಯೋಗ ಸಮಸ್ಯೆ ಇಲ್ಲ, ಹುಡುಗರು ಒಂದಲ್ಲಾ ಒಂದು ಧಾಳಿಗಳನ್ನು ಮಾಡಿಕೊಂಡು ಬದುಕಬಹುದು.!

ಶ್ರೀ ಕಪಿ ಸೇನೆಗೆ ಮಹಿಳಾ ದಿನಾಚರಣೆ ಬಗ್ಗೆ ಯಾಕೋ ಬಾಲ ಆಡಿಲ್ಲ! ಇಲ್ದಿದ್ರೆ, ಮಹಿಳಾ ದಿನಾಚರಣೆ ನಮ್ಮ ಸಂಸ್ಕೃತಿ ಅಲ್ಲ. ಮಹಿಳೆಯರು ಸ್ವಾತಂತ್ರ್ಯ, ಸಮಾನತೆಗಳ ಬಗ್ಗೆ ಮಾತನಾಡಬಾರದು. ಚಿಂತಿಸಲೂ ಬಾರದು ಅಂತ ಹೇಳಿ ಹಲ್ಲೆ ಮಾಡ್ತಿದ್ರೋ ಏನೋ! ಬಹುಶಃ ಪಿಂಕ್ ಚಡ್ಡಿ ಹೊಡೆತದಿಂದ ಸುಧಾರಿಸಿಕೊಳ್ಳುತ್ತಿದ್ದಾರೇನೋ!



'ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ಮೂರನೆಯ ರಂಗ'

- ಪರ್ಯಾಯ ಕಾರ್ಯಕ್ರಮ ಆಧಾರದಲ್ಲಿ ಜನತೆಯತ್ತ
- ಕರ್ನಾಟಕದಲ್ಲಿ ಕೋಮುವಾದಿ ಫ್ಯಾಸಿಸ್ಟ್ ಬಿಜೆಪಿ ವಿರುದ್ಧ ಸಮರ
- ಮಾರ್ಚ್ 12 ರಂದು ಕರ್ನಾಟಕದಿಂದಲೇ ರಂಗಕ್ಕೆ ಚಾಲನೆ
- ಜೆಡಿ(ಎಸ್) ಮತ್ತು ಎಡಪಕ್ಷಗಳ ಘೋಷಣೆ

ಜೆಪಿ ನೇತೃತ್ವದ ಎನ್.ಡಿ.ಎ ಮತ್ತು ಕಾಂಗ್ರೆಸ್ ತೃತ್ವ ಯುಪಿಎ ಪಕ್ಷಗಳಿಗೆ ಪರ್ಯಾಯವಾಗಿ ೂರನೆಯ ರಂಗವು ರೂಪುಗೊಳ್ಳುತ್ತಿದ್ದು ರ್ನಾಟಕದಲ್ಲಿಯೂ ಈ ಪ್ರಕ್ರಿಯೆಯನ್ನು ಲಗೊಳಿಸುವುದಾಗಿ ಜೆಡಿ(ಎಸ್) ಮತ್ತು ಡಪಕ್ಷಗಳ ನಾಯಕರು ಪ್ರಕಟಿಸಿದರು.

ಎನ್‌ಡಿಎ ಮತ್ತು ಯುಪಿಎ ಆಳ್ವಿಕೆಯಲ್ಲಿನ ೀತಿಗಳಿಂದಾಗಿ ರಾಷ್ಟ್ರದಲ್ಲಿ ಉಂಟಾಗಿರುವ ಕ್ಕಟ್ಟುಗಳಿಗೆ ಪರಿಹಾರ ರೂಪಿಸುವ ನೀತಿಗಳನ್ನು ರಿಗೆ ತರುವುದರೊಂದಿಗೆ ಪ್ರಬಲ ಶಕ್ತಿಯಾಗಿ ಳಿಸುವ ಸಂಕಲ್ಪವನ್ನು ಸಾರಿದರು.

ಇದೇ ಮಾರ್ಚ್ 12 ರಂದು ತುಮಕೂರಿನಲ್ಲಿ ಹತ್ ರ್‍ಯಾಲಿ ಮೂಲಕ ಈ ತೃತೀಯ ರಂಗವನ್ನು ಧಿಕೃತವಾಗಿ ಪ್ರಕಟಿಸಲಾಗುವುದು ಎಂದು ಮಾರ್ಚ್ ರಂದು ಜೆಡಿ(ಎಸ್) ಕಛೇರಿಯಲ್ಲಿ ನಡೆದ ತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ಜೆಡಿ(ಎಸ್) ರಾಷ್ಟ್ರನಾಯಕ, ಮಾಜಿ ಪ್ರಧಾನಿ ಚ್.ಡಿ.ದೇವೇಗೌಡ, ಕಾರ್ಯಾಧ್ಯಕ್ಷ .ನಾರಾಯಣಸ್ವಾಮಿ, ವಕ್ತಾರ, ಶಾಸಕ .ಎಸ್.ವಿ.ದತ್ತ, ಸಿಪಿಐ(ಎಂ) ನಾಯಕರಾದ ಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಾರ್ಯದರ್ಶಿ ಮಂಡಳಿ ಸದಸ್ಯರಾದ .ಎನ್.ನಾಗರಾಜ್, ಎಸ್.ವೈ.ಗುರುಶಾಂತ್, ಿಪಿಐ ನ ರಾಜ್ಯ ಕಾರ್ಯದರ್ಶಿ, ಸಿದ್ದನಗೌಡ ಾಟೀಲ, ಮುಖಂಡರಾದ ಎಂ.ಸಿ.ವೆಂಕಟರಾಮ್, ಹೆಚ್.ವಿ.ಅನಂತಸುಬ್ಬರಾವ್ ಮುಂತಾದವರು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು. ಇದಕ್ಕೂ ಮೊದಲು ಸಮಾಲೋಚನಾ ಸಭೆ ಜರುಗಿತು.

ಮಾಧ್ಯಮವನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಎನ್.ಡಿ.ಎ ಮತ್ತು ಯುಪಿಎ ಜನತೆಗೆ ಅನ್ಯಾಯ ಮಾಡಿದೆ. ದೇಶ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದೆ. ಮೂರನೇ ರಂಗವು ಮುಖ್ಯವಾಗಿ ಪರ್ಯಾಯ ಕಾರ್ಯಕ್ರಮ ರೂಪಿಸುವುದು. ಕರ್ನಾಟಕದಲ್ಲಿ ಕೋಮುವಾದಿ ಫ್ಯಾಸಿಸ್ಟ್ ಬಿಜೆಪಿಯನ್ನು ಸೋಲಿಸಿ ನೆಲಕಚ್ಚುವಂತೆ ಮಾಡುವುದು ನಮ್ಮ ಗುರಿ. ಕಾಂಗ್ರೆಸ್‌ನೊಂದಿಗೆ ನಮ್ಮ ಮೈತ್ರಿ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಕರ್ನಾಟಕದಿಂದಲೇ ಚಾಲನೆ ನೀಡಬೇಕೆಂಬ ಕಾರಣದಿಂದ ಇಲ್ಲಿಯೇ ಮೊದಲ ಸಮಾವೇಶ ನಡೆಸಲಾಗುತ್ತಿದೆ. ಇದರಲ್ಲಿ ನಾಲ್ಕರಿಂದ ಐದು ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು. ಈ ರ್‍ಯಾಲಿಯಲ್ಲಿ ಹೆಚ್.ಡಿ.ದೇವೇಗೌಡ, ಕುಮಾರಸ್ವಾಮಿಯವರಲ್ಲದೇ ಪ್ರಕಾಶ್ ಕಾರಟ್, ಸಿಪಿಐ ನ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ದನ್, ಆಂಧ್ರದ ಮಾಜಿ ಮುಖ್ಯಮಂತ್ರಿ ತೆಲುಗುದೇಶಂ ನಾಯಕ ಚಂದ್ರಬಾಬು ನಾಯ್ಡು, ತಮಿಳುನಾಡಿನ ಮಾಜಿ ಮುಖ್ಯಮಂತ್ರಿ, ಎಐಎಡಿಎಂಕೆ ನಾಯಕಿ ಡಾ. ಜಯಲಲಿತಾ ಮುಂತಾದವರು ಭಾಗವಹಿಸಲಿದ್ದಾರೆ. ಈ ಪಕ್ಷಗಳಲ್ಲದೇ ಮುಂದಿನ ದಿನಗಳಲ್ಲಿ ಇತರೆ ಪಕ್ಷಗಳೂ ರಂಗವನ್ನು ಸೇರಲಿವೆ. ಈಗ ಎನ್‌ಡಿಎ ಮತ್ತು ಯುಪಿಎ ಗೆ ಸ್ವಂತ ಬಲದಲ್ಲಿ ಅಧಿಕಾರ ರಚನೆ ಮಾಡುವ ವಿಶ್ವಾಸ ಉಳಿದಿಲ್ಲ. ಎನ್‌ಡಿಎ ಯಿಂದ ಅನೇಕ ಪಕ್ಷಗಳು ಹೊರಹೋಗುತ್ತಿವೆ ಎಂದು ದೇವೇಗೌಡರು ತಿಳಿಸಿದರು.

ಸೀಟು ಹಂಚಿಕೆ ವಿಷಯದಲ್ಲಿ ಎಲ್ಲ ಪಕ್ಷಗಳು ಕುಳಿತು ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದರು.

ಸಿಪಿಐ ರಾಜ್ಯ ಕಾರ್ಯದರ್ಶಿ ಡಾ. ಸಿದ್ದನಗೌಡ ಪಾಟೀಲ್ ಮಾತನಾಡಿ, ರಾಷ್ಟ್ರದಲ್ಲಿ ಒಂದೆಡೆ ಕೋಮುವಾದಿಗಳು ಮತ್ತು ಮತ್ತೊಂದೆಡೆ ಸಾಮ್ರಾಜ್ಯಶಾಹಿಗಳಿದ್ದಾರೆ. ಯುಪಿಎ ಇವರನ್ನು ಎದುರಿಸಲು ವಿಫಲವಾಗಿದೆ ಎಂದು ಟೀಕಿಸಿದರು.

ಮಾಜಿ ಶಾಸಕ ಶ್ರೀರಾಮರೆಡ್ಡಿ ಮಾತನಾಡಿ, ಬಹುತೇಕ ಸಂದರ್ಭದಲ್ಲಿ ಪರ್ಯಾಯ ಶಕ್ತಿ ಉದಯವಾಗಿರುವುದೇ ಕರ್ನಾಟಕದ ನೆಲದಲ್ಲಿ. ಆದ್ದರಿಂದ ಇಲ್ಲಿಯೇ ನಾವು ಸಮಾವೇಶ ಮಾಡುತ್ತಿದ್ದೇವೆ. ಎಂದರು.

ಜಿ.ಎನ್.ನಾಗರಾಜ್ ಮಾತನಾಡಿ, ಉತ್ತರ ಭಾರತದ ವಿವಿಧ ರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಹೊರತಾದ ಪಕ್ಷಗಳಿಗೆ ಶೇ.29 ರಷ್ಟು ಮತಗಳು ಬಂದಿವೆ. ಆದ್ದರಿಂದ ತೃತೀಯ ರಂಗಕ್ಕೆ ಇಲ್ಲಿ ಭವಿಷ್ಯವಿದೆ ಎಂದರು.

12 ರ ರ್‍ಯಾಲಿ ಪ್ರದೇಶ : ದಾಬಸ್‌ಪೇಟೆ ಬಳಿಯ ಮುಖ್ಯರಸ್ತೆ. (ಬೆಂಗಳೂರಿನಿಂದ ತುಮಕೂರಿಗೆ ಹೋಗುವ ಮಾರ್ಗದಲ್ಲಿ ಸಿಗುತ್ತದೆ)

ಸಮಯ : 11 ಗಂಟೆಗೆ ಆರಂಭಗೊಳ್ಳಲಿದೆ.

ಅಭೂತಪೂರ್ವ ರೀತಿಯಲ್ಲಿ ಜನ ಭಾಗವಹಿಸಲು ವಿನಂತಿಸಲಾಗಿದೆ.

ಮಾರ್ಚ್ 5 : ಅಂಗನವಾಡಿ ನೌಕರರ ರಾಜ್ಯವ್ಯಾಪಿಪ್ರತಿಭಟನೆ

ಉದ್ಯೋಗ ಭದ್ರತೆ, ಮಾಸಿಕ 6000 ರೂ., ್ಯಾಯಬದ್ಧ ವೇತನ, ನಿವೃತ್ತಿ ವೇತನ ಮುಂತಾದ ೇಡಿಕೆಗಳಿಗಾಗಿ ಅಂಗನವಾಡಿ ನೌಕರರು ಡೆಸುತ್ತಿರುವ ನಿರಂತರ ಹೋರಾಟಗಳು ರಾಜ್ಯ ್ಯಾಪಿ ಜನಜನಿತವಾಗಿವೆ. ಆದರೆ ಅಂಗನವಾಡಿ ೌಕರರ ಸಮಸ್ಯೆಗಳ ಕುರಿತು ನಿರ್ದಯ ನೀತಿ ನುಸರಿಸುವ ರಾಜ್ಯ ಕೇಂದ್ರ ಸರ್ಕಾರಗಳ ಧೋರಣೆ ಾತ್ರ ಬದಲಾಗಲಿಲ್ಲ. ರಾಜ್ಯ ಸರ್ಕಾರ ಇತ್ತೀಚಿನ ಜೆಟ್‌ನಲ್ಲಿ 55 ಕೋಟಿ ರೂಪಾಯಿ ಮೀಸಲಿಡಲು ಾಧ್ಯವಾಗಿದ್ದಿದ್ದರೆ ಅಂಗನವಾಡಿ ನೌಕರರಿಗೆ ಪಿಂಚಣಿ ೀಡಬಹುದಿತ್ತು. ಮಠ ಮಾನ್ಯಗಳಿಗೆ ಕೇಳಿದ್ದು, ೇಳದ್ದು, ಕೋಟಿ ಕೋಟಿ ರೂಪಾಯಿ ಾರೆಯರೆಯುವ ಯಡಿಯೂರಪ್ಪ ಸರ್ಕಾರಕ್ಕೆ ುಡಿಯುವ ಜನರೆಂದರೆ ಬಲು ಅಲರ್ಜಿ. ಈ ೋರಣೆಯನ್ನು ಖಂಡಿಸಿ ಮಾರ್ಚ್ 5, 2009 ಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಂಘದ ನೇತೃತ್ವದಲ್ಲಿ ರಾಜ್ಯವ್ಯಾಪಿ ಪ್ರತಿಭಟನೆಗಳು ನಡೆದಿವೆ.

ಬೆಂಗಳೂರಿನಲ್ಲಿ ಗ್ರಾಮಾಂತರ ಜಿಲ್ಲಾ ಪಂಚಾಯತ್ ಕಛೇರಿ ಆವರಣದಲ್ಲಿ ಸೇರಿದ ನೂರಾರು ಅಂಗನವಾಡಿ ಮಹಿಳೆಯರು ಕಛೇರಿಗೆ ಮುತ್ತಿಗೆ ಹಾಕಿದರು. ಬೀದರ್, ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಕೊಪ್ಪಳ, ಗದಗ್, ಉತ್ತರ ಕನ್ನಡ ಜಿಲ್ಲೆ, ಬಾಗಲಕೋಟೆ, ಬೆಳಗಾಂ, ಹಾಸನ, ಮೈಸೂರು, ಮಂಡ್ಯ, ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ, ಬಿಜಾಪುರ ಮುಂತಾದ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.

ಒಂದೊಂದು ಕಡೆಯೂ 600-700 ರಿಂದ ಸುಮಾರು 2000 ನೌಕರರು ಜಿಲ್ಲಾ ಪಂಚಾಯತ್ ಕಛೇರಿ ಮುತ್ತಿಗೆಯಲ್ಲಿ ಪಾಲ್ಗೊಂಡಿದ್ದಾರೆ. ಉತ್ತರ ಕನ್ನಡ, ಬೆಳಗಾಂ ಮುಂತಾದ ಜಿಲ್ಲೆಗಳಲ್ಲಿ ಪ್ರತಿಭಟನಾಕಾರರು ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಿ ಜಿಲ್ಲಾ ಪಂಚಾಯತ್ ಕಛೇರಿ ಒಳಗೆ ಸಹ ಪ್ರವೇಶಿಸಿ ಆಡಳಿತಕ್ಕೆ ಚುರುಕು ಮುಟ್ಟಿಸಿದರು.


ಕೇಂದ್ರ ಸರ್ಕಾರ ಐಸಿಡಿಎಸ್ ಯೋಜನೆಗೆ ನೀಡುವ ಅನುದಾನವನ್ನು ಕಡಿತಗೊಳಿಸಿದೆಯಂತೆ. ಯಾಕೆಂದರೆ ಅಂಗನವಾಡಿಗಳ ಪ್ರಯೋಜನ ಪಡೆಯುತ್ತಿರುವ ಕುಟುಂಬಗಳಲ್ಲಿ ಶೇ.60 ಕುಟುಂಬಗಳಿಗೆ ಸರಾಸರಿ 11 ಎಕರೆ ಜಮೀನು ಇದೆ ಎಂದು ವಿಶ್ವ ಸಂಸ್ಥೆಯ ವರದಿಯೊಂದು ತಿಳಿಸಿದೆಯಂತೆ. ಸರಿ ಇನ್ನೇನು ಅನುದಾನ ಕಡಿತ ತೀರ್ಮಾನ ಆಗೇಬಿಟ್ಟಿತು. ನೌಕರರು ಕೇಂದ್ರ ಸರ್ಕಾರದ ಈ ಧೋರಣೆಯನ್ನು ಕೂಡ ಖಂಡಿಸಿದರು.

ತುಮಕೂರಿನಲ್ಲಿ ಅಂಗನವಾಡಿ ನೌಕರರಿಂದ ಜಿಲ್ಲಾ ಪಂಚಾಯತ್ ಕಛೇರಿ ಮುತ್ತಿಗೆ



ಬಿಸಿಯೂಟ ನೌಕರರ ಹೋರಾಟ

ಬಿಸಿಯೂಟ ನೌಕರರ ಬದುಕೇ ಅತಂತ್ರ. ಸೇವಾ ಭದ್ರತೆ, ಕನಿಷ್ಠ ಕೂಲಿ, ಏನೊಂದೂ ಇಲ್ಲ. ಸರ್ಕಾರದಿಂದ ಯೋಜನೆಯನ್ನು ಖಾಸಗೀಕರಿಸುವ ಸತತ ಯತ್ನ, ಕಾರ್ಮಿಕರಿಂದ ಅದಕ್ಕೆ ಪ್ರತಿರೋಧ. ಮಾರ್ಚ್ 5 ರಂದು ಅವರೂ ಹೋರಾಟಕ್ಕಿಳಿದರು. ಹಾಸನ, ರಾಯಚೂರು, ಮೈಸೂರು, ಮಂಡ್ಯ, ಮುಂತಾದ ಜಿಲ್ಲೆಗಳಲ್ಲಿ ಬಿಸಿಯೂಟ ನೌಕರರು ಅಂಗನವಾಡಿ, ಪಂಚಾಯ್ತಿ ನೌಕರರೊಂದಿಗೆ ಸೇರಿ ಪ್ರತಿಭಟಿಸಿದರು. ಉತ್ತರ ಕನ್ನಡ, ತುಮಕೂರುಗಳಲ್ಲಿ ಪ್ರತಿಭಟನೆ ನಡೆದಿದೆ. ರಾಯಚೂರಿನಲ್ಲಿ ಬಿಸಿಯೂಟ ಅಂಗನವಾಡಿ ನೌಕರರು ಒಟ್ಟು ಸುಮಾರು 1000 ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಚಿತ್ರದುರ್ಗದಲ್ಲಿ ಒಂದು ತಾಲ್ಲೂಕಿನಲ್ಲಿ ಪ್ರತಿಭಟನೆ ನಡೆದಿದೆ.



ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿದ್ದ ಅನಿಷ್ಟ ಬಹಿಷ್ಕಾರ ಪದ್ಧತಿಗೆ ಸೆಡ್ಡು ಹೊಡೆದು ದಲಿತ ಯುವಜನ ದೇವಸ್ಥಾನ ಪ್ರವೇಶ ಚಳುವಳಿಗೆ ಮುಂದಾಗಿ ಯಶಸ್ವಿಯೂ ಆಗಿದ್ದಾರೆ.

ಸಂಪ್ರದಾಯಕ್ಕೆ ಸಡ್ಡುಹೊಡೆದ ದಲಿತ ಯುವಜನ

ಬೆಳ್ತಂಗಡಿ ತಾಲ್ಲೂಕಿನ ಮೊಗ್ರು ಗ್ರಾಮದ ಮುಗೇರಡ್ಕ ಎಂಬ ಪುಟ್ಟ ಹಳ್ಳಿ ತುಳುನಾಡಿನ ಭೂತರಾಧನೆಗೆ ಎಷ್ಟು ಖ್ಯಾತಿಯೋ ಅಷ್ಟೇ ಬಹಿಷ್ಕಾರವೆಂಬ ಸಾಮಾಜಿಕ ಅನಿಷ್ಟವೆಂಬ ಪದ್ಧತಿಗೆ 'ಕು'ಖ್ಯಾತಿ ಗಳಿಸಿದೆ.

ಈ ಗ್ರಾಮ ಭೂಮಾಲಿಕ ಒಕ್ಕಲಿಗರೇ ಹೆಚ್ಚಿರುವ ಗ್ರಾಮ. 'ಕುಮಾರಧಾರ' ನದಿ ತಟದಲ್ಲಿರುವ ಸರ್ಕಾರಿ ಭೂಮಿಯಲ್ಲಿ ದೈವಸ್ಥಾನ ಸ್ಥಾಪಿಸಿ ಭೂತಾರಾಧನೆಯ ಹೆಸರಿನಲ್ಲಿ ಪ್ರತಿ ವರ್ಷ ಜನ ಜಾತ್ರೆ ನಡೆಸಿಕೊಂಡು ಬರಲಾಗುತ್ತಿದೆ. ಈ ದೈವಸ್ಥಾನ ಈ ಗ್ರಾಮದ 65 ಒಕ್ಕಲಿಗ ಕುಟುಂಬಗಳ 'ಕೂಡುಕಟ್ಟಿಗೆ' ಒಳಪಟ್ಟದ್ದಾಗಿದೆ. ಇದರ ಪ್ರಧಾನ ಉಸ್ತುವಾರಿಕೆ ಅಂತರ ಬಾಲಕೃಷ್ಣ ಹಾಗೂ ದೇವಸ್ಯ ರಾಮಣ್ಣ ಎಂಬ ಭೂಮಾಲಿಕರ ಕೈಯಲ್ಲಿದೆ. ಜಾತ್ರೆ ನೇಮೋತ್ಸವಕ್ಕೆ 'ಧರಿ ಹಾಕುವ' ವಿಚಾರದಲ್ಲಿ ಜಾಲ್ನಡೆ ಶಿವಣ್ಣ ಗೌಡರನ್ನು ಪ್ರಥಮವಾಗಿ ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಲಾಯಿತು. ನಂತರದ ದಿನಗಳಲ್ಲಿ ಶಿವಣ್ಣ ಗೌಡರೊಂದಿಗೆ ಸಂಪರ್ಕ ಸಾಧಿಸಿದವರನ್ನೂ ವ್ಯವಹಾರ ಮಾಡಿದವರನ್ನೂ ಅವರ ಮನೆಯಲ್ಲಿ ನೀರು ಕುಡಿದವರನ್ನೂ, ಮನೆಗೆ ಕೆಲಸಕ್ಕೆ ಹೋದವನನ್ನೂ 'ಬಹಿಷ್ಕಾರ'ವೆಂಬ ಶಿಕ್ಷೆಗೆ ಒಳಪಡಿಸಲಾಯಿತು.

ಈ ವಿಚಿತ್ರ 'ಬಹಿಷ್ಕಾರ'ಕ್ಕೆ ಒಳಗಾದವರಲ್ಲಿ 'ಹಿಂದುತ್ವ'ದ ಗುತ್ತಿಗೆದಾರ ಬಿ.ಜೆ.ಪಿ.ಯ ಹಾಲಿ ಪಂ.ಸದಸ್ಯ ದಿನಕರ ಗೌಡರು ಸೇರಿದ್ದಾರೆ. ಇವರ ತಪ್ಪೇನೆಂದರೆ ಜಾತ್ರೆ ಸಮಯ ಸೇರಿದಂತೆ ಪ್ರತಿವರ್ಷ ಇಲ್ಲಿ ಸೇರುವ ಹುಂಡಿ ಕಾಣಿಕೆ ಹಣದ ಲೆಕ್ಕಪತ್ರ ಕೇಳಿದ್ದು. ಈ ಎರಡು ಕುಟುಂಬಗಳ ಜೊತೆ ವಿವಿಧ ರೀತಿಯಲ್ಲಿ ಸಂಪರ್ಕ ಸಾಧಿಸಿದ ಕಾರಣಕ್ಕೆ ಇತರ 10 ಒಕ್ಕಲಿಗ ಕುಟುಂಬಗಳನ್ನು ಈ ಅಮಾನುಷ ಶಿಕ್ಷೆಗೆ ಒಳಪಡಿಸಲಾಯಿತು. ಹೀಗೆ 'ಬಹಿಷ್ಕಾರ'ಕ್ಕೊಳಗಾದ ಕುಟುಂಬಗಳು ಒಟ್ಟಾಗಿ ಮುಜರಾಯಿ ಇಲಾಖೆಗೆ, ಜಿಲ್ಲಾಡಳಿತಕ್ಕೆ, ಪೋಲೀಸ್ ಇಲಾಖೆಗೆ, ಜನಪ್ರತಿನಿಧಿಗಳಿಗೆ ದೂರಿದರು. ನ್ಯಾಯಾಲಯದ ಮೆಟ್ಟಿಲು ಹತ್ತಿದರು. ಆದರೆ ಪರಿಹಾರ ಸಿಕ್ಕಿರಲಿಲ್ಲ.

ಈ ಸಮಸ್ಯೆ ನಿವಾರಿಸುವುದು ಶಾಸಕರುಗಳಿಗೆ, ಸ್ಥಳೀಯ ವಿವಿಧ ಪಕ್ಷಗಳ ನಾಯಕರುಗಳಿಗೆ, ಕಷ್ಟವಾಗಿರಲಿಲ್ಲ. ಆದರೆ ನ್ಯಾಯಯುತವಾಗಿ ಮುಗಿಸುವುದು ಇವರಿಗೆ ಬೇಕಾಗಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಓಟು ಬ್ಯಾಂಕ್‌ಗೆ ಹೊಡೆತ ಬೀಳುವ ಭೀತಿ! ಜನಪ್ರತಿನಿಧಿಗಳ ಭೀತಿ ಈ ರೀತಿಯಾದರೆ ಅಧಿಕಾರಿ ದೇವರುಗಳನ್ನು ದೈವಸ್ಥಾನದ ಉಸ್ತುವಾರಿಗಳ ಕುರುಡು ಕಾಂಚಾಣ ಬಾಯಿಗೆ ಬೀಗ ಹಾಕಿತ್ತು! ಅಂತೂ ಇಂತೂ ಮೊಗ್ರು ಗ್ರಾಮ ಕಳೆದ 20 ವರ್ಷಗಳಿಂದ 'ಬಹಿಷ್ಕಾರ' ವೆಂಬ ಅನಿಷ್ಟ ಪದ್ಧತಿಯಿಂದ ನಲುಗುವಂತಿತ್ತು.

ದಲಿತ ಕುಟುಂಬಕ್ಕೂ ಬಹಿಷ್ಕಾರ :

ಮುಗೇರಡ್ಕ ದೈವಸ್ಥಾನದಲ್ಲಿ ಪ್ರತಿವರ್ಷ ನಡೆಯುವ ವಾರ್ಷಿಕ ನೇಮೋತ್ಸವದ ಸಂದರ್ಭ ಮೊಗ್ರು ಗ್ರಾಮದ ಕೊಳಬ್ಬೆ ನಿವಾಸಿ ದಿ. ಕೆಂಪರವರು ಅನಾದಿ ಕಾಲದಿಂದಲೂ ತಮಟೆ (ಹಲಗೆ)ಭಾರಿಸುವ ಸೇವೆಯನ್ನು ಸಂಪ್ರದಾಯದಂತೆ ನಡೆಸಿಕೊಂಡು ಬರುತ್ತಿದ್ದರು. ಕೆಂಪರವರಿಗೆ ವಯಸ್ಸಾದ ಕಾರಣ ಅವರ ಮಗ ಸಿದ್ಧಪ್ಪರವರು ಈ ಕೆಲಸವನ್ನು ಮುಂದುವರೆಸಿಕೊಂಡು ಬರಬೇಕಾಗಿತ್ತಾದರೂ 1999 ರಲ್ಲಿ ನೇಮೋತ್ಸವದ ಸಂದರ್ಭ ಹಾವು ಕಚ್ಚಿ ಆಸ್ಪತ್ರೆಗೆ



ದಾಖಲಾಗಿದ್ದರು. ಈ ವರ್ಷ ತಮಟೆ (ಹಲಗೆ) ಸೇವೆ ನಡೆಯಲಿಲ್ಲ ಎಂಬ ಕಾರಣವೊಡ್ಡಿ ಆಡಳಿತದಾರರು ಸಿದ್ದಪ್ಪರವರ ಕುಟುಂಬವನ್ನೂ ಬಹಿಷ್ಕಾರವೆಂಬ ಕತ್ತಲ ಲೋಕಕ್ಕೆ ನೂಕಿದರು. ಅಂದಿನಿಂದ ಮೊಗ್ರು ಗ್ರಾಮದ ಬಹಿಷ್ಕೃತ 12 ಕುಟುಂಬಗಳನ್ನು ಹೊರತುಪಡಿಸಿ ಬೇರೆಲ್ಲೂ ಸಿದ್ಧಪ್ಪ ಕುಟುಂಬಕ್ಕೆ ಕೂಲಿ ಕೆಲಸ ನೀಡುವುದಿಲ್ಲ. ಕುಡಿಯಲು ನೀರು ಕೊಡುವುದಿಲ್ಲ. ಇವರ ಕುಟುಂಬ ಕೂಲಿ ಕೆಲಸಕ್ಕಾಗಿ ದೂರದೂರನ್ನು ಅವಲಂಬಿಸಿ ಜೀವನ ಸಾಗಿಸುತ್ತಿತ್ತು. ಹೆಂಡತಿ ಮತ್ತು ಇಬ್ಬರು ಗಂಡು ಮಕ್ಕಳೊಂದಿಗೆ ದಲಿತರೊಂದಿಗೆ ದಲಿತರಾಗಿಯೇ ದಿನ ದೂಡುತ್ತಿದ್ದರು. ಸಿದ್ದಪ್ಪರ ಬೆಳೆದು ನಿಂತ ಮಕ್ಕಳಲ್ಲಿ ಈ ಅಮಾನುಷ ಬಹಿಷ್ಕಾರ - ಅವಮಾನ ಪ್ರತಿಭಟನೆಯ ಕಿಚ್ಚನ್ನು ಹುಟ್ಟುಹಾಕಿದ್ದು, ಅದಕ್ಕೆ ಡಿವೈಎಫ್‌ಐ ಹಾಗೂ ಮಾಧ್ಯಮ ಪ್ರತಿನಿಧಿಗಳು ಬೆಂಬಲಿಸಿದರು. ಮುಂದಿನದು "ಶೋಷಿತರು ತೊಡೆತಟ್ಟಿ ಎದ್ದು ನಿಂತ ಕತೆ.

ದೈವಸ್ಥಾನ ಪ್ರವೇಶಕ್ಕೂ ಬಹಿಷ್ಕಾರ

ಬಹಿಷ್ಕೃತ 12 ಒಕ್ಕಲಿಗ ಕುಟುಂಬ ಸೇರಿದಂತೆ ದಲಿತರು, ಮಹಿಳೆಯರಿಗೂ ದೈವಸ್ಥಾನಕ್ಕೆ ಪ್ರವೇಶವಿಲ್ಲ. ಪತ್ರಕರ್ತರ ಕ್ಯಾಮರಕ್ಕೂ, ದೃಶ್ಯಮಾಧ್ಯಮಕ್ಕೂ ಇಲ್ಲಿ ಬಹಿಷ್ಕಾರವಿದೆ.

ಕಳೆದ 10 ವರ್ಷಗಳಿಂದ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿದ್ದ ಸಿದ್ಧಪ್ಪ ಎಂಬ ದಲಿತ ಕುಟುಂಬದ ಪಾಡು ಹೇಳತೀರದು. ಈ ಸಾಮಾಜಿಕ ಶೋಷಣೆಯಿಂದ ನಲುಗಿಹೋದ ಸಿದ್ಧಪ್ಪರವರ ಮಗ ಗಣೇಶ (25) ಇಡೀ ಊರಿನ ದಲಿತ ಯುವಕರೊಂದಿಗೆ ಮಾತುಕತೆ ನಡೆಸಿ, ದೈವಸ್ಥಾನ ಪ್ರವೇಶಿಸಲು ತೀರ್ಮಾನಿಸಿ ಸಾಮಾಜಿಕ ಹೋರಾಟಕ್ಕೆ ಚಾಲನೆ ನೀಡಿದರು. ಜನವರಿ 22 ರ ಜಾತ್ರೆಯ ದಿನ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿದ್ದ ದಲಿತ ಕುಟುಂಬದ ಯುವಕ ಗಣೇಶ ಸೇರಿದಂತೆ ಸುಮಾರು 25 ರಷ್ಟಿದ್ದ ದಲಿತ ಯುವಕರ ಗುಂಪು 50 ಸಾವಿರದಷ್ಟಿದ್ದ ಜನಜಾತ್ರೆಯ ಮಧ್ಯೆ ದೈವಸ್ಥಾನ ಪ್ರವೇಶಿಸಿದರು. ಈ ಸಂದರ್ಭ ಡಿವೈಎಫ್‌ಐ ಸಂಘಟನೆಯ ತಾಲ್ಲೂಕು ಕಾರ್ಯದರ್ಶಿ ಶೇಖರ.ಎಲ್ ಭಾಗವಹಿಸಿ ಬೆಂಬಲ ನೀಡಿ ಯುವಕರಿಗೆ ಧೈರ್ಯ ತುಂಬಿದರು. ಆಡಳಿತ ಸಮಿತಿ ದಲಿತರ ದೈವಸ್ಥಾನ ಪ್ರವೇಶಕ್ಕೆ ತಡೆ ಮಾಡುವಲ್ಲಿ ಸುಮಾರು 20 ರಷ್ಟು ಮಾಧ್ಯಮದ ಪ್ರತಿನಿಧಿಗಳು ಅಡ್ಡಿಯಾದರು. ಮಾಧ್ಯಮ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಯಾವುದೇ, ಅಡೆ, ತಡೆ ಇಲ್ಲದೆ ಪ್ರವೇಶ ನಡೆದು ರಾಜ್ಯದಾದ್ಯಂತ ಪ್ರಚಾರ ಪಡೆಯಿತು.

ಕೊನೆಗೂ ಎಚ್ಚೆತ್ತ ಅಧಿಕಾರಿ ವರ್ಗ

ದಲಿತ ಯುವಕರ ದೇವಸ್ಥಾನ ಪ್ರವೇಶ ಅಧಿಕಾರಿಗಳ ಕಣ್ಣು ತೆರೆಸಿತ್ತು. ಪ್ರಥಮ ಬಾರಿಗೆ ಬೆಳ್ತಂಗಡಿ ತಹಶೀಲ್ದಾರ್ ವೈ.ಎನ್.ಚಂದ್ರಮ್ಮರವರು ಸ್ಥಳಕ್ಕೆ ಭೇಟಿ ಬಹಿಷ್ಕೃತರ ಸಭೆ ನಡೆಸಿ ದೈವಸ್ಥಾನದ ಸ್ವಯಂ ಘೋಷಿತ ಆಡಳಿತದಾರರನ್ನೂ ತರಾಟೆಗೆ ತೆಗೆದುಕೊಂಡು ಬಹಿಷ್ಕೃತರ ಅಹವಾಲು ಆಲಿಸಿದರು. ದಲಿತರ ದೈವಸ್ಥಾನ ಪ್ರವೇಶದ ಪ್ರಚಾರಕ್ಕಾಗಿ ವಿವಿಧ ಟಿ.ವಿ. ಚಾನೆಲ್ ಸೇರಿದಂತೆ ಮಾಧ್ಯಮ ಪ್ರತಿನಿಧಿಗಳು ಸೇರಿದ್ದರಿಂದ ಆಡಳಿತದಾರರು ದಲಿತರ ಪ್ರವೇಶವನ್ನೂ ತಡೆಯದಂತೆ ಮಾಡಿತ್ತಾದರೂ ಕ್ಯಾಮರಾಗಳಲ್ಲಿ ಆ ದೃಶ್ಯವನ್ನು ಕ್ಲಿಕ್ಕಿಸಲು 'ಸಂಪ್ರದಾಯ'ದ ಹೆಸರಿನಲ್ಲಿ ತಡೆಯುವಲ್ಲಿ ಆಡಳಿತದಾರರು ಯಶಸ್ವಿಯಾದರು. ಆದರೆ ಡಿಜಿಟಲ್ ಕ್ಯಾಮರಾಗಳು ಮಾತ್ರ ಅಲ್ಲಿನ ಕೆಲವೊಂದು ದೃಶ್ಯಾವಳಿಗಳನ್ನು ಸೆರೆ ಹಿಡಿದು ಬಿಟ್ಟಿತ್ತು. ಈ ವಿಚಾರ ಪತ್ರಿಕೆಗಳಲ್ಲಿ, ಟಿ.ವಿ.ಗಳಲ್ಲಿ ಪ್ರಚಾರಗೊಂಡು ಜಿಲ್ಲಾಡಳಿತ ಎಚ್ಚೆತ್ತು ಬೆಳ್ತಂಗಡಿ ತಹಶೀಲ್ದಾರರಿಗೆ ಸೂಕ್ತ ಕ್ರಮಕ್ಕೆ ಆದೇಶಿಸಿತ್ತು. ಈ ಹಿಂದೆಲ್ಲಾ ತನಿಖೆಗೆ ಬಂದ ಅಧಿಕಾರಿಗಳೆಲ್ಲ ದೈವಸ್ಥಾನದ ಆಡಳಿತದಾರರ ಮನೆಯಲ್ಲಿ ಬಾಡೂಟ ಉಂಡು ಹೋಗುತ್ತಿರುವುದು ವಾಡಿಕೆಯಾಗಿತ್ತು. ಆದರೆ ಈ ವರ್ಷ ಮಾತ್ರ ಡಿವೈಎಫ್‌ಐ ಸಂಘಟನೆ ಈ ಘಟನೆಯ ಮೇಲುಸ್ತುವಾರಿ ವಹಿಸಿಕೊಂಡಿರುವುದನ್ನು ಗಮನಿಸಿದ ಬೆಳ್ತಂಗಡಿ ತಹಶೀಲ್ದಾರ್ ವೈ.ಎನ್.ಚಂದ್ರಮ್ಮ ಖುದ್ದು ತನಿಖೆಗಿಳಿದು ಆಡಳಿತದಾರರ ಬೆವರಿಳಿಸಿದ್ದು ಮಾತ್ರ ಸತ್ಯ. ತನಿಖೆ ಸಂದರ್ಭ 12 ಬಹಿಷ್ಕೃತ ಕುಟುಂಬ ಸೇರಿದಂತೆ 1
ದಲಿತ ಬಹಿಷ್ಕೃತ ಕುಟುಂಬದೊಂದಿಗೆ ಇತ
ದಲಿತರಿಗೆ ಕೂಡ ದೈವಸ್ಥಾನ ಪ್ರವೇಶಕ್ಕೆ ಅವಕಾ
ನೀಡಬೇಕು. ಮುಂದಿನ ಸಂಕ್ರಮಣದಂದು ನ
ಎದುರಿನಲ್ಲಿಯೇ ಈ ಕೆಲಸ ನಡೆಯಬೇಕೆಂ
ಫರ್ಮಾನು ಹೊರಡಿಸಿದರು.

ಈ ಹಿನ್ನೆಲೆಯಲ್ಲಿ ಫೆಬ್ರವರಿ 12 ರಂದು ನಡ
ಸಂಕ್ರಮಣದಂದು ತಾಲ್ಲೂಕಿನ ಕಂದಾಂ
ಅಧಿಕಾರಿಗಳ ಸಮಕ್ಷಮದಲ್ಲಿ ಮಾಧ್ಯಮ ಪ್ರತಿನಿಧಿಗ
ಸಮಕ್ಷಮದಲ್ಲಿ ಬಹಿಷ್ಕೃತ 12 ಒಕ್ಕಲಿಗ ಕುಟುಂಬಗ
ಮತ್ತು ಊರಿನ ದಲಿತರು ಒಟ್ಟಾಗಿ ದೈವಸ್ಥಾ
ಪ್ರವೇಶಿಸುವ ಮೂಲಕ ಹೊಸ ದಾಖಲೆ ಸೃಷ್ಟಿಸಿದರ
ಈ ಸಂದರ್ಭ ಕೂಡ ಯಾವುದೇ ರೀತಿಯ
ವಿರೋಧ ವ್ಯಕ್ತಪಡಿಸದೆ ಆಡಳಿತ ಮಂಡಳಿಯವ
ತಮ್ಮ ಪಾಡಿಗೆ ತಾವಿದ್ದರು. ಈ ಸಂದಭ
ಸಿಪಿಐ(ಎಂ) ನ ಬೆಳ್ತಂಗಡಿ ತಾಲ್ಲೂಕು ಕಾರ್ಯದರ್ಶಿ
ನ್ಯಾಯವಾದಿ ಶಿವಕುಮಾರ್, ಡಿವೈಎಫ್
ತಾಲ್ಲೂಕು ಕಾರ್ಯದರ್ಶಿ ಶೇಖರ.ಎಲ
ಉಪಸ್ಥಿತರಿದ್ದು, ಬಹಿಷ್ಕೃತರಿಗೆ ಧೈರ್ಯ ತುಂಬಿದ
ಅವರಿಗೆ ಹೊಸ ಚೈತನ್ಯ ನೀಡುವಂತಾಯಿತು.

'ಡಿವೈಎಫ್‌ಐ ನೊಂದಿಗೆ ಮಾತುಕತೆಗೆ ಸಿದ್ಧವೆಂದರು'

ಈ ವರ್ಷದ ನೇಮೋತ್ಸವದಲ್ಲಿ ದಲಿತ
ದೈವಸ್ಥಾನ ಪ್ರವೇಶಿಸಲು ಡಿವೈಎಫ್‌ಐ ಪ್ರಮು
ಪಾತ್ರ ವಹಿಸಿರುವುದನ್ನು ಗಮನಿಸಿದ ಆಡಳಿತದಾರ
ಮುಂದಿನ ದಿನಗಳಲ್ಲಿ ಸಮಸ್ಯೆ ಆಗಬಾರದೆಂ
ಡಿವೈಎಫ್‌ಐನೊಂದಿಗೆ ಮಾತುಕತೆಗೆ ಮುಂದಾ
ಪ್ರಕರಣವನ್ನೂ ಸೌಹಾರ್ದಯುತವಾಗಿ ಮುಗಿಸ
ಉತ್ಸಾಹ ತೋರಿದರು. ಹೀಗೆ ತವ
ವಕೀಲರೊಂದಿಗೆ ಆಡಳಿತದಾರರು ಡಿವೈಎಫ್
ಸಂಘಟನೆಯೊಂದಿಗೆ ಮೊದಲ ಸುತ್ತಿನ ಮಾತುಕ
ನಡೆಸಿದರು. ಸಿಪಿಐ(ಎಂ) ತಾಲ್ಲೂಕು ಕಾರ್ಯದಶಿ
ನ್ಯಾಯವಾದಿ ಶಿವಕುಮಾರ್ ಈ ಸಂದರ್ಭದ
ಉಪಸ್ಥಿತರಿದ್ದು, ಸೂಕ್ತ ಮಾರ್ಗದರ್ಶನ ನೀಡಿದರ
ಅನಾದಿ ಕಾಲದಿಂದ ಸಂಪ್ರದಾಯದ ಹೆಸರಿನ



ದಲಿತರಿಗೆ, ಮಹಿಳೆಯರಿಗೆ ದೈವಸ್ಥಾನ ಪ್ರವೇ
ನೀಡದಿರುವುದನ್ನು ಬಲವಾಗಿ ವಿರೋಧಿಸಲಾಯಿತ
ಕೊನೆಗೆ ಪ್ರವೇಶಕ್ಕೆ ಒಪ್ಪಿಗೆ ಸೂಚಿಸಿ
ಆಡಳಿತದಾರರು, ಪತ್ರಕರ್ತರಿಗೆ ಫೋಟೋ
ತೆಗೆಯಲು ಹಾಗೂ ಚಿತ್ರೀಕರಣಕ್ಕೆ ನಿರಾಕರಿಸಿದರ
ಕಾಂ. ಶಿವಕುಮಾರ್ ಮಾತ್ರ ಇದನ್ನು ಸುತರಾ
ಒಪ್ಪದೆ ಮಾಧ್ಯಮ ಪ್ರತಿನಿಧಿಗಳಿಗೆ ಪೂರ್ಣ ಸ್ವಾತಂತ್ರ
ಆಗ್ರಹಿಸಿದಾಗ ಕೊನೆಗೆ ಒಪ್ಪಿಗೆ ಸೂಚಿಸಿದರ
ವಾರ್ಷಿಕ ಲಕ್ಷಾಂತರ ರೂಪಾಯಿ ಆದಾಯವಿರು
ದೈವಸ್ಥಾನ ಯಾರ ಸುಪರ್ದಿಯಲ್ಲಿರಬೇಕೆಂಬ ಪ್ರ
ಇದೆ. ಜಾತ್ರೆಯ ಹೆಸರಿನಲ್ಲಿ ಭರ್ಜರಿ 5 ದಿ
ನಡೆಯುವ ಹೊನಲು ಬೆಳಕಿನ ಕೋಳಿ ಅಂಕವೆಂ
ಜೂಜಾಟ ನಿಲ್ಲಬೇಕಾಗಿದೆ. ಇದು ಪ್ರಜ್ಞಾವಂತ
ಆಶಯವಾಗಿದೆ.



14ನೇ ಲೋಕಸಭೆಯ ಕಲಾಪಗಳು ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳಿಗೆ ಸಂಸತ್ತು ಜನಪರ ಹೋರಾಟದ ಇನ್ನೊಂದು ವೇದಿಕೆ ಎಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿವೆ; ಅದೇ ರೀತಿ ಸಂಸತ್ತಿನ ಬಗ್ಗೆ ಕಾಂಗ್ರೆಸ್‌ಮತ್ತು ಆಳುವ ವರ್ಗಗಳು ಹೊಂದಿರುವ ತಿರಸ್ಕಾರ ಭಾವನೆಯನ್ನೂ ದೃಢಪಡಿಸಿವೆ.

14ನೇ ಲೋಕಸಭೆ

ಕೆಲವು ಅಂಕಿಗಳು – ಕೆಲವು ಅಂಶಗಳು

14 ನೇ ಲೋಕಸಭೆ ಇತಿಹಾಸದ ಪುಟಗಳನ್ನು ಸೇರಿದೆ. ಈ ಲೋಕಸಭೆಯ ಕಾರ್ಯಕಲಾಪಗಳನ್ನು ಕುರಿತಂತೆ ಹಲವು ಅಂಕಿ-ಅಂಶಗಳು ಈಗ ಪ್ರಕಟವಾಗಿವೆ. ಇವುಗಳಲ್ಲಿ ಮುಖ್ಯವಾಗಿ ಕಾಣಬರುವುದು ಜನಸಾಮಾನ್ಯರ ಪ್ರಶ್ನೆಗಳನ್ನು ಎತ್ತಿಕೊಳ್ಳುವಲ್ಲಿ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಸದಸ್ಯರುಗಳ ಸಕ್ರಿಯತೆ, ತದ್ವಿರುದ್ಧವಾಗಿ ಕಾರ್ಪೊರೇಟ್ ಹಾಗೂ ಮೇಲ್ವರ್ಗಗಳ ಹಿತಾಸಕ್ತಿಗಳನ್ನು ಮುಂದೊತ್ತಲು ಸಂಸದೀಯ ನಿಯಮಾವಳಿಗಳನ್ನು ಬದಿಗೊತ್ತಲೂ ಹೇಸದ ಯುಪಿಎ ಸರಕಾರದ ಪ್ರಯತ್ನಗಳು.

ಹಾಜರಾತಿ ಚರ್ಚೆ

ಪಿಆರ್‌ಎಸ್ ಶಾಸಕೀಯ ಸಂಶೋಧನಾ ಸಂಘಟನೆ ಕಲೆ ಹಾಕಿದ ಅಂಕಿ-ಅಂಶಗಳ ಪ್ರಕಾರ ಸಂಸತ್ತಿನಲ್ಲಿ ಸಿಪಿಐ(ಎಂ) ಸದಸ್ಯರ ಹಾಜರಾತಿ ಅತೀ ಹೆಚ್ಚು, ಅಂದರೆ 79ಶೇಕಡಾ. ಇತರ ಎಲ್ಲ ಪಕ್ಷಗಳ ಸದಸ್ಯರ ಹಾಜರಾತಿ 68 ಶೇಕಡಾಕ್ಕಿಂತ ಕಡಿಮೆ. ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು, ಪ್ರಶ್ನೆಗಳನ್ನು ಹಾಕಿ ಸರಕಾರದ ಜವಾಬುದಾರಿಕೆಯನ್ನು ಆಗ್ರಹಿಸುವುದು ಹಾಗೂ ಜನತೆಯ ಚುನಾಯಿತ ಪ್ರತಿನಿಧಿಗಳಾಗಿ ಲೋಕಸಭಾ ಸದಸ್ಯರ ಇತರ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿಯೂ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳದ್ದೇ ಮೇಲುಗೈ. ಸಿಪಿಐ(ಎಂ)ನ ಪ್ರತಿಯೊಬ್ಬ ಸದಸ್ಯರೂ ಚರ್ಚೆಗಳಲ್ಲಿ ಭಾಗವಹಿಸಿದ್ದಾರೆ. ಇವರು ಸರಾಸರಿ 47 ಚರ್ಚೆಗಳಲ್ಲಿ ಭಾಗವಹಿಸಿದ್ದರೆ, ಇತರ ಪಕ್ಷಗಳ ಸರಾಸರಿ 30ರಿಂದ 33 ಶೇಕಡಾ. ಈ ಪಕ್ಷಗಳ 11 ರಿಂದ 13 ಶೇಕಡಾ ಸದಸ್ಯರು ಒಂದೂ ಚರ್ಚೆಯಲ್ಲಿ ಭಾಗವಹಿಸಲಿಲ್ಲ.

ಯುಪಿಎ ಮುಖೇಡಿತನ


ಸಂಸತ್ತಿನ ಅಧಿವೇಶನದ ಅವಧಿ ಈಗ ತೀವ್ರವಾಗಿ ಕಡಿತಗೊಂಡಿದೆ. 2004 ರ ಜೂನ್ ವೇಳೆಗೆ 14ನೇ ಲೋಕಸಭೆ ಅಸ್ತಿತ್ವಕ್ಕೆ ಬಂತು. 2005 ಯುಪಿಎ ಆಡಳಿತದ ಮೊದಲ ಪೂರ್ಣ ವರ್ಷ, 2008 ಕೊನೆಯ ಪೂರ್ಣ ವರ್ಷ. 2005ರಲ್ಲಿ ಸಂಸತ್ತು 85 ದಿನ ಅಧಿವೇಶನದಲ್ಲಿದ್ದರೆ, 2008ರಲ್ಲಿ ಆ ಸಂಖ್ಯೆ 46ಕ್ಕೆ ಇಳಿಯಿತು. ಮಳೆಗಾಲದ ಅಧಿವೇಶನ ಸುಮಾರು 3-4 ವಾರ ಇರುತ್ತಿತ್ತು. ಅದನ್ನು ಪೂರ್ಣವಾಗಿ ಕೈಬಿಡಲಾಯಿತು. ಕಾರಣ, ಅವಿಶ್ವಾಸ ಠರಾವನ್ನು ತಪ್ಪಿಸಿಕೊಳ್ಳುವುದು. ಒಂದು ಅಧಿವೇಶನದಲ್ಲಿ ಒಂದೇ ಅವಿಶ್ವಾಸ ಠರಾವನ್ನು ಮಂಡಿಸಬಹುದು ಎಂಬುದರ ಪ್ರಯೋಜನ ಪಡೆಯಲಷ್ಟೇ ಹೀಗೆ ಮಾಡಲಾಯಿತು. ಅದಕ್ಕಾಗಿ ಅದು ಬಜೆಟ್ ಅಧಿವೇಶನವನ್ನು ಡಿಸೆಂಬರ್ ವರೆಗೂ ಮುಂದೂಡಿ ಸಂಸದೀಯ ಇತಿಹಾಸವನ್ನೇ ಸೃಷ್ಟಿಸಿತು!

ಎಡಪಕ್ಷಗಳು ಬೆಂಬಲವನ್ನು ಹಿಂತೆಗೆದುಕೊಂಡ ಮೇಲೆ ಆಳುವ ಕೂಟ ಲೋಕಸಭೆಯಲ್ಲಿ ತನ್ನ ಬಹುಮತ ಸಾಬೀತು ಪಡಿಸಲು ಮೋಸದ ವಿಧಾನಗಳನ್ನು ಬಳಸಿದ ಹಿನ್ನೆಲೆಯಲ್ಲಿ ಇದನ್ನು ನೋಡಬಹುದು. ಸಂಸತ್ತನ್ನು ಎದುರಿಸಲು ಅದರ ಹಿಂಜರಿಕೆ ಅದನ್ನು ಈ ಮಟ್ಟಕ್ಕೂ ಇಳಿಸಿರಬೇಕು. ಯುಪಿಎ ಸರಕಾರದ ಕೊನೆಯ ತಿಂಗಳುಗಳಂತೂ ಸಂಸತ್ತಿನ ಬಗ್ಗೆ ಅದಕ್ಕಿರುವ ತಿರಸ್ಕಾರದ ನಗ್ನ ಪ್ರದರ್ಶನವೇ ಆಗಿದ್ದವು.

ಪ್ರಜಾಪ್ರಭುತ್ವ ವಿಧಿವಿಧಾನಗಳ ಬಗ್ಗೆ ಆಳುವವರ ತಿರಸ್ಕಾರ ಇನ್ನೊಂದು ರೀತಿಯಲ್ಲೂ 14ನೇ ಲೋಕಸಭೆಯಲ್ಲಿ ಪ್ರದರ್ಶನಗೊಂಡಿತು. ಸಂಸತ್ತಿನಲ್ಲಿ 1993ರಿಂದ ಸ್ಥಾಯೀ ಸಮಿತಿ ವ್ಯವಸ್ಥೆಯನ್ನು ಆರಂಭಿಸಲಾಯಿತು. ಸರಕಾರದ ವಿವಿಧ ಇಲಾಖೆಗಳ ಕೆಲಸಗಳನ್ನು ಎಲ್ಲಾ ಪಕ್ಷಗಳ ಮತ್ತು ಎರಡೂ ಸದನಗಳ ಸದಸ್ಯರಿರುವ ಸಣ್ಣ ಸಮಿತಿಗಳು ಉತ್ತಮ ರೀತಿಯಲ್ಲಿ ಪರಿಶೀಲಿಸಬಹುದು ಎಂದು ಈ ವ್ಯವಸ್ಥೆಯನ್ನು ಆರಂಭಿಸಲಾಗಿತ್ತು. ಒಟ್ಟಾರೆಯಾಗಿ ಈ ವ್ಯವಸ್ಥೆ ಚೆನ್ನಾಗಿಯೇ ನಡೆದಿದೆ. ಇವು ಇಲಾಖೆಗಳ ಕಾರ್ಯ ನಿರ್ವಹಣೆಯ ಬಗ್ಗೆ ವಿವರವಾದ ವರದಿಗಳನ್ನು ತಯಾರಿಸಿವೆ, ಪ್ರಸ್ತಾವಿತ ಶಾಸನಗಳ ಬಗ್ಗೆ ಬಲವಾದ ಶಿಫಾರಸುಗಳನ್ನು ಮಾಡಿವೆ. ಈ ಶಿಫಾರಸುಗಳನ್ನು ಸರಕಾರ ಒಪ್ಪಲೇ ಬೇಕೆಂದೇನಿಲ್ಲವಾದರೂ, ಇವು ಸರ್ವಪಕ್ಷ ಸಮಿತಿಗಳಾದ್ದರಿಂದ ಅದು ಇವನ್ನು ಗಂಭೀರತೆಯಿಂದ ಕಾಣಬೇಕಾಗುತ್ತದೆ ಹಾಗೂ ತನ್ನ ಶಾಸನಗಳಲ್ಲಿ ಸೂಕ್ತ ಬದಲಾವಣೆ ತರಬೇಕೆಂಬ ನಿರೀಕ್ಷೆಯಿರುತ್ತದೆ. ಈ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ 24 ಸ್ಥಾಯೀ ಸಮಿತಿಗಳಿವೆ. ಇವುಗಳಲ್ಲಿ 16 ಲೋಕಸಭೆಯ ಸದಸ್ಯರ ಅಧ್ಯಕ್ಷತೆಯಲ್ಲಿ ಇದ್ದರೆ, 8 ರಾಜ್ಯಸಭೆಯ ಸದಸ್ಯರ ಅಧ್ಯಕ್ಷತೆಯಲ್ಲಿ ಇವೆ.

ಎಡ ಬೆಂಬಲ - ಒತ್ತಡ ಇರುವವರೆಗೆ...

ಯುಪಿಎ ಸರಕಾರಕ್ಕೆ ಎಡಪಕ್ಷಗಳ ಬೆಂಬಲ ಇರುವ ವರೆಗೆ ಎಡಪಕ್ಷಗಳ ಒತ್ತಡದಿಂದಾಗಿ ಈ ಸಮಿತಿಗಳ ಹಲವು ಶಿಫಾರಸುಗಳನ್ನು ಸರಕಾರ ಅಂಗೀಕರಿಸಬೇಕಾಗಿ ಬಂತು. ಉದಾಹರಣೆಗೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಮಾಹಿತಿ ಹಕ್ಕು, ಬುಡಕಟ್ಟು ಅರಣ್ಯ ಹಕ್ಕು ಇತ್ಯಾದಿ ಶಾಸನಗಳಿಗೆ ಸಂಬಂಧಪಟ್ಟಂತೆ ಸರಕಾರ ಸಂಬಂಧಪಟ್ಟ ಶಿಫಾರಸುಗಳನ್ನು



ಸ್ವೀಕರಿಸಿರಲಿಲ್ಲ. ಆದರೆ ಎಡಪಕ್ಷಗಳ ಒತ್ತಡ ಸರಕಾರ ಈ ಶಿಫಾರಸುಗಳನ್ನು ದುರ್ಬಲಗೊಳಿಸದಂತೆ ತಡೆಯಿತು.

ಆನಂತರ

ಆದರೆ ಎಡಪಕ್ಷಗಳು ಬೆಂಬಲವನ್ನು ಹಿಂತೆಗೆದುಕೊಂಡ ನಂತರ ಚಿತ್ರ ಬದಲಾಯಿತು. ಕಾಂಗ್ರೆಸ್ ನೇತೃತ್ವದ ಸರಕಾರ ತನ್ನ ಹಳೆಯ ಸರ್ವಾಧಿಕಾರಶಾಹೀ ವರ್ತನೆಯನ್ನು ಮತ್ತೆ ಆರಂಭಿಸಿತು. ಅಸಂಘಟಿತ ಕಾರ್ಮಿಕರ ಕುರಿತಾದ ಶಾಸನ ಇದಕ್ಕೆ ಮೊದಲ ಬಲಿ. ಕಾರ್ಮಿಕ ಇಲಾಖೆಯ ಸ್ಥಾಯೀ ಸಮಿತಿಯ ಹಾಗೂ ಸೆನ್‌ಗುಪ್ತಾ ಆಯೋಗದ ಶಿಫಾರಸುಗಳನ್ನು ಗಣನೆಗೆ ತಗೊಳ್ಳದೆ ಒಂದು ದುರ್ಬಲ ಶಾಸನವನ್ನು ಸರಕಾರ ಮುಂದೊತ್ತಿತು. ಸ್ಥಾಯೀ ಸಮಿತಿಯ ಪರೀಕ್ಷಣೆಯ ಎದುರು ನಿಲ್ಲಲಿಕ್ಕಿಲ್ಲ ಎಂದೆನಿಸಿದ ಸಂದರ್ಭಗಳಲ್ಲಿ ಸರಕಾರ ಶಾಸನಗಳನ್ನು ಸ್ಥಾಯೀ ಸಮಿತಿಯ ಪರಿಶೀಲನೆಗೂ ಕಳಿಸದೆ ಸಂಸತ್ತಿನಲ್ಲಿ ಮಂಡಿಸಿತು. ಸರಕಾರದ ಉನ್ನತ ಹುದ್ದೆಗಳಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳ ಜನ ಪ್ರವೇಶಿಸದಂತೆ ತಡೆಯುವ ಪರಿಶಿಷ್ಟಜಾತಿ-ಪರಿಶಿಷ್ಟ ಬುಡಕಟ್ಟು ಮೀಸಲಾತಿ ಮಸೂದೆ ಇದಕ್ಕೆ ಒಂದು ಉದಾಹರಣೆ.

'ಬಜೆಟ್' ಅಧಿವೇಶನದ ಕೊನೆಯ ದಿನ(ಡಿಸೆಂಬರ್ 23) ಗದ್ದಲದ ವಾತಾವರಣದ ಪ್ರಯೋಜನ ಪಡೆದು, ಯುಪಿಎ ಸರಕಾರ ಲೋಕಸಭೆಯಲ್ಲಿ ಸಭಾಧ್ಯಕ್ಷರ ಸಹಕಾರದೊಂದಿಗೆ ಎಂಟು ಮಸೂದೆಗಳನ್ನು ಮಂಡಿಸಿ, ಚರ್ಚೆಯಿಲ್ಲದೇ ಪಾಸು ಮಾಡಿಕೊಂಡಿತು. ಅದೇ ರೀತಿ ರಾಜ್ಯ ಸಭೆಯಲ್ಲಿ ಎರಡು ಇಂತಹ ಶಾಸನಗಳನ್ನು ಪಾಸು ಮಾಡಿಕೊಂಡಿತು. ಆದರೆ ಯಾವುದೇ ಮಸೂದೆ ಶಾಸನವಾಗಬೇಕಾದರೆ ಎರಡೂ ಸದನಗಳು ಅದನ್ನು ಪಾಸು ಮಾಡಬೇಕಾಗಿರುವುದರಿಂದ ದಲಿತ-ವಿರೋಧಿ, ಬುಡಕಟ್ಟು-ವಿರೋಧಿ ಮೀಸಲಾತಿ ಮಸೂದೆ, ಭ್ರಷ್ಟಾಚಾರದ ನಿವಾರಣೆಯ ಪ್ರಯತ್ನವನ್ನು ದುರ್ಬಲಗೊಳಿಸುವ ಮಸೂದೆ ಇತ್ಯಾದಿಗಳಿಗೆ ಸಿಪಿಐ(ಎಂ)ನ ಮುತುವರ್ಜಿಯಿಂದಾಗಿ 2009ರ ಬಜೆಟ್ ಅಧಿವೇಶನದಲ್ಲಿ ರಾಜ್ಯಸಭೆಯಲ್ಲಿ ಬಲವಾದ ವಿರೋಧ ಬಂತು. ಮುಖವುಳಿಸಿಕೊಳ್ಳಲು ಸರಕಾರ ಮೀಸಲಾತಿ(ವಿರೋಧಿ) ಮಸೂದೆಯನ್ನು ಪರಿಶಿಷ್ಟ ಜಾತಿ ಆಯೋಗಕ್ಕೆ ಪರಿಶೀಲನೆಗೆ ಕಳಿಸುವುದಾಗಿ ಹೇಳಿತು, ಭ್ರಷ್ಟಾಚಾರ ನಿವಾರಣೆ ಕುರಿತಾದ ಮಸೂದೆಯನ್ನು ಅಜೆಂಡಾದಿಂದ ಹಿಂತೆಗೆದುಕೊಂಡಿತು.

ಸಭಾಧ್ಯಕ್ಷರ ಮೌನ

14ನೇ ಲೋಕಸಭಾಧ್ಯಕ್ಷರು ಸಂಸತ್ ಸದಸ್ಯರನ್ನು ಗೇಲಿ ಮಾಡುವಲ್ಲಿ ಕಠಿಣ ಭಾಷೆಯನ್ನು ಬಳಸಿ, ಕೆಲವೊಮ್ಮೆ ಅನಗತ್ಯ ಆಪಾದನೆಗಳನ್ನೂ ಮಾಡಿ ಮಾಧ್ಯಮಗಳ, ಮೇಲ್ವರ್ಗಗಳ ಶಾಭಾಷ್‌ಗಿರಿ ಗಿಟ್ಟಿಸಿಕೊಂಡಿದ್ದಾರೆ. ಆದರೆ ಸಂಸತ್ತಿನ ಬಗ್ಗೆ ತಿರಸ್ಕಾರ ಮೂಡಿಸುವಲ್ಲಿ ಯುಪಿಎ ಸರಕಾರದ ಪಾತ್ರದ ಬಗ್ಗೆ ಅವರದ್ದೂ ದಿವ್ಯಮೌನ!

ನೆರವು ನೀಡಲು ಕೋರಿಕೆ

ಜನಶಕ್ತಿ ವಾರಪತ್ರಿಕೆಯ ಸಂಪಾದಕರು, ಸಿಪಿಐ(ಎಂ)ನ ರಾಜ್ಯ ಕಾಯದರ್ಶಿ ಮಂಡಳಿ ಸದಸ್ಯರಾಗಿರುವ ಎಸ್.ವೈ.ಗುರುಶಾಂತ್ ರವರು ಏಪ್ರಿಲ್ ಮೊದಲ ವಾರದಲ್ಲಿ ತೆರೆದ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕಾಗಿದೆ. ಇದಕ್ಕಾಗಿ ಸುಮಾರು ಮೂರೂವರೆ ಲಕ್ಷ ರೂಪಾಯಿಗಳಷ್ಟು ವೆಚ್ಚ ತಗಲುವ ಅಂದಾಜಿದೆ. ಆದ್ದರಿಂದ ಹಿತೈಷಿಗಳು ಧನ ಸಹಾಯ ನೀಡಲು ಕೋರಲಾಗಿದೆ.

- ವಿ.ಜೆ.ಕೆ.ನಾಯರ್,
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ,

ವಿ.ಸೂ.: ನಿಮ್ಮ ನೆರವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಹೆಸರಿಗೆ ಕಳುಹಿಸುವುದು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಅಂದು 1910 ಮಾರ್ಚ್ 8 ರಂದು ನ್ಯೂಯಾರ್ಕ್ ಪ್ಯಾರಿಸ್, ಜರ್ಮನಿ ಮುಂತಾದ ದೇಶಗಳಲ್ಲಿ ಸಾವಿರ ಸಾವಿರ ಗಾರ್ಮೆಂಟ್ ಹೆಣ್ಣು ಮಕ್ಕಳು ಬೀದಿಗಿಳಿದಿದ್ದರು.

ಇಂದು 2009ರ ಮಾರ್ಚ್ ತಿಂಗಳಲ್ಲಿ ಭಾರತದ ಒಂದೊಂದು ನಗರಗಳಲ್ಲಿ ಲಕ್ಷಾಂತರ ಗಾರ್ಮೆಂಟ್ಸ್ ಹೆಣ್ಣು ಮಕ್ಕಳು ಬೀದಿಗೆ ಬಿದ್ದಿದ್ದಾರೆ. ಅಂದು ಬೀದಿಗಿಳಿದ ಮಹಿಳೆಯರು ತಮ್ಮ ಧೀರ ಹೋರಾಟದ ಮೂಲಕಗಳಿಸಿದ ಜಯವನ್ನು ಸಂಭ್ರಮಿಸುತ್ತಿದ್ದರು.

ಆದರೆ ಇಂದು!

ಸೆಪ್ಟೆಂಬರ್ 2008ರ ಆಸುಪಾಸಿಗೆ ಬಯಲಾದ ಆರ್ಥಿಕ ಕುಸಿತ ಹಿಂದೆಲ್ಲಾ ಬಂದ ಕತ್ರಿನಾ, ಹುರಿಕೇನ್‌ಗಳಂತಹ ಚಂಡಮಾರುತಗಳನ್ನು ಮೀರಿಸಿದಂತಹ ಸುನಾಮಿಯೆಂದೇ ಹೇಳಬಹುದು. ಡಾಲರ್‌ನ ಹಿರಿಮೆಯಲ್ಲಿ ತನ್ನ ಕಪಿ ಮುಷ್ಠಿಯಲ್ಲಿ ಇಡೀ ಭೂ ಮಂಡಲವನ್ನೇ ಹಿಡಿದಿಡುವೆನೆಂಬ ಅಹಂಕಾರದಿಂದ ಮೆರೆಯುತ್ತಿದ್ದ ಅಮೇರಿಕಾದ ದೇಶವೇ ನಡುಗುತ್ತಿದೆ. ವಾಲ್‌ಸ್ಟ್ರೀಟ್‌ನ ಐಷಾರಾಮಿ ತನದ ಸೊಕ್ಕಿಗೆ ಬಲಿಯಾದದ್ದು ಅಲ್ಲಿ ಕೂಡ ಕಾಯಕ ಜೀವಿಗಳೇ. ಆರ್ಥಿಕ ಕುಸಿತದ ಕಾರಣ ನೀಡಿ ವೆಚ್ಚ ಕಡಿತ ಸುಲಭ ಮಾರ್ಗವನ್ನು ಭಾರತವೂ ಸೇರಿದಂತೆ ಹಲವು ದೇಶಗಳು ಕಂಡುಕೊಂಡಿದ್ದು ಉದ್ಯೋಗಿಗಳನ್ನು ಹೊರ ದಬ್ಬುವ ಮೂಲಕ ಸಂಬಳ ಕಡಿತದ ಮೂಲಕ ಇಂತಹ ಕತ್ತರಿಗೆ ಸಿಕ್ಕಿದ 7 ಜನರ ಕುಟುಂಬವೊಂದು ನಾಶವೇ ಆಗಿ ಹೋಯಿತು. ಪ್ರತಿ 2 ಗಂಟೆಗೊಂದು ರೈತರ ಆತ್ಮಹತ್ಯೆ ನಡೆಯುತ್ತಿರುವ ಭಾರತಕ್ಕೆ ಹೋಲಿಸಿದಲ್ಲಿ ಇದೊಂದು ವಿಶೇಷ ಘಟನೆ ಎನಿಸದಿದ್ದರೂ ಅಮೇರಿಕಾದಂತಹ ಭೂ ಲೋಕದ ಸ್ವರ್ಗದಲ್ಲಿ, ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ಆರ್ಥಿಕ ಕುಸಿತದ ಭೀಕರತೆ ಎಷ್ಟಿದೆ ಎಂಬುದು ಅರ್ಥವಾಗುತ್ತದೆ. ವಾಲ್‌ಸ್ಟ್ರೀಟ್ ಎಂಬ ಶ್ರೀಮಂತರ ಸೊಕ್ಕಿನ ತಾಣ ಪ್ರಾಯೋಜಿಸಿದ ಆರ್ಥಿಕ ಹಿಂಜರಿತ ವಿಶ್ವದಾದ್ಯಂತ ತಳಮಳ ಸೃಷ್ಟಿಸಿದೆ. ಕೋಟ್ಯಾಂತರ ಜನರು ಬದುಕನ್ನೇ ಕಳೆದುಕೊಳ್ಳುವಂತಾಗಿದೆ.

ಆದರೆ ಶ್ರೀಮಂತರ ಮೋಜು

ಒಂದು ವರದಿಯ ಪ್ರಕಾರ ನವೆಂಬರ್ ತಿಂಗಳೊಂದರಲ್ಲೇ ಅಮೇರಿಕಾದಲ್ಲಿ 5,33,000 ಜನ ಕೆಲಸ ಕಳೆದುಕೊಂಡಿದ್ದಾರೆ. ಐ.ಎಲ್.ಓ. ವರದಿಯ ಪ್ರಕಾರ 2009ರಲ್ಲಿ ವಿಶ್ವದಲ್ಲಿ 20 ಕೋಟಿಗೂ ಹೆಚ್ಚು ಜನ ನಿರುದ್ಯೋಗಿಗಳಾಗುವ ಸಂಭವವಿದೆ. ಇದು ಆರ್ಥಿಕ ಹಿಂಜರಿತದ ಒಂದು ಮುಖ. ಆದರೆ ಐಷಾರಾಮಿ ಶ್ರೀಮಂತ ವರ್ಗಕ್ಕೆ ಕಣ್ಣಿನಲ್ಲಿ ನೆತ್ತರಿಲ್ಲ



ಮಹಿಳಾ ವಿಮೋಚನೆಗಾಗಿ ನಡೆಯುವ ಹೋರಾಟಗಳು ನಿತ್ಯ ನಿರಂತರವಾಗಿ ನಡೆದೇ ಇವೆ. ಆದರೆ ಮಹಿಳಾ ಸಮಾನತೆ ಇನ್ನೂ ಸಾಧ್ಯವಾಗಲಿಲ್ಲ. ಮತ್ತೊಂದೆಡೆ ಇರುವ ಸ್ವಾತಂತ್ರ್ಯವನ್ನು ಕಸಿಯುವ ಪ್ರಯತ್ನಗಳು ತೀವ್ರಗೊಂಡಿವೆ.



ಸಮಾನತೆಯತ್ತ ಮತ್ತೊಂದು ಹೆಜ್ಜೆ

ಕೆ.ಎಸ್.ವಿಮಲ

ಎಂಬುದಕ್ಕೆ ಉದಾಹರಣೆಯಾಗಿ ಸಿಟಿ ಗ್ರೂಪ್‌ನ ಸಿ.ಇ.ಓ. ಇಂಡಿಯನ್ ಅಮೇರಿಕನ್ ವಿಕ್ರಂ ಪಂಡಿತ್ 2007ರಲ್ಲಿ 21.60 ಕೋಟಿ ಡಾಲರ್ ಎಂದರೆ 1058ಕೋಟಿ ರೂ. ವೇತನ, ಭತ್ಯೆ



ಪಡೆದಿದ್ದಾರೆ. ಲೈಮನ್ ಬ್ರದರ್ಸ್, ಜನರಲ್ ಮೋಟಾರ್ಸ್‌ನಂತಹ ದೈತ್ಯ ಉದ್ಯಮಗಳೇ ನೆಲ ಕಚ್ಚಿ ಪರಿಹಾರಕ್ಕಾಗಿ ಸರ್ಕಾರದ ಮೊರೆ ಹೊಕ್ಕವು. ಸಾವಿರಾರು ಉದ್ಯೋಗಿಗಳನ್ನು ಮನೆಗೂ ಕಳಿಸಿದರು. ವಿಪರ್ಯಾಸವೆಂದರೆ ಇಂತಹ ಹಲವು ಕಂಪನಿಗಳು ಸರ್ಕಾರದಿಂದ ತೆಗೆದುಕೊಂಡ ಪರಿಹಾರದಿಂದ ಉದ್ಯೋಗಿಗಳ ನೆರವಿಗೆ ಭದ್ರತೆಗೆ ವ್ಯವಸ್ಥೆ ಮಾಡದೇ, ಸಿ.ಇ.ಓ. ಮತ್ತಿತರ ಉನ್ನತ ಮಟ್ಟದ ಅಧಿಕಾರಿಗಳ ಮೋಜು ಮಸ್ತಿಗೆ ಬಳಸಿಕೊಂಡಿದ್ದಕ್ಕೆ ಸ್ವತಃ ಅಮೇರಿಕಾದ ಅಧ್ಯಕ್ಷ ಒಬಾಮದವರೇ ಅಸಹನೆ ವ್ಯಕ್ತಪಡಿಸಿದರು.

ನಿರುದ್ಯೋಗಿ ಮಹಿಳೆಯರು

ಇದು ವಿಶ್ವದಲ್ಲಿ ಘಟಿಸಿದ ಆರ್ಥಿಕ ಕುಸಿತದ ಒಂದು ಝಲಕ್ ಅಷ್ಟೇ. ವಿಶ್ವದ ದುಡಿಯುವ ಜನರ ಶೇ.40 ಮಹಿಳೆಯರು ದುಡಿಯುವ ವರ್ಗಕ್ಕೆ ಸೇರಿದ ಬಡವರಲ್ಲಿ ಶೇ.60 ಮಹಿಳೆಯರು ಹಿಂದೆಂದಿಗಿಂತಲೂ ಹೆಚ್ಚು ಮಹಿಳೆಯರು. ಎಂದರೆ ಶೇ.81.8 ಮಿಲಿಯನ್‌ನಷ್ಟು ನಿರುದ್ಯೋಗಿಗಳು ಮಹಿಳೆಯರು. ದುಡಿತದ ಅವಧಿ, ಶ್ರಮ ಪುರುಷರಿಗಿಂತ ಮಹಿಳೆಯರದು ಹೆಚ್ಚು ಆದರೂ ಪುರುಷರಿಗಿಂತ ಶೇ.20-30 ನಷ್ಟು ಕಡಿಮೆ ಆದಾಯ ಮಹಿಳೆಯರಿಗೆ. ಇಂದಿಗೂ ಹೆರಿಗೆ ರಜಾಭತ್ಯೆಗಳು ಗಗನ ಕುಸುಮವೇ ಆಗಿ ಉಳಿದಿರುವ ಆಕಸ್ಮಾತ್ ಗರ್ಭಿಣಿಯಾಗಿ ಬಿಟ್ಟರೆ ಕೆಲಸವನ್ನೇ ಕಳೆದುಕೊಳ್ಳುವ ಅಪಾಯದಲ್ಲಿ ಬಹುಸಂಖ್ಯಾತ ದುಡಿಯುವ ಮಹಿಳೆಯರಿದ್ದಾರೆ. ಈಗ ಹೇಳಿ. ದುಡಿಯುವ ಮಹಿಳೆಯರ ಕನಿಷ್ಠ ಹಕ್ಕುಗಳಿಗಾಗಿ ಶತಮಾನದ ಹಿಂದೆ ಹೋರಾಡಿದ ಆ ಧೀರ ಮಹಿಳೆಯರು, ಅವರು ಹೋರಾಟವನ್ನು ಮಾನ್ಯ ಮಾಡಬೇಕೆಂದು ಬೇಡಿಕೆಯನ್ನಿಟ್ಟು ಜಯಶಾಲಿಯಾದ ಕ್ಲಾರಾ ಜೆಟ್‌ಕಿನ್ ಗೋರಿಯೊಳಗೆ ನಗಬಲ್ಲರೇ?

'ಸಂಸ್ಕೃತಿ ರಕ್ಷಣೆ' ಮತ್ತು ನೇರದಾಳಿ

ವಿಶ್ವದ ಆರ್ಥಿಕ ನಭೋ ಮಂಡಲ ಹೀಗಾದರೆ ಒಮ್ಮೆ ನೆಲದತ್ತ ಮುಖ ಮಾಡಿದರೆ ಸೀತೆಯನ್ನು ಕಾಡಿಗೆ ಅಟ್ಟಿ, ಬೆಂಕಿಗೆ ಹಾರಿಸಿ, ದ್ರೌಪದಿಯನ್ನು ತುಂಬಿದ ಸಭೆಯಲ್ಲಿ ಸೀರೆ ಸೆಳೆದು, ಅಹಲ್ಯೆಯನ್ನು ಕಲ್ಲಾಗಿಸಿ, ರೇಣುಕೆಯ ತುಂಡ ತುಂಡು ಮಾಡಿದ.. ಅತ್ಯುತ್ತಮ ಸಂಸ್ಕೃತಿ ನಾಶವಾಗಿ ಹೋಗುತ್ತಿದೆ ಎಂಬ ಕೊರಗು ಸಾಂಸ್ಕೃತಿಕ ರಾಯಭಾರಿಗಳನ್ನು ಕಾಡುತ್ತಿದೆ! ಮಹಿಳೆಯರನ್ನು ಸಾರ್ವಜನಿಕವಾಗಿ ಹೊಡೆದು ಬಡಿದಾದರೂ ದಾರಿಗೆ(ತಮ್ಮ) ತರುವುದೇ ಸರಿ ಎಂದು ರಾಮನ ಮೇಲೆ ಆಣೆ ಮಾಡಿ ಬೀದಿಗೆ ಇಳಿದಿದೆ ಪರಿವಾರದ ಸೇನೆ. ರಾಮನನ್ನೇ ಆದರ್ಶ ಪುರುಷನಾಗಿಸಿ ಕೊಂಡವರು ತುಳಿಯಬೇಕಾದ್ದು ಅವನು ಹಾಕಿಕೊಟ್ಟ ದಾರಿಯೇ ಸರಿ. ಆದರೆ ದೇಶದ ಸಂವಿಧಾನದ ಅಡಿಯಲ್ಲಿ ಸರ್ಕಾರ ನಡೆಸಬೇಕಾದವರು ಮನುಧರ್ಮ ಶಾಸ್ತ್ರವನ್ನೇ ಸಂವಿಧಾನವಾಗಿಸಿಕೊಂಡರೆ ಏನಾದೀತು? ಅದರ ಪ್ರಯೋಗ ಶಾಲೆಯಾಗಿ ಈ ದೇಶ ಗುಜರಾತ್ ಎಂಬ ರಕ್ತ ಪಿಪಾಸುಗಳ ರಾಜ್ಯವನ್ನು ನೋಡಿತ್ತು. ಅದರ ಮುಂದುವರಿದ ಭಾಗವಾಗಿ ಕರ್ನಾಟಕ ಇಂದ ಸಜ್ಜಾಗಿದೆ. ಸಂಸ್ಕೃತಿ, ಪರಂಪರೆ, ಮಾನ, ಸಮ್ಮಾನಗಳ ಹೆಸರಿನಲ್ಲಿ ಇದುವರೆಗೆ ಪ್ರಚೋದನಾಕಾರಿ ಭಾಷಣ ಬಿಗಿಯುತ್ತಿದ್ದ ಪರಿವಾರ ಈಗ ನೇರ ಕಾಳಗಕ್ಕೆ ಇಳಿದಿದೆ. ಮಂಗಳೂರು ಬೀದಿಗಳಲ್ಲಿ ಕಾಲೇಜುಗಳಲ್ಲಿ ಸಂಸ್ಕೃತಿಯ ಪಾಲನೆಗೆ ಮುಂದಾದ ಈ (ಕು)ಸಂಸ್ಕೃತರು ಮತಾಂತರದ ಹೆಸರಿನಲ್ಲಿ ಚರ್ಚುಗಳ ಮೇಲೆ ದಾಳಿ ನಡೆಸಿ ಸರ್ಕಾರಕ್ಕೆ ಸೂಚನೆ ನೀಡಿದರು. ಮಂತ್ರಿ ಮಹೋದಯರಿಂದ ಸಿಕ್ಕ ಶಹಬಾಶ್‌ಗಿರಿಯಿಂದ ಪೂರ್ಣ ಉತ್ತೇಜಿತರಾದ ಪರಿವಾರ ಮಹಿಳೆಯರ ಮೇಲೆ ನೇರ ದಾಳಿಗೆ ಇಳಿದರು. ಅಲ್ಲಿಯೂ ಸರ್ಕಾರ ಹೇಳುವುದೊಂದು ಮಾಡುವುದೊಂದು ಮಾಡಿ ಧೈರ್ಯ ತುಂಬಿದ ತಕ್ಷಣ ಕಾಮಣ್ಣರು ಬೀದಿಗೆ ಇಳಿದು ಪ್ರೇಮಿಗಳಿಗೆ ಪಾಠ ಕಲಿಸಲು ಮುಂದಾದರು. ಅಲ್ಲಿಯೂ ಸರ್ಕಾರ ಕಣ್ಣು ಮುಚ್ಚಾಲೆ ಆಡಿದ ನಂತರ ಈಗ ಬೆಂಗಳೂರಿನ ಬೀದಿಗಳಲ್ಲಿ ಜೀನ್ಸ್ ಪ್ಯಾಂಟ್ ಹುಡುಗಿಯರಿಗೆ ಬಂದಿದೆ ಗ್ರಹಚಾರ. ಪುಂಡರೆಂದು ಕರೆಯುವುದು ಪುಂಡಾಟಿಕೆ ಮಾಡುವವರನ್ನು, ಅವರಿರುವುದೇ ಕೆಲಸ ಮಾಡಲು, ಆದರೆ ಇದೆಂತಹ ಅದೃಷ್ಟ! ನಗರದ ಪೋಲಿಸ್ ಕಮೀಷನರ್‌ರಿಂದಲೂ ಅವರಿಗೆ ಶಹಬ್ಬಾಸ್ ಸಿಗುವುದೆಂದರೆ ಇಂತಹ ಅವಕಾಶ ಯಾರಿಗುಂಟು ಯಾರಿಗಿಲ್ಲ!

ಸಮಸ್ಯೆ - ಸವಾಲುಗಳು

ಮಹಿಳೆಯರ ದುಡಿತದ ಹಕ್ಕಿಗಾಗಿ ಹೋರಾಟ ನಡೆಸಿದ ಒಂದು ಶತಮಾನದ ನಂತರ ನಾವು ಹಿಂತಿರುಗಿ ನೋಡಿದರೆ ಕ್ಲಾರಾ ಜೆಟ್‌ಕಿನ್‌ರ ಮೂರ್ತಿ ಕಣ್ಣಿಗೆ ಗೋಚರಿಸದಷ್ಟು ಸಮಸ್ಯೆಗಳ ಪೆಡಂಭೂತಗಳು ಅಡ್ಡ ಬರುತ್ತವೆ. ಅಡ್ಡ ಗೋಡೆಗಳನ್ನೊಡೆದು ಮುನ್ನುಗ್ಗುವ ಛಲವೊಂದೇ ಮಹಿಳಾ ವಿಮೋಚನೆಯ ಗುರಿ ಸಾಧನೆಗೆ ದಾರಿ ತೋರಬಲ್ಲುದು. ಆ ನೆಲೆಯಲ್ಲಿ ತಕ್ಷಣದಲ್ಲಿಯೇ ಇರುವ ಪ್ರಜಾಪ್ರಭುತ್ವದ ಮಹಾಸಮರದಲ್ಲಿ ರಾಜ್ಯದ ಮಹಿಳೆಯರು ಮನಸ್ಸು ಮಾಡಿದರೆ ಅಮೇರಿಕಾದ ದಾಸರಿಗೆ ಮನುಧರ್ಮ ಪರಿಪಾಲಕರಿಗೆ ಒಂದು ದಾರಿ ತೋರಿಸಬಹುದು. ಈ ಬಾರಿಯ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಇದಕ್ಕಿಂತ ಒಳ್ಳೆಯ ತೀರ್ಮಾನ ಇನ್ನೊಂದಿರಲಾರದು ಅಲ್ವ?

ಈ ಸ್ವಾತಂತ್ರ್ಯಕ್ಕೂ ತರುತ್ತಿದ್ದಾರೆ ಆತಂಕ





ಭಾರತದ ರಾಜಕಾರಣದಲ್ಲಿ ರೂಪುಗೊಳ್ಳುತ್ತಿರುವ ರಾಜಕೀಯ ಪರಿಸ್ಥಿತಿಯಲ್ಲಿ ಇದು ಸ್ಪಷ್ಟ. ಜನತೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡರಿಂದಲೂ ರೋಸಿದ್ದಾರೆ. ಮೂರನೇ ಪರ್ಯಾಯ ರೂಪುಗೊಳ್ಳುತ್ತಿರುವುದು ಸಹ ಅಷ್ಟೇ ಖಚಿತವಾಗಿ ಎದ್ದು ಕಾಣುತ್ತಿದೆ.

ಮೂಡಿಬರಲಿದೆ ಮೂರನೇ ಪರ್ಯಾಯ

5ನೇ ಲೋಕಸಭಾ ಚುನಾವಣೆಯ ದಿನಾಂಕಗಳು ಷಣೆಯಾಗುವುದ ರೊಂದಿಗೆ ದೇಶದ ಜಕೀಯ ಚಟುವಟಿಕೆಗಳು ತೀವ್ರಗೊಂಡಿದೆ. ಜನತೆ ಾಗೂ ದೇಶದ ಹಿತರಕ್ಷಣೆ ಬದ್ಧವಾದ ರ್ಕಾರವೊಂದನ್ನು ಆಯ್ಕೆ ಮಾಡಬೇಕಾದ ಮಹತ್ವದ ಣೆಗಾರಿಕೆ ಜನರ ಮುಂದಿದೆ.

2004ರ ಸಾರ್ವತ್ರಿಕ ಚುನಾವಣೆಗಳ ನಂತರದ ಸನ್ನಿವೇಶದಲ್ಲಿ ಎಡಪಕ್ಷಗಳು ಯುಪಿಎ ಒಕ್ಕೂಟಕ್ಕೆ ಸಮಾನ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಬೆಂಬಲ ನೀಡಿದವು. ಕೋಮುವಾದಿಗಳನ್ನು ಅಧಿಕಾರದಿಂದ ದೂರ ಇಡುವುದು. ದೇಶದ ಐಕ್ಯತೆ, ಸಮಗ್ರತೆ ಕಾಪಾಡುವುದು ಮತ್ತು ಅಲ್ಪಸಂಖ್ಯಾತರನ್ನು ಕೋಮುವಾದಿಶಕ್ತಿಗಳ ದಾಳಿಯಿಂದ ರಕ್ಷಿಸುವುದು ಜನರ ಬದುಕಿನ ಬವಣೆಗಳಿಗೆ ಪರಿಹಾರ ಇವ ಪ್ರಧಾನ ಪ್ರಶ್ನೆಗಳಾಗಿದ್ದವು.

ಯುಪಿಎ ವಿಶ್ವಾಸದ್ರೋಹ

216 ಸಂಸದರ ಬಲ ಹೊಂದಿದ್ದ ಯುಪಿಎ ಕೂಟಕ್ಕೆ 61 ಸಂಸದರ ಬಲ ಹೊಂದಿದ್ದ ಎಡಪಕ್ಷಗಳ ಬೆಂಬಲ ನಿರ್ಣಾಯಕವಾಗಿತ್ತು. ಎಡಪಕ್ಷಗಳ ಒತ್ತಡ ಹೋರಾಟಗಳ ನಡುವೆಯೂ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಆರಂಭಗೊಳ್ಳಲು 2 ವರ್ಷಬೇಕಾಯಿತು. ಅದರ ಜಾರಿ ಕೂಡ ಅಸಮರ್ಪಕವೇ. ರಾಜಕೀಯ ಇಚ್ಛಾಶಕ್ತಿಯ ಕೊರತೆ. ಅರಣ್ಯವಾಸಿಗಳ ಅರಣ್ಯ ಹಕ್ಕು ಕಾಯ್ದೆ ಜಾರಿಗೆ ಬರಲು ನಾಲ್ಕು ವರ್ಷಗಳ ಕಾಲ ಎಡಪಕ್ಷಗಳು ಸೆಣಸಬೇಕಾಯಿತು. ಕೃಷಿ ಬಿಕ್ಕಟ್ಟಿಗೆ ಕೊಂಚ ಪರಿಹಾರ ನೀಡುವ ಕೃಷಿ ಸಾಲ ಮನ್ನಾ ಮಾಡಿದ್ದು ಕೂಡ ಯುಪಿಎ ಸರ್ಕಾರದ ಕೊನೆಯ ವರ್ಷದಲ್ಲಿ, ಮಾಹಿತಿ ಹಕ್ಕು ಕಾಯ್ದೆ ಬಂದಿದ್ದರೂ ಹಲವು ಸಂಕೀರ್ಣ ನಿಯಮಾವಳಿಗಳ ತೊಡಕುಗಳನ್ನು ಸೃಷ್ಟಿಸಲಾಗಿದೆ. ಶಿಕ್ಷಣಕ್ಕೆ ಜಿಡಿಪಿಯ ಶೇ.6 ಭಾಗ, ಆರೋಗ್ಯಕ್ಕೆ ಶೇ.3 ಭಾಗ ಎಂಬುದೆಲ್ಲಾ ಬರೀ ಮಾತಾಯ್ತು. ಕೃತಿಯಲ್ಲಿ ಕಾಣಲಿಲ್ಲ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ತನ್ನ ಪ್ರಣಾಳಿಕೆಯ ಅಂಶ ಎಂದು ಕಾಂಗ್ರೆಸ್ ಬೀಗುತ್ತದೆ. ಸ್ವಾತಂತ್ರ್ಯ ನಂತರ ಭೂ ಸುಧಾರಣೆಯ ಕುರಿತು ಮೊದಲು ಮಾತನಾಡಿದ್ದು ಕಾಂಗ್ರೆಸ್ ಪಕ್ಷ. ಆದರೆ ಅದನ್ನು ಮೊದಲು ಜಾರಿಗೆ ತಂದದ್ದು ಎಡ ನೇತೃತ್ವದ ಕೇರಳ, ಪಶ್ಚಿಮಬಂಗಾಳ ಸರ್ಕಾರಗಳು. ಹಾಗೆಯೇ ಗ್ರಾಮೀಣ ಖಾತ್ರಿ ವಿಷಯದಲ್ಲಿಯೂ ಎಡಪಕ್ಷಗಳ ಒತ್ತಡದಿಂದಲೇ ಅಷ್ಟಿಷ್ಟು ಜಾರಿಯಾಗುವಂತಾಗಿದ್ದು.

ನವ ಉದಾರೀಕರಣ ನೀತಿಗೆ



ಪ್ರತಿರೋಧ-ತಪ್ಪಿದ ಅನಾಹುತ

ಸಮಾನ ಕನಿಷ್ಠ ಕಾರ್ಯಕ್ರಮವನ್ನು ಉಲ್ಲಂಘಿಸುವ ಉದಾರೀಕರಣದ ನೀತಿಗಳನ್ನು ಜಾರಿಗೆ ತರಲು ಯುಪಿಎ ಸರ್ಕಾರ ಸದಾ ತುಡಿಯುತ್ತಲೇ ಇತ್ತು. ರೂಪಾಯಿಯ ಸಂಪೂರ್ಣ ಪರಿವರ್ತನೀಯತೆ, ವಿದೇಶಿ ಬ್ಯಾಂಕುಗಳಿಗೆ ಭಾರತದ ಖಾಸಗಿ ಬ್ಯಾಂಕುಗಳನ್ನು ಸಂಪೂರ್ಣ ವಶಕ್ಕೆ ತೆಗೆದುಕೊಳ್ಳುವ ಹಕ್ಕು ನೀಡುವುದು, ಪಿಂಚಣಿ ಹಣದ ಖಾಸಗೀಕರಣ, ವಿಮಾ ರಂಗದಲ್ಲಿ ವಿದೇಶಿ ಬಂಡವಾಳದ ಪಾಲು ಹೆಚ್ಚಿಸಲು ಅವಕಾಶ ನೀಡುವ

ಪುಟ 14ಕ್ಕೆ

ಎಲ್ಲಿದೆ ಪರ್ಯಾಯ ?

ಈಗ ಎಲ್ಲಿದೆ ಅಂತಹ ರಾಜಕೀಯ ಪರ್ಯಾಯ ಎಂಬ ಪ್ರಶ್ನೆಗಳು ಆಗಾಗ ಕೇಳಿಬರುತ್ತಿವೆ.

ಕಾಂಗ್ರೆಸ್ಸೇತರ ಬಿಜೆಪಿಯೇತರ ರಾಜಕೀಯ ಶಕ್ತಿಗಳು, ಚುನಾವಣೆ ನಂತರದ ರಾಜಕೀಯ ಮೈತ್ರಿ ಸಾಧಿಸಿ ಸರ್ಕಾರ ರಚಿಸಿರುವ ಉದಾಹರಣೆಗಳು ನಮ್ಮಮುಂದಿವೆ. 1989ರಲ್ಲಿ ವಿ.ಪಿ.ಸಿಂಗ್‌ರವರು ಪ್ರಧಾನಿಯಾದಾಗಿನ ಸಂದರ್ಭ, 1996 ರಲ್ಲಿ ಸಂಯುಕ್ತ ರಂಗ ಸರ್ಕಾರ ರಚಿಸಿದ ಸಂದರ್ಭದಲ್ಲಿ ಹೀಗೆಯೇ ಆದದ್ದು. ಕೊನೆಗೆ 2004ರಲ್ಲಿ ಸರ್ಕಾರ ರಚಿಸಿದ ಯುಪಿಎ ಒಕ್ಕೂಟ ಸಹ ಚುನಾವಣೆಯ ನಂತರವೇ ರೂಪುಗೊಂಡಿದ್ದು. ಭಾರತ ಎದುರಿ ಸುತ್ತಿರುವ ಸವಾಲು ಮತ್ತು ಪರಿಸ್ಥಿತಿಯನ್ನು ನೋಡಿದರೆ ಮತ್ತೊಮ್ಮೆ ಅಂತಹದ್ದೆ ಸನ್ನಿವೇಶ ಬರಲಿದೆ ಎಂಬುದು ಖಚಿತ ವಿದೆ.

ಎಲ್ಲಿದೆ ಮೂರನೇ ರಂಗ?

1996ರ ಲೋಕಸಭಾ ಚುನಾವಣೆಗಳು ನಡೆಯುವ ಸಂದರ್ಭ. ಸಿಪಿಐ(ಎಂ) ನೇತಾರ ಹರ್‌ಕಿಷನ್ ಸಿಂಗ್ ಸುರ್ಜೀತ್ ಅವರಿಗೆ ಈ ಮೇಲಿನ ಪ್ರಶ್ನೆಯನ್ನು ಪತ್ರಕರ್ತರು ಕೇಳಿದ್ದರು. ಆಗ ಚುನಾವಣಾ ಫಲಿತಾಂಶ ಬಂದ ಮೇಲೆ ನೋಡಿ ಎಂದಿದ್ದರು ಸುರ್ಜೀತ್. ನಂತರ ಜನತಾದಳದ ಎಚ್.ಡಿ.ದೇವೇಗೌಡರು ದೇಶದ ಪ್ರಧಾನಿಯಾಗಿದ್ದು, ಸಂಯುಕ್ತ ರಂಗದ ಸರ್ಕಾರ ಅಧಿಕಾರಕ್ಕೇರಿದ್ದು ಈಗ ಇತಿಹಾಸ.

1991 ರಿಂದ 1996 ರವರೆಗೆ ಸರ್ಕಾರ ನಡೆಸಿದ ಕಾಂಗ್ರೆಸ್‌ನ್ನು ಕಾಂಗ್ರೆಸ್‌ಗೆ ಮತ ನೀಡಿದ್ದ ಮತದಾರರಲ್ಲಿ ಮೂವರಲ್ಲಿ ಒಬ್ಬರು ತಿರಸ್ಕರಿಸಿದ್ದರು. 2004ರವರೆಗೆ ಅಧಿಕಾರ ನಡೆಸಿದ ಎನ್‌ಡಿಎಗೆ ಹಿಂದೆ ಮತ ನೀಡಿದ್ದ ಶೇ.17 ಜನರು ತಿರಸ್ಕರಿಸಿದ್ದರು. 2004 ರ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳೂ ತಲಾ ಶೇ.1.6 ರಷ್ಟು ಮತವನ್ನು ಕಳೆದುಕೊಂಡವು. ಕಾಂಗ್ರೆಸ್ ಶೇ.26.7 ಮತ್ತು ಬಿಜೆಪಿ ಶೇ.22.2 ಮತವನ್ನು ಗಳಿಸಿದವು. ಬಿಜೆಪಿಯ ಸ್ಥಾನಗಳಿಕೆ 182 ರಿಂದ 138ಕ್ಕೆ ಇಳಿಯಿತು. ಕಾಂಗ್ರೆಸ್‌ನ ಸ್ಥಾನಗಳಿಕೆಯೂ 114 ರಿಂದ 145ಕ್ಕೆ ಹೆಚ್ಚಿತು. ಸ್ವಲ್ಪ ಮಟ್ಟಿಗೆ ಆಶ್ಚರ್ಯ ಎನ್ನಬಹುದಾದ ಈ ರೀತಿಯ ವ್ಯತ್ಯಾಸಗಳ ರಹಸ್ಯ ಇರುವುದು ಈ ಪಕ್ಷಗಳು ಬೆಸೆದ ರಾಜಕೀಯ ಮೈತ್ರಿಗಳಲ್ಲಿ.

1999ರಲ್ಲಿ ಎನ್‌ಡಿಎಯಲ್ಲಿದ್ದ ಬಿಜೆಪಿ ಮಿತ್ರ ಪಕ್ಷಗಳು 118 ಸ್ಥಾನಗಳನ್ನು ಗೆದ್ದಿದ್ದವು. 2004ರಲ್ಲಿ ಅದು ಕೇವಲ 51ಕ್ಕೆ ಇಳಿಯಿತು. ಅದಕ್ಕೆ ವಿರುದ್ಧವಾಗಿ ಕಾಂಗ್ರೆಸ್ ಮಿತ್ರಪಕ್ಷಗಳು 71 ಸ್ಥಾನಗಳನ್ನು ಗೆದ್ದವು. ಎಡಪಕ್ಷಗಳ 61 ಸಂಸದರ ಬಾಹ್ಯ ಬೆಂಬಲ ಸೇರಿ ಸರ್ಕಾರ ಬಹುಮತ ಗಳಿಸಿತು.

ಇಂದಿನ ಪರಿಸ್ಥಿತಿಯನ್ನು ನೋಡಿದರೆ ಬಿಜೆಪಿಯೇತರ, ಕಾಂಗ್ರೇಸ್ಸೇತರ ಶಕ್ತಿಗಳು ರಾಜಕೀಯ ಪರ್ಯಾಯವಾಗಿ ಒಗ್ಗೂಡುವುದು ಖಂಡಿತವಾಗಿಯೂ ಸಾಧ್ಯವಿದೆ ಎಂಬುದು ಎದ್ದು ಕಾಣುತ್ತದೆ.

ಭಾರತ ದೇಶದ ರಾಜಕೀಯ ಸಾಗುತ್ತಿರುವ ದಿಕ್ಕನ್ನು ಬದಲಿಸುವಂತಹ ತೀರ್ಪನ್ನು ಜನತೆ ನೀಡಬೇಕಿದೆ. ಅದರಿಂದ ಮಾತ್ರವೇ ರಾಜಕೀಯ ಪರ್ಯಾಯವನ್ನು ರೂಪಿಸಲು ಸಾಧ್ಯವಿದೆ. ರಾಜಕೀಯ ಪರ್ಯಾಯವು ಕೋಮುವಾದಿ ಶಕ್ತಿಗಳನ್ನು ದುರ್ಬಲಗೊಳಿಸುವಂಥದ್ದು, ದೇಶದ ಸಾರ್ವಭೌಮತೆಯನ್ನು ರಕ್ಷಿಸು ವಂತಂಥದ್ದೂ, ಜನರ ಬದುಕನ್ನು ಉತ್ತಮ ಪಡಿಸುವಂಥದ್ದು ಆಗಿರ ಬೇಕಾಗುತ್ತದೆ. ಅಂತಹ ಪರ್ಯಾಯ ರೂಪಿಸಲು ನಾವೆಲ್ಲರೂ ಶ್ರಮಿಸಬೇಕಿದೆ.

'ನೀರ ಕಂಡಲ್ಲಿ ಮುಳುಗುವರಯ್ಯ'

ಧರ್ಮಾಂಧ ಸಂಘಪರಿವಾರಗಳ ಕೈಗಳಿಗೆ ಅಂಟಿದ ಅಮಾಯಕರ ರಕ್ತ ತೊಳೆಯುವುದು ಭಾರತದ ಯಾವುದೇ ನದಿಗಳಿಗೂ ಸಾಧ್ಯವಿಲ್ಲ. ಇನ್ನು ಅವರ ಮನಸ್ಸಿನ ಮೈಲಿಗೆ ತೊಳೆಯುವುದಂತೂ ದೂರದ ಮಾತು. ಕರ್ನಾಟಕದ ಜನತೆಗೆ ಬೇಕಿರುವುದು ಶುದ್ಧ ಕುಡಿಯುವ ನೀರೇ ಹೊರತು ಪುರೋಹಿತರ ಚೊಂಬು, ಉದ್ಧರಣೆಗಳ ಕಲುಷಿತ ನೀರಲ್ಲ.



ನೀರ ಕಂಡಲ್ಲಿ ಮುಳುಗುವರಯ್ಯ
ಮರವ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವಮರನ
ನೆಚ್ಚಿದವರು ನಿಮ್ಮ ನೆತ್ತ ಬಲ್ಲರು?
ಕೂಡಲ ಸಂಗಮದೇವ

ಈ ವಚನದಲ್ಲಿ ತುಂಬಾ ಸ್ಪಷ್ಟವಾಗಿ ಬಸವಣ್ಣನವರು ಅರ್ಥವಿಲ್ಲದ ಆಚರಣೆ, ಮೌಢ್ಯ ತುಂಬುವ ಧಾರ್ಮಿಕ ಕಂದಾಚಾರಗಳನ್ನು ವಿಡಂಬಿಸಿದ್ದಾರೆ. ಇಲ್ಲಿ ಕ್ರಾಂತಿಕಾರಿ ಸುಧಾರಣಾವಾದಿ ಬಸವಣ್ಣನವರಿಗೆ ಯಾರದೇ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟುಮಾಡುವ ಉದ್ದೇಶವಿರಲಿಲ್ಲ. ಆಸ್ತಿಕ ಪರಂಪರೆಯ ಮುಗ್ಧತೆಯನ್ನು ಅಣಕಿಸುವ ಸಂಕುಚಿತತೆಯೂ ಇರಲಿಲ್ಲ. ಆದರೆ ಜನಸಾಮಾನ್ಯರ ಅಜ್ಞಾನ, ಅಸಹಾಯಕತೆಗಳ ಬಗ್ಗೆ ಸೌಹಾರ್ದ ಜನತೆಯ ಬದುಕಿನ ಬಗೆಗೆ ತೀವ್ರ ಕಾಳಜಿಯಿಲ್ಲದ ಧರ್ಮಾಂಧರು. ದೇವರು ಮತ್ತು ಧರ್ಮದ ಹೆಸರಿನಲ್ಲಿ ಸಾಮಾನ್ಯ ಜನತೆಯ ದಿಕ್ಕು ತಪ್ಪಿಸುತ್ತಿರುವ, ತನ್ಮೂಲಕ ಜನರ ಮೌಢ್ಯವನ್ನು ಬಂಡವಾಳ ಮಾಡಿಕೊಂಡು ದುರಾಕ್ರಮಣ ನಡೆಸುತ್ತಿರುವುದನ್ನು ಇವರು ನೇರವಾಗಿ ಖಂಡಿಸುತ್ತಾರೆ. ಜನತೆಯ ಕಣ್ಣಿಗೆ ಜಬರದಸ್ತಿನಿಂದ ಕಟ್ಟಲಾಗಿದ್ದ ಪಾಪ ಭೀರುತ್ವದ ಪರದೆಯನ್ನು ಕಿತ್ತೆಸೆಯುವ ಸಾಹಸ ಮಾಡುತ್ತಾರೆ. ಹೀಗೆಂದೇ ಅವರು ವೈದಿಕ ಸಂಕಥನಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಹರಿಬಿಟ್ಟಿದ್ದ ಕಂದಾಚಾರಗಳನ್ನು ಬಯಲಿಗೆಳೆಯುತ್ತಾರೆ. ಅಷ್ಟೇ ಅಲ್ಲ ಅಂಥ ನಂಬಿಕೆಗಳ ಹಿಂದಿರುವ ಪೊಳ್ಳುತನ, ಭ್ರಮೆಗಳನ್ನು ಒಡೆಯುತ್ತಾರೆ.

ಮೂಗು ಮುಚ್ಚಿ ಮುಳುಗುವುದರಿಂದ

ಪವಿತ್ರವಾದ ನದಿ, ಕೆರೆ, ಹಳ್ಳಗಳಲ್ಲಿ ಮೂಗು ಮುಚ್ಚಿ ಮುಳುಗುವುದರಿಂದ ಪಾಪ ಪರಿಹಾರವಾಗುತ್ತದೆ, ಅಥವಾ ರೋಗರುಜಿನಗಳು ಮಾಯವಾಗುತ್ತವೆ. ಕೆಲವೊಂದು ಗಿಡ, ಮರ, ಸಸ್ಯ, ಕಂಟಿಗಳಿಗೆ ಸುತ್ತು ಹಾಕುವುದರಿಂದ ಬಂಜೆಯರಿಗೆ ಮಕ್ಕಳಾಗುತ್ತವೆ. ಬಂದ ಕಂಟಕಗಳು ಮಾಯವಾಗುತ್ತವೆ ಎಂಬಿತ್ಯಾದಿ ತಳಬುಡವಿಲ್ಲದ ನಂಬಿಕೆಗಳನ್ನು ಪುರೋಹಿತವರ್ಗ ಶತಮಾನಗಳಿಂದಲೂ ಜನರಲ್ಲಿ ತುಂಬುತ್ತ ಬಂದಿದೆ. ಇಂಥ ಲೆಕ್ಕವಿಲ್ಲದಷ್ಟು ನಂಬಿಕೆಗಳಿಗೆ ಈ ಕ್ಷಣದವರೆಗೂ ಯಾವುದೇ ತಾರ್ಕಿಕ, ವೈಜ್ಞಾನಿಕ ತಾತ್ವಿಕ ಕಾರಣಗಳು ಸಿಕ್ಕಿಲ್ಲ. ಯಾವುದೇ ಪರಿಣಾಮಗಳು ಇಂಥ ನಂಬಿಕೆಗಳಿಂದ ದೊರಕಿಲ್ಲವಾದರೂ ಪುರೋಹಿತ ವರ್ಗ ಮಾತ್ರ ಕಾಲಕ್ಕೆ ತಕ್ಕ ಹೊಸ ಪರಿಭಾಷೆ, ಹೊಸ ಗಿಮಿಕ್‌ಗಳೊಂದಿಗೆ ಇಂಥ ನಂಬಿಕೆಗಳನ್ನು ತನ್ನ ಲಾಭಕ್ಕಾಗಿ ಪೋಷಿಸಿಕೊಂಡುಬರುತ್ತಿದೆ. ಇದಕ್ಕೆ ಜ್ವಲಂತಸಾಕ್ಷಿ ಎಂದರೆ ಮೊನ್ನಿನ ಶಿವರಾತ್ರಿಯಂದು ಮುಜರಾಯಿ ಇಲಾಖೆಯ ಸಚಿವರು ರಾಜ್ಯದ 175 ತಾಲ್ಲೂಕುಗಳ ಎಲ್ಲ 400 ಪ್ರಮುಖ ದೇವಸ್ಥಾನಗಳಿಗೆ (ಪವಿತ್ರ) ಗಂಗಾಜಲ ವಿತರಿಸಿದ್ದು. ದೂರದ ಹರಿದ್ವಾರದಿಂದ ಟ್ಯಾಂಕರ್‌ಗಳಲ್ಲಿ ನಲವತ್ತು ಸಾವಿರ ಲೀಟರ್‌ಗಟ್ಟಲೆ ನೀರು ತರಿಸಿದ್ದು, ನೀರಿಗಾಗಿ ಸಾವಿರಾರು ಕ್ಯಾನ್ ಖರೀದಿಸಿದ್ದು, ಎಲ್ಲ ಕಡೆ ವಾಹನಗಳ ಮೂಲಕ ಗಂಗಾಜಲ ಕಳಿಸಿದ್ದು, ಇದಕ್ಕೆಲ್ಲ ಸರಕಾರ ಕೋಟಿಗಟ್ಟಲೆ ಪ್ರಮಾಣದ ಜನತೆಯ ಹಣ ಬಳಸಿದ್ದು ಮೌಢ್ಯದ ಪರಮಾವಧಿಯಲ್ಲದೆ ಮತ್ತೇನೂ ಅಲ್ಲ.


ಕರ್ನಾಟಕದ ಪ್ರತಿಶತ 70 ರಷ್ಟು ಹಳ್ಳಿಗಳಿಗೆ ಇವತ್ತಿಗೂ ಕುಡಿಯಲು ಶುದ್ಧನೀರು ದೊರಕಿಸದ ಸರಕಾರ ಗಂಗಾಜಲ ಎಂಬ ಭ್ರಮೆಯಲ್ಲಿ ಪುರೋಹಿತರ ಉದ್ಧರಣೆಯಿಂದ ಹನಿ ನೀರು ತೊಟಕಿಸುತ್ತಿರುವುದು ಎಂಥ ವಿಪರ್ಯಾಸ. ನದಿ, ಕೆರೆಕಟ್ಟೆಗಳನ್ನು ಖಾಸಗಿ ಒಡೆತನಕ್ಕೆ ನೀಡಿ ಮಿನರಲ್ ವಾಟರ್ ದಂಧೆಯಲ್ಲಿ ಕುಡಿಯುವ ನೀರಿಗೆ ಸಂಚಕಾರ ತಂದೊಡ್ಡಿರುವ ಆಳರಸರು ಜನರ ನಂಬಿಕೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಪರಿಗೆ ನಿಸರ್ಗವೇ ಛೀಮಾರಿ ಹಾಕೀತು. ಜಲ ಅಥವಾ ನೀರು ಎಂದರೆ ಬದುಕು, ಜೀವನ ಎಂದೂ ಅರ್ಥಗಳಿವೆ.

'ಗಂಗೆ' ಎಂದರೆ

ಭಾರತೀಯರಿಗೆ ಗಂಗೆ ಎಂದರೆ ನೀರು. ಅದು ಎಲ್ಲ ಕಡೆ ಇರುವ ನೀರು. ಬದುಕಿಗೆ ಅತ್ಯಂತ ಅವಶ್ಯವಿರುವ ಕೇವಲ ನೀರು. ಆದ್ದರಿಂದ ಎಲ್ಲೆಲ್ಲೂ ಹರಡಿರುವ ನೀರನ್ನು ನಮ್ಮವರು ಗಂಗೆ, ಗಂಗಾಮಾತಾ, ಗಂಗಾಮಾಯಿ, ಗಂಗೀತಾಯಿ ಎಂದೇ ಕರೆಯುತ್ತಾರೆ. ನಮ್ಮದು ಭೂಮಿ ಮತ್ತು ನೀರಿನ ಸಂಸ್ಕೃತಿ. ಎಂತಲೇ ಗ್ರಾಮೀಣರು ಮದುವೆ ಮುಂತಾದ ಶುಭಕಾರ್ಯಗಳು ನೆರವೇರಿಸುವುದಕ್ಕಿಂತ ಮೊದಲು ಗಂಗಾಪೂಜೆ, ಗಂಗಾಪೂಜೆಗೆ ಹೋಗುತ್ತಾರೆ. ತಮ್ಮೂರಿನಲ್ಲಿರುವ ನದಿ, ಹಳ್ಳ, ಭಾವಿ ಯಾವುದೇ ಇರಲಿ ಬಾಜಾಬಜಂತ್ರಿ ನಿಬ್ಬಣದೊಂದಿಗೆ ತೆರಳಿ ನೀರನ್ನು ಪೂಜಿಸಿ ಮುಂದಿನ ಕಲಾಪಗಳಲ್ಲಿ ತೊಡಗುತ್ತಾರೆ. ಇತ್ತೀಚೆಗೆ ನಗರಗಳಲ್ಲಿ ಜನತೆ ತಮ್ಮ ಮನೆಯಲ್ಲಿರುವ ಕೊಳವೆ ಭಾವಿ, ಸಂಪು, ಏನೂ ದೊರೆಯದಿದ್ದರೆ ಕಾರ್ಪೊರೇಷನ್ ನಲ್ಲಿಯಾದರೂ ಪೂಜಿಸಿ ಗಂಗವ್ವ ಗಂಗಾಮಾಯಿ ಎಂದು ಕೈಮುಗಿಯುತ್ತಾರೆ. ಇದು ನೀರಿನ ಮಹತ್ವ ಮತ್ತು ಜನತೆಯಲ್ಲಿ ನೀರಿನ ಬಗೆಗಿರುವ ಗೌರವಾದರಗಳ ಪ್ರತೀಕವಾಗಿ ನಡೆದುಕೊಂಡು ಬಂದಿರುವ ಆಚರಣೆ. ಇಂಥ ನಂಬಿಕೆಗಳ ಹಿಂದೆ ಜನತೆಯ ಆಸ್ತಿಕ ಮನಸ್ಸಿನ ಕೃತಜ್ಞತೆ ಧನ್ಯತಾಭಾವಗಳು ಕಂಡುಬಂದರೆ; ಇಂಥ ನಂಬಿಕೆಗಳನ್ನು ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುವ ಪುರೋಹಿತವರ್ಗ ಮಾತ್ರ ಯಾವತ್ತೂ ಮೋಸ ಮಾಡುತ್ತಲೇ ಬಂದಿದೆ.

ಜೀವದಾಯಿನಿ


ಭಾರತೀಯರು ಒಟ್ಟು ನೀರನ್ನು ಗಂಗೆ ಎಂದು ಕರೆದುಕೊಂಡು ಬರುತ್ತಿರುವುದಕ್ಕೆ ನಮ್ಮ ನದಿ ಸಂಸ್ಕೃತಿಯ ಸ್ಮೃತಿಗಳು ನೈಸರ್ಗಿಕ ಸಮೃದ್ಧಿ ಭೌಗೋಳಿಕ ವಿಸ್ಮಯಗಳು ಕಾರಣವಾಗಿವೆ. ಗಂಗಾನದಿ ಭಾರತದ ಪ್ರಮುಖ ನದಿಗಳಲ್ಲೊಂದು. ಅದಕ್ಕೂ ಮುಂದುವರೆದು ಜಾಗತಿಕ ಮಹತ್ವ, ಬೆಲೆಯುಳ್ಳ ನದಿಗಳಲ್ಲಿ ಒಂದಾಗಿದೆ. ಏಕೆಂದರೆ ಜಗತ್ತಿನ ಸೌಂದರ್ಯಾದ್ಭುತ ಖಣಿಯಾಗಿರುವ ಶ್ವೇತ ಹಿಮಚ್ಛಾದಿತ ಹಿಮಾಲಯದ ಗಿರಿಶಿಖರದಿಂದ ಹರಿದುಬರುವ ಗಂಗಾನದಿಯು ತನ್ನ ಪಯಣದಲ್ಲಿ ಹಲವಾರು ಗಿರಿ,ಕಂದರ, ಕಾಡು, ಮೇಡುಗಳನ್ನು ಹಾದುಬರುತ್ತದೆ. ಹಾಗೆ ಬರುವಾಗ ಅಪಾರ ಲವಣ ಸಂಪತ್ತು, ಆರೋಗ್ಯ ವರ್ಧನೆಗೆ ಸಹಾಯವಾಗುವಂತಹ ಘಟಕಗಳನ್ನು ಮೈಗೂಡಿಸಿಕೊಂಡು ಬರುತ್ತದೆ. ಶುಭ್ರ ಹಿಮವೇ ಕರಗಿಬರುವಾಗ ನೈಸರ್ಗಿಕ ಸಂಪತ್ತಿನ ಭಾಗವಾಗಿ ಶುದ್ಧ ಆರೋಗ್ಯಯುತ



ಜೀವದಾಯಿನಿ ನೀರು ಅಮೃತವಾಗಿಯೇ ದಕ್ಕುತ್ತದೆ. ಸಮುದ್ರ ಮಟ್ಟದಿಂದ ಸುಮಾರು 21400 ಅಡಿ ಎತ್ತರದಿಂದ ಹರಿದುಬರುವ ಇದರ ಉದ್ದ 1600 ಮೈಲಿ ಇದೆ. ಹಾಗೆ ನೋಡಿದರೆ ಗಂಗೆ ಪ್ರಪಂಚದ ದೊಡ್ಡ ನದಿಗಳ ಸಾಲಿನಲ್ಲಿ ನಿಲ್ಲುವುದಿಲ್ಲ. ಈಜಿಪ್ಟ್‌ನ ನೈಲ್ ನದಿಯು ಗಂಗೆಗಿಂತ ಎರಡು ಪಟ್ಟು ದೊಡ್ಡದಿದೆ. ವೋಲ್ಗಾ, ಅಮೆಜಾನ್, ಮಿಸ್ಸಿಸಿಪ್ಪಿ, ಯಾಂಕಿಸ್ಸ್ ಇವೆಲ್ಲಾ ಪ್ರಪಂಚದ ದೊಡ್ಡ ನದಿಗಳೇ ಸರಿ. ಆದರೆ ಗಂಗೆಯ ನೀರಿಗಿರುವಷ್ಟು ಆರೋಗ್ಯ ಸಂವರ್ಧಕ ಶಕ್ತಿ ಇವುಗಳಿಗಿಲ್ಲ. ಬ್ರಿಟಿಷರು ನೌಕಾ ಮಾರ್ಗವಾಗಿ ಭಾರತಕ್ಕೆ ಬರುವಾಗ ಕುಡಿಯಲೆಂದು ಥೇಮ್ಸ್ ನದಿಯ ನೀರನ್ನು ತುಂಬಿಕೊಂಡು ಬರುತ್ತಿದ್ದರು. 15 ದಿನಗಳವರೆಗೆ ಥೇಮ್ಸ್ ನದಿಯ ನೀರು ಕುಡಿಯುವಂತಿರುತ್ತದೆ. 15 ದಿನಗಳಿಗಿಂತ ಹೆ
ಥೇಮ್ಸ್ ನದಿಯ ನೀರು ಕುಡಿಯಲು ಯೋಗ್ಯವ
ಉಳಿಯುತ್ತಿರಲಿಲ್ಲ. ನಂತರ ಸಮೀಪದ ನದಿ ತೀ
ಹೋಗಿ ಕುಡಿಯುವ ನೀರು ತುಂಬಿಸಿಕೊ
ಬರುತ್ತಿದ್ದರು. ಆದರೆ ಭಾರತದಿಂದ ಲಂಡನ
ತೆರಳುವಾಗ ಗಂಗಾನದಿಯ ನೀರನ್ನು ತುಂಬಿಸಿಕೊ
ಹೋದರೆ ಅದನ್ನು ತಿಂಗಳುಗಟ್ಟಲೆ ಕುಡಿ
ಬಹುದಿತ್ತು. ಬಹುದಿನಗಳವರೆಗೆ ಕೆಡದ
ಉಳಿಯಬಲ್ಲ ನೈಸರ್ಗಿಕಶಕ್ತಿ ಗಂಗಾನದಿಯ ನೀ
ಇತ್ತು. ಎಂತಲೇ ಉತ್ತರ ಭಾರತದ ಜಯಪ
ಗ್ವಾಲಿಯರ್ ಉದಯಪುರ ಇತ್ಯಾದಿ ರಾಜಮನ
ದವರು ತಾವು ಯಾವುದೇ ದೇಶಕ್ಕೆ ಹೋದ
ಗಂಗೆಯ ನೀರನ್ನು ಹೊತ್ತುಕೊಂಡು ಹೋಗುತ್ತಿದ್ದ
ಕುಡಿಯಲು ಸ್ವಾದಿಷ್ಟ ಮತ್ತು ಆರೋಗ್ಯಪೂ
ಶಕ್ತಿವರ್ಧಕ ಗುಣಗಳಿರುವುದರಿಂದ
ಗಂಗಾಬಯಲು ಭಾರತೀಯ ಸಂಸ್ಕೃತಿಯ ತೊಟ್ಟ
ಎನಿಸಿಕೊಂಡಿತು. ನಮ್ಮ ಪ್ರಾಚೀನ ಸಾಹಿತ್ಯ, ಶಿ
ಪುರಾಣ ಕಾವ್ಯ ಚಿತ್ರಕಲೆಗಳಲ್ಲಿ ಗಂಗೆ
ಬಗೆಗಿರುವಷ್ಟು ಮಾಹಿತಿಗಳು ಉಳಿದ ಯಾವು
ನದಿಗಳ ಬಗೆಗೆ ದಾಖಲಾಗಿಲ್ಲ.

ಈಗೇನು?

ಇಂಥ ಪ್ರಮುಖ ನಿರ್ಮಲ ಜಲರಾಶಿಯ
ತುಂಬಿಕೊಂಡಿದ್ದ ಗಂಗೆ ಇಂದು ಏನಾಗಿದ್ದಾಳೆ ಗೊ
ನದಿಯ ಇಕ್ಕೆಲಗಳಿಂದಲೂ ಹರಿದುಬರುತ್ತಿ
ಬೃಹತ್ ಕಾರ್ಖಾನೆಯ ತ್ಯಾಜ್ಯವಸ್ತುಗಳಿಂದ ತು
ಗಬ್ಬೆದ್ದುಹೋಗಿದ್ದಾಳೆ. ವಿಷಾನಿಲ, ಹಾನಿಕಾ
ರಾಸಾಯನಿಕಗಳು, ಭಕ್ತಾದಿಗಳು ದಬ್ಬಿಬಿಡುವ ಹೂ
ರಾಶಿ, ಪ್ಲಾಸ್ಟಿಕ್ ಕಸಕಡ್ಡಿಗಳಿಂದ ಇಡುಕಿರಿ
ರೋಗಗ್ರಸ್ಥಳಾಗಿದ್ದಾಳೆ. ಇಂದಿನ ಸಂದರ್ಭ
ಯಂತೂ ಯಾತ್ರಾಸ್ಥಳಗಳಾದ ಹರಿದ್ವಾರ, ಋಷಿಕೆ
ವಾರಣಾಸಿ, ಅಲಹಾಬಾದ್ ಮುಂತಾದ
ಹರಿಯುವ ಗಂಗೆಯ ನೀರನ್ನು ನೇರವಾಗಿ ಕುಡಿ
ರೋಗ ಕಟ್ಟಿಟ್ಟ ಬುತ್ತಿ. ಮಲೇರಿಯಾ, ಕ
ಟೈಫಾಯ್ಡ್ ಮುಂತಾದ ರೋಗಗಳ ವೈರಸ್‌ಗಳ
ಕೂಡಿದ ಈ ನೀರು ಇಂದು ಸರ್ವಥಾ ಕುಡಿಯ
ಯೋಗ್ಯವಾಗಿ ಉಳಿದಿಲ್ಲ. ತತ್‌ಕಾರಣವಾಗಿ
1980 ರ ದಶಕದಲ್ಲಿ "ಗಂಗಾ ಸಾಫ್ ಕರೋ
ಗಂಗೆಯ ಶುದ್ಧೀಕರಣ ಆಂದೋಲನವ
ಕೈಗೊಳ್ಳಬೇಕಾಯ್ತು. ಗಂಗಾ ಕಲುಷಿತದ ಕಥೆ ತು
ದೀರ್ಘವಾಗಿದೆ. ಗಂಗಾ, ಕಾವೇರಿ ಜಲಾನ
ಪ್ರದೇಶಗಳ ಪರಿಸರ ರಕ್ಷಣೆ ಬಗೆಗೆ ಗಮನ ಹರಿ
ಪ್ರಭುಗಳು ಗಂಗಾಜಲವನ್ನು ತೀರ್ಥದಂತೆ ವಿತರಿಸ
ನಾಟಕ ಮಾಡುತ್ತಿರುವುದಿದೆಯಲ್ಲ; ಇ
ಜನವಿರೋಧಿ ಕೊಳಕು ಮನಸುಗಳು ಶುದ್ಧೀಕರಿಸ
ಸದ್ಯ ಗಂಗಾನದಿಗಂತೂ ಸಾಧ್ಯವಿಲ್ಲ. ಆದರ
ಧರ್ಮಾಂಧ ಸಂಘಪರಿವಾರಗಳ ಕೈಗಳಿಗೆ ಅಂಟ
ಅಮಾಯಕರ ರಕ್ತ ತೊಳೆಯುವುದು ಭಾರ
ಯಾವುದೇ ನದಿಗಳಿಗೂ ಸಾಧ್ಯವಿಲ್ಲ. ಇನ್ನು ಅ
ಮನಸ್ಸಿನ ಮೈಲಿಗೆ ತೊಳೆಯುವುದಂತೂ ದೂ
ಮಾತು. ಕರ್ನಾಟಕದ ಜನತೆಗೆ ಬೇಕಿರುವುದು
ಕುಡಿಯುವ ನೀರೇ ಹೊರತು ಪುರೋಹಿ
ಚೊಂಬು, ಉದ್ಧರಣೆಗಳ ಕಲುಷಿತ ನೀರಲ್ಲ.



'15 ದಿನಗಳ ಲೇ ಆಫ್‌ಗೆ ಅನುಮತಿ ಕೊಡಿ'

ರಾಜ್ಯ ಸರ್ಕಾರಕ್ಕೆ ಫೆಡರೆಲ್ ಮೊಗಲ್ ಮೊರೆ

ಬೆಂಗಳೂರಿನ ಯಲಹಂಕದಲ್ಲಿರುವ ಫೆಡರಲ್ ಮೊಗಲ್ ಗಯುಟ್ಸ್ (ಈ ಹಿಂದೆ ಎಸ್ಕಾರ್ಟ್ಸ್ ...ಯುಟ್ಸ್‌ನ ಆಡಳಿತ ವರ್ಗ ಆಟೋ ಉದ್ದಿಮೆಯಲ್ಲಿನ ಹಿಂಜರಿತದಿಂದಾಗಿ ಪ್ರತಿ ತಿಂಗಳು 15 ದಿನಗಳ ಲೇಆಫ್ ಮಾಡಲು ಕರ್ನಾಟಕ ಸರಕಾರದ ಅನುಮತಿ ಕೇಳಿದೆ. ಮಾರ್ಚ್ 2ರಂದು ಕಂಪನಿಯ ಹಿರಿಯ ಅಧಿಕಾರಿಗಳು ಈ ಬಗ್ಗೆ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿದ್ದಾರೆ ಹಿಂದು ವರದಿಯಾಗಿದೆ. ಈ ಕಂಪನಿಯಲ್ಲಿ 1800 ಕಾರ್ಮಿಕರು ದುಡಿಯುತ್ತಿದ್ದಾರೆ. ಕಳೆದ ನವಂಬರಿನಲ್ಲಿ ಆಡಳಿತ ಒಂದು ವರ್ಷದ ...ಒಲ ಆರು ದಿನಗಳ ಲೇಆಫ್‌ಗೆ ಒಪ್ಪಿಕೊಳ್ಳಬೇಕು. ಅಂದರೆ ಆ ಅವಧಿಯ ತಮ್ಮ ರಜಾಗಳನ್ನು ಬಿಡಬೇಕು ಎಂಬ ಪ್ರಸ್ತಾವವಿಟ್ಟಿತ್ತು. ಇಲ್ಲಿಯ ಕಾರ್ಮಿಕರಿಗೆ ವರ್ಷಕ್ಕೆ 16 ರಜೆಗಳು ಸಿಗುತ್ತಿವೆ. ಅಂದರೆ ಮುಂದಿನ ಒಂದು ವರ್ಷ ಕಾರ್ಮಿಕರು ಯಾವ ರಜೆಯನ್ನೂ ತೆಗೊಳ್ಳಬಾರದು ಎಂದಾಗುತ್ತದೆ. ಇದಕ್ಕೆ ಕಾರ್ಮಿಕರ ವಿರೋಧ ಬಂದುದರಿಂದ ಅದೀಗ 15 ದಿನಗಳ ಲೇಆಫ್‌ಗೆ ಅನುಮತಿ ಕೇಳಿದೆ, ಎಲ್ಲಾ ಕಾರ್ಮಿಕರನ್ನು ತೆಗೆದು ಕಾಂಟ್ರಾಕ್ಟ್ ಮೇಲೆ ಹೊಸಬರನ್ನು ತರುವುದು ಆಡಳಿತದ ಹುನ್ನಾರ ಎಂದು ಇಲ್ಲಿನ ಕಾರ್ಮಿಕ ಸಂಘಟನೆಯ ವಕ್ತಾರರು ಹೇಳುತ್ತಾರೆ.

ಕೈಗಾರಿಕಾ ವಿವಾದ ಕಾಯ್ದೆಯ ಪ್ರಕಾರ ಆಡಳಿತದ ಈ ಕೇಳಿಕೆಗೆ ಸರಕಾರ 60 ದಿನಗಳೊಳಗೆ ಈ ಬಗ್ಗೆ ಏನ್ನೂ ಹೇಳದಿದ್ದರೆ ಅನುಮತಿ ನೀಡಲಾಗಿದೆ ಎಂದು ಪರಿಗಣಿಸಬಹುದಂತೆ.

ಆಟೋ ಉದ್ಯಮಕ್ಕೊಂದು ಮಾದರಿ ಪ್ಯಾಕೇಜ್ ಸೀತಾರಾಂ ಯೆಚುರಿ ಪ್ರಸ್ತಾವ

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮ ಭಾರತದ ವಾಹನೋದ್ದಿಮೆಯ ಮೇಲೆ ಹೇಗೆ ಬಿದ್ದಿದೆ ಎಂಬುದನ್ನು ಕಳೆದ ಸಂಚಿಕೆಯಲ್ಲಿ ನೋಡಿದ್ದೀರಿ. ವಾಹನಗಳ ಮಾರಾಟದಲ್ಲಿ ಗಮನಾರ್ಹ ಇಳಿಮುಖತೆಯಿಂದ ಉದ್ದಿಮೆಗಳು ದುಡಿಮೆಯ ಅವಧಿಯನ್ನು ಕಡಿತ ಮಾಡುತ್ತಿವೆ. ಸರಕಾರ ತಮ್ಮನ್ನು ಪಾರು ಮಾಡಬೇಕೆಂದು ಉದ್ದಿಮೆದಾರರು ಕೇಳುತ್ತಿದ್ದಾರೆ. ಸರಕಾರವೂ ಅವರ ಬೇಡಿಕೆಯನ್ನು ಪೂರೈಸುವ ಬಗ್ಗೆ ಯೋಚಿಸುತ್ತಿರುವಂತೆ ಕಾಣುತ್ತಿದೆ. ಈ ಸಂದರ್ಭದಲ್ಲಿ ಉದ್ದಿಮೆದಾರರನ್ನು ಪಾರು ಮಾಡುವ ಪ್ಯಾಕೇಜಿಗಿಂತ ಉದ್ದಿಮೆಗೆ ಉತ್ತೇಜನ ನೀಡುವ ಪ್ಯಾಕೇಜಿನ ಬಗ್ಗೆ ಯೋಚಿಸಬೇಕು ಎನ್ನುತ್ತಾ ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಸೀತಾರಾಂ ಯೆಚುರಿ ಹಣಕಾಸು ಇಲಾಖೆಯನ್ನು ನೋಡಿಕೊಳ್ಳುತ್ತಿರುವ ಪ್ರಣಬ್ ಮುಖರ್ಜಿಯವರಿಗೆ ಪತ್ರ ಬರೆದು ಒಂದು ...ವವನ್ನು ಮುಂದಿಟ್ಟಿದ್ದಾರೆ. ರಾಜ್ಯ ಸಾರಿಗೆ ...ಗಳನ್ನು ಬಲಪಡಿಸುವುದಕ್ಕೆ ಒತ್ತು ನೀಡುವ ಮೂಲಕ ವಾಹನೋದ್ದಿಮೆಗೆ ಉತ್ತೇಜನ ...ಗಿಸಬಹುದಾದ ಯೋಜನೆಯದು.

ಸಂಖ್ಯೆಯನ್ನು ಹೆಚ್ಚಿಸದಂತೆ ಈಗಿರುವ ನಿರ್ಬಂಧವನ್ನು ತೆಗೆದುಹಾಕಿ ಹೆಚ್ಚು ಬಸ್ಸುಗಳನ್ನು ಖರೀದಿಸಲು ಬಂಡವಾಳ ಒದಗಿಸಬೇಕು. ಇದಕ್ಕೆ ಎಷ್ಟು ಹಣ ಒದಗಿಸಬೇಕಾಗಬಹುದು, ಅದರಿಂದ ಎಂತಹ ಪ್ರಯೋಜನ ಸಾಧ್ಯ ಎಂಬುದರ ಲೆಕ್ಕಾಚಾರವನ್ನು ಯೆಚೂರಿಯವರು ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ.

ಒಂದು ಅಂದಾಜಿನ ಪ್ರಕಾರ ರಾಜ್ಯ ಸಾರಿಗೆ ಸಂಸ್ಥೆಗಳ ಸುಮಾರು 30,000 ಬಸ್ಸುಗಳು ತುಂಬಾ ಹಳೆಯದಾಗಿದ್ದು ಅವನ್ನು ಕೂಡಲೇ ಬದಲಿಸಬೇಕಾಗಿದೆ.

1. ಒಂದು ಪರಿಣತರ ಸಮಿತಿಯ ವರದಿಯಂತೆ 2006 ರಲ್ಲಿ ಭಾರತದ ಸಾರ್ವಜನಿಕ ಸಾರಿಗೆ ವಲಯಕ್ಕೆ 4,02,394 ಬಸ್ಸುಗಳು ಬೇಕಾಗಿದ್ದು ರಾಜ್ಯ ಸಾರಿಗೆ ಸಂಸ್ಥೆಗಳ ಬಳಿಯಿರುವುದು 1,13,000 ಬಸ್ಸುಗಳು ಮಾತ್ರ. ಅಂದರೆ ಇನ್ನೂ 2,89,394 ಬಸ್ಸುಗಳು ಬೇಕು. ಇದರಲ್ಲಿ 35 ಶೇ. ಖಾಸಗಿಯವರಿಗೆ ಬಿಡಬೇಕು ಎಂಬ ಪ್ರಸ್ತಾವವನ್ನು ಒಪ್ಪಿಕೊಂಡರೂ ರಾಜ್ಯ ಸಾರಿಗೆ ಸಂಸ್ಥೆಗಳಿಗೆ ಇನ್ನೂ 1,48,556 ಬಸ್ಸುಗಳು ಬೇಕು.

2. ಅಂದರೆ ಒಟ್ಟು 1,78,556 ಬಸ್ಸುಗಳು ಬೇಕು. ಇದಕ್ಕೆ ಸುಮಾರು 38,000 ಕೋಟಿ ರೂ. ಬೇಕು. ಇದು ಕಳೆದ ತಿಂಗಳು ಸರಕಾರ ಪ್ರಕಟಿಸಿದ ಪ್ಯಾಕೇಜಿನಷ್ಟೇ ಆಗುತ್ತದೆ. ಸರಕಾರ ಕೈಗೊಳ್ಳಬೇಕೆಂದಿರುವ ಇನ್ನೆರಡು ಮೆಟ್ರೋ ಯೋಜನೆಗಳಿಗಿಂತ ಈ ಖರ್ಚು ಹೆಚ್ಚೇನಲ್ಲ. ಆದ್ದರಿಂದ ಸರಕಾರ ತನ್ನ ಉತ್ತೇಜಕ ಯೋಜನೆಗಳ ಪರಿಮಿತಿಯನ್ನು ವಿಸ್ತರಿಸಿ ಆಟೋ ಉದ್ದಿಮೆಗೆ ಇದನ್ನು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಬೇಕೆಂಬ ಆದೇಶದೊಂದಿಗೆ ಒದಗಿಸಬೇಕು.

3. ಇದರಿಂದಾಗುವ ಪ್ರಯೋಜನೆಗಳೆಂದರೆ, ರಾಜ್ಯ ಸಾರಿಗೆ ಸಂಸ್ಥೆಗಳಿಗೆ ಬಸ್ ಚಾಸಿಗಳನ್ನು



ಒದಗಿಸುವ ಅಶೋಕ್ ಲೈಲ್ಯಾಂಡ್, ಟಾಟಾ ಮೋಟರ್ಸ್ ಮುಂತಾದ ಕಂಪನಿಗಳಿಗೆ ಭಾರೀ ಆರ್ಡರುಗಳು, ಆ ಮೂಲಕ ಹಿಂಜರಿತದಿಂದ ಕಾರ್ಮಿಕರ ಉದ್ಯೋಗಗಳಿಗೆ ಬಂದಿರುವ ಬೆದರಿಕೆ ನಿವಾರಣೆ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ವಿಸ್ತರಣೆಯಿಂದ ಇನ್ನಷ್ಟು ಉದ್ಯೋಗಾವಕಾಶಗಳ ಸೃಷ್ಟಿ, ಅಧೀನ ಮತ್ತು ಸಹಾಯಕ ಕೈಗಾರಿಕೆಗಳಲ್ಲಿ 8ರಿಂದ 10ಲಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗಬಹುದೆಂಬ ಪರಿಣತರ ಅಂದಾಜು, ರಾಜ್ಯ ಸಾರಿಗೆ ಸಂಸ್ಥೆಗಳು ಬಿಕ್ಕಟ್ಟಿನಿಂದ ಹೊರಬಂದು ರಾಜ್ಯ ಸರಕಾರಗಳಿಗೂ ವಾಹನ ತೆರಿಗೆ, ಮಾರಾಟ ತೆರಿಗೆ ಇತ್ಯಾದಿಗಳಿಂದ ಆದಾಯ ಹೆಚ್ಚಳ.

ಒಟ್ಟಿನಲ್ಲಿ ಇಡೀ ಆರ್ಥಿಕದಲ್ಲಿ ಚೈತನ್ಯ ಮೂಡಿಸಬಲ್ಲ ಈ ಯೋಜನೆಯನ್ನು ತ್ವರಿತವಾಗಿ ಪರಿಶೀಲಿಸಿ, ಅದನ್ನು ಸಾಕಾರಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೀತಾರಾಂ ಯೆಚೂರಿಯವರು ಸರಕಾರವನ್ನು ಆಗ್ರಹಿಸಿದ್ದಾರೆ.

ಪ್ರಣಬ್ ಮುಖರ್ಜಿಯವರು ಈ ಮೂಲಕ ಪಾರು(ಬೇಲೌಟ್) ಪ್ಯಾಕೇಜಿಗಿಂತ ಉತ್ತೇಜಕ(ಸ್ಟಿಮುಲಸ್) ಪ್ಯಾಕೇಜು ಹೆಚ್ಚು ಪರಿಣಾಮಕಾರಿ ಎಂಬ ಉದಾಹರಣೆಯನ್ನು ಮುಂದಿಡಬಲ್ಲರೇ? ಕಾದು ನೋಡಬೇಕು.

ಅಮೆರಿಕಾದಲ್ಲಿ ಎಐಜಿ ನಷ್ಟದ ಸುದ್ದಿಗೆ ಮುಂಬೈಯಲ್ಲಿ ಶೇರು ಮಾರುಕಟ್ಟೆ ಕುಸಿತ

ಕಳೆದ ಮಂಗಳವಾರ, ಮಾರ್ಚ್3ರಂದು ಮುಂಬೈ ಶೇರು ಮಾರುಕಟ್ಟೆ ಸೂಚ್ಯಂಕ ಕಳೆದ ಮೂರು ವರ್ಷಗಳಲ್ಲೇ ಅತೀ ಕೆಳಗಿನ ಮಟ್ಟಕ್ಕೆ ಇಳಿಯಿತು. ಇಲ್ಲಿ ಮಾತ್ರವಲ್ಲ ಜಗತ್ತಿನ ಎಲ್ಲೆಡೆ ಇಂತಹ ಕುಸಿತವಾಯಿತು. ಇದಕ್ಕೆ ಕಾರಣ ಅಮೆರಿಕಾದ ಅತಿ ದೊಡ್ಡ ವಿಮಾಕಂಪನಿ ಎಐಜಿ 6,000ಕೋಟಿ ಡಾಲರುಗಳ ನಷ್ಟ ಪ್ರಕಟಿಸಿದ್ದು (ಇದು ಅಮೆರಿಕನ್ ಕಾರ್ಪೊರೇಟ್ ವಲಯದಲ್ಲೆ ಅತಿ ದೊಡ್ಡ ನಷ್ಟವಂತೆ) ಮತ್ತು ಹೆಚ್‌ಎಸ್‌ಬಿಸಿ ಹೋಲ್ಡಿಂಗ್ಸ್‌ನ ಕಳೆದ ವರ್ಷದ ಆದಾಯದಲ್ಲಿ 70ಶೇ. ಇಳಿಕೆಯಾಗಿದ್ದು ಅದಕ್ಕೆ 1800ಕೋಟಿ ಡಾಲರುಗಳಷ್ಟು ಹೊಸ ಬಂಡವಾಳ ಬೇಕಾಗಿದೆ ಎಂಬ ಸುದ್ದಿ. ಒಟ್ಟಿನಲ್ಲಿ ಹಣಕಾಸು ಅನಿಶ್ಚಿತತೆಗೆ ಕೊನೆಯಿಲ್ಲ ಎಂಬ ಭಯ ಬಲವಾಗುತ್ತಿದೆ ಎಂಬುದರ ಸೂಚನೆಯಿದು ಎಂದು ಹೇಳಲಾಗುತ್ತಿದೆ. ○

ಕರಾವಳಿ ಮೇಲೂ 'ಆರ್ಥಿಕ ಸುನಾಮಿ ಅಲೆ'

ಬಂಡವಾಳಶಾಹಿಗಳ ತೌರೂರುಗಳಾದ ಅಮೇರಿಕಾ ಮತ್ತು ಬ್ರಿಟನ್‌ಗಳಿಂದ ಆರಂಭಗೊಂಡಿರುವ ಈ ಶತಮಾನದ 'ಜಾಗತಿಕ ಆರ್ಥಿಕ ಬಿಕ್ಕಟ್ಟು' ಭಾರತಕ್ಕೆ ನುಸುಳಿ ಈಗಾಗಲೇ ಆಟೋಮೊಬೈಲ್ ಕ್ಷೇತ್ರವನ್ನು ಹಾನಿ ಮಾಡಿದೆ. ಗಾರ್ಮೆಂಟ್ಸ್ ಉದ್ಯಮದಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಕಾರ್ಮಿಕರನ್ನು ಬೀದಿಗೆಸೆದಿದೆ. ಮತ್ತೊಂದೆಡೆ ಮಧ್ಯಮವರ್ಗದ ಯುವಜನರ ಕಾಮಧೇನುವಾಗಿದ್ದ ಮಾಹಿತಿ ತಂತ್ರಜ್ಞಾನ ಎಂಬ ಗೋಪುರ ಕುಸಿದು ಬೀಳುತ್ತಿವೆ. ಆದರೆ ಈ ಬಿಕ್ಕಟ್ಟಿನ ನೇರವಾದ 'ಕೌಟುಂಬಿಕ ಪರಿಣಾಮ'ವನ್ನು ನಾವು ನೋಡಬೇಕಾದರೆ ಭಾರತದ ಕರಾವಳಿ ಮತ್ತು ನೀವೊಮ್ಮೆ ಗಮನಹರಿಸಬೇಕು!

ಕೇರಳದ ಆರ್ಥಿಕತೆಯಲ್ಲಿ ಗಲ್ಫ್ ದೇಶಗಳಿಂದ ಕೇರಳಿಗ ಉದ್ಯೋಗಗಳು ಕಳಿಸುವ ಹಣಕ್ಕೆ ದೊಡ್ಡ ಪಾತ್ರವಿದೆ. ಇನ್ನೂ ಕರಾವಳಿ ಕರ್ನಾಟಕ ಜಿಲ್ಲೆಗಳಾದ ದ.ಕನ್ನಡ, ಉಡುಪಿ, ಉ.ಕನ್ನಡ ಜಿಲ್ಲೆಗಳ ಆರ್ಥಿಕತೆ ಯಲ್ಲಿ ಕೂಡ ಈ 'ಗಲ್ಫ್' ಆದಾಯಕ್ಕೆ ಪಾತ್ರವಿದೆ.

ಕರಾವಳಿಯಲ್ಲಿ ನಡೆಯುವ ಪ್ರತಿಯೊಂದು ಮದುವೆಯೂ, ಮಕ್ಕಳ ಶಿಕ್ಷಣ, ಹಿರಿಯರ ಆರೋಗ್ಯ ಹಾರೈಕೆಗೆ, ಶಸ್ತ್ರ ಚಿಕಿತ್ಸೆಯಂತಹ ವೆಚ್ಚಗಳಿಗೆ, ಮನೆ ನಿರ್ಮಾಣ, ಇತ್ಯಾದಿಗಳಲ್ಲಿ ಅವಲಂಬಿತವಾಗಿರುವುದು 'ಅರಬ್' ದೇಶಗಳಿಂದ ಬರುತ್ತಿರುವ ಹಣವನ್ನು. 'ಕೊಲ್ಲಿ' ದೇಶಗಳಲ್ಲಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟಿನ ಪರಿಣಾಮದಿಂದ ಅಲ್ಲಿನ 'ಕಟ್ಟಡ ನಿರ್ಮಾಣ' ಬಹುತೇಕ ಸ್ಥಗಿತಗೊಂಡಿದೆ. ಈ ಕಾರಣದಿಂದ ಈ ಒಂದು ತಿಂಗಳಲ್ಲೇ 'ದುಬೈ'ಯನ್ನು ತೊರೆಯುವವರ ಸಂಖ್ಯೆ 20 ಸಾವಿರ ದಾಟಲಿದೆಯಂತೆ! ಭಾರತವು ಪ್ರತಿ ವರ್ಷವೂ ಕೊಲ್ಲಿ ದೇಶಗಳಲ್ಲಿ ದುಡಿಯುತ್ತಿರುವ 'ಭಾರತೀಯರಿಂದಲೇ' ಸುಮಾರು 70 ಸಾವಿರ ಕೋಟಿ ವಿದೇಶಿ ವಿನಿಮಯಗಳಿಸುತ್ತಿತ್ತು ಎಂಬ ಅಂದಾಜಿದೆ. ಈ ಆದಾಯದ ಬಹುಪಾಲು ಕೇರಳದ ಪಾಲಾಗುತ್ತಿತ್ತು. ಉಳಿದಿದ್ದು, ಕರಾವಳಿ ಕರ್ನಾಟಕಕ್ಕೂ ಮತ್ತಷ್ಟು ತಮಿಳುನಾಡು, ಆಂಧ್ರಕ್ಕೂ ಸೇರುತ್ತಿತ್ತು.

ಆದರೀಗ... ಜಾಗತಿಕ ಆರ್ಥಿಕ ಕುಸಿತವೂ ಕರಾವಳಿ ಜನತೆಯ ಹಲವು ವರ್ಗಗಳ ಜೀವನಾಡಿಯಾಗಿದ್ದ 'ಪೋಸ್ಟ್' ಆಫೀಸ್‌ನ ಆರ್ಥಿಕತೆಯನ್ನೇ ಕುಸಿಯುವಂತೆ ಮಾಡಿರುವುದಂತೂ ಸತ್ಯ.

ಇನ್ಶೂರೆನ್ಸ್ ಪಾಲಿಸಿಗಳ ಸರೆಂಡರ್‌ನಲ್ಲಿ ಹೆಚ್ಚಳ

ಈ ಆರ್ಥಿಕ ಬಿಕ್ಕಟ್ಟಿನ ಸುನಾಮಿಯ ಅಲೆಯೂ ವಿವಿಧ ಕ್ಷೇತ್ರಗಳನ್ನು ಕಂಡು ಕೇಳರಿಯದ ರೀತಿಯಲ್ಲಿ ತಟ್ಟುತ್ತಿದೆ. ಇದರಿಂದ ಭಾರತದ 'ವಿಮಾ ಉದ್ದಿಮೆಯು' ಹೊರತಾಗಿಲ್ಲ!

ಪುಟ 11ಕ್ಕೆ

ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಜಾತ್ಯಾತೀತ ಶಕ್ತಿಗಳು ಸರ್ಕಾರ ರಚಿಸಲಿವೆ - ಪ್ರಕಾಶ್ ಕಾರಟ್



"2009 ರ ಚುನಾವಣಾ ಫಲಿತಾಂಶ 2004 ರ ಪುನರಾವರ್ತನೆಯಾಗುವುದಿಲ್ಲ. ನಾವು ಕೇಂದ್ರದಲ್ಲಿ ಒಂದು ಜಾತ್ಯಾತೀತತೆಯನ್ನು ಖಾತ್ರಿಪಡಿಸುವ ಹಾಗೂ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ತಲೆಬಾಗದ ಸರ್ಕಾರವೊಂದರ ರಚನೆಗಾಗಿ ಪ್ರಯತ್ನಿಸುತ್ತೇವೆ. ಬಿಜೆಪಿ ಮತ್ತು ಕಾಂಗ್ರೆಸ್ಸನ್ನು ಹೊರತುಪಡಿಸಿದ ಇಂತಹ ರಚನೆ ಮಾತ್ರವೇ ದೇಶದ ಐಕ್ಯತೆ ಮತ್ತು ಸಾರ್ವಭೌಮತೆಯನ್ನು ಕಾಪಾಡಬಲ್ಲುದು. ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಜಾತ್ಯಾತೀತ ಶಕ್ತಿಗಳು ಸರ್ಕಾರ ರಚಿಸಲಿವೆ."

ಹೀಗೆಂದು ಸ್ಪಷ್ಟವಾಗಿ ನುಡಿದವರು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್. ಜನವಿರೋಧಿ ನವ ಉದಾರೀಕರಣ ನೀತಿಗಳು ಹಾಗೂ ಕೋಮುವಾದದ ವಿರುದ್ಧ ದೃಢತೆಯಿಲ್ಲದ ಕೇಂದ್ರ ಯುಪಿಎ ಸರ್ಕಾರ ನೀತಿಗಳನ್ನು ಟೀಕಿಸಿದ ಕಾರಟ್ ಚುನಾವಣೆಗೆ ಮುಂಚೆಯೇ ಯುಪಿಎ ಒಡೆದುಹೋಗುವಂತೆ ಕಾಣುತ್ತಿದೆ ಎಂದೂ ಹೇಳಿದರು.

ಕೇರಳದಲ್ಲಿ ತಿರುವನಂತಪುರದ ಷಣ್ಮುಗಂ ಕಡಲತೀರದಲ್ಲಿ ಅವರು ಮಾತನಾಡಿದರು. ಅದು ನವಕೇರಳ ಸಮಾರೋಪ ಸಮಾರಂಭ. ರಾಜಕೀಯ ದುರುದ್ದೇಶದಿಂದ ಕೇಂದ್ರ ಸರ್ಕಾರ ಸಿಬಿಐನ್ನು ದುರ್ಬಳಕೆ ಮಾಡಿಕೊಂಡು ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಅವರನ್ನು ಎಸ್‌ಎನ್‌ಸಿ ಲಾವಲಿನ್ ಪ್ರಕರಣದಲ್ಲಿ ಸಿಲುಕಿಸಿದೆ. ಹಲವು ಅಂಶಗಳ ಜೊತೆಗೆ ಈ ಕುರಿತು ಜನತೆಗೆ ವಿವರಿಸುವುದೂ ಸಹ ಜಾಥಾದ ಒಂದು ಪ್ರಮುಖ ಉದ್ದೇಶವಾಗಿತ್ತು. ಕೇರಳದ ಮಾಜಿ ಸಚಿವರು, ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರೂ ಆದ ಪಿಣರಾಯಿ ವಿಜಯನ್ ರವರು ನೇತೃತ್ವ ವ... ಈ ಜಾಥಾದ ವಿವಿಧ ಸಭೆಗಳಲ್ಲಿ ರಾಜ್ಯಾದ್ಯಂತ ... ಲಕ್ಷ ಜನರು ನೇರವಾಗಿ ಪಾಲ್ಗೊಂಡಿದ್ದಾರೆ. ಫೆಬ್ರ... 2 ರಂದು ಕಾಸರಗೋಡಿನಲ್ಲಿ ಆರಂಭವಾದ ಜಾ... ಫೆ 26 ರಂದು ತಿರುವನಂತಪುರದಲ್ಲಿ ಮುಗಿಯಿತು. ಕೇರಳದ ಮುಖ್ಯಮಂತ್ರಿ, ಸಿಪಿಐ(ಎಂ) ಪೊಲಿ... ಬ್ಯೂರೋ ಸದಸ್ಯರಾದ ಕಾಂ. ವಿ.ಎಸ್.ಅಚ್ಯು... ನಂದನ್, ಪಿಣರಾಯಿ ವಿಜಯನ್ ಮುಂತಾದವ... ಈ ಸಮಾರೋಪ ಸಮಾರಂಭದ... ಮಾತನಾಡಿದರು.

ಕರಾವಳಿ ಮೇಲೂ...

ಪುಟ 10 ರಿಂದ

ಅಂದರೆ, ವಿಮಾ ರಂಗದಲ್ಲಿ 'ಆರ್ಥಿ... ಕುಸಿತವೇನೂ' ಆಗಿಲ್ಲ. ಹಾಗೆ ನೋಡಿದರೆ ... ವರ್ಷಕ್ಕೆ ಹೋಲಿಸಿದಲ್ಲಿ ಅದರ 'ವ್ಯವಹಾರ' ... ವರ್ಷವೂ ಭರ್ಜರಿಯಾಗಿ ಸಾಗಿದೆ. ಸರ್ಕಾರಿ ವಿಮ... ಕ್ಷೇತ್ರದಲ್ಲಿ ದೊಡ್ಡ-ದೊಡ್ಡ ಶ್ರೀಮಂತರು ದೊ... ಮೊತ್ತದ 'ವಿಮಾ ಪಾಲಿಸಿ'ಯನ್ನು ಮಾಡಿಸುತ್ತಿದ್ದಾ... ಅದಕ್ಕೆ ಪ್ರಮುಖ ಕಾರಣ, ಖಾಸಗಿ ವಿಮ... ಕಂಪನಿಗಳು ಸರಿಯಾದ ಸೇವೆ ನೀಡದಿರುವುದು ಮ... ಜನರಲ್ಲಿ ವಿಶ್ವಾಸವನ್ನು ಖಾಸಗಿಯವರ... ಕಳೆದುಕೊಂಡಿರುವುದು. ಈ ಕಾರಣದಿಂ... ಇದುವರೆಗೂ ಖಾಸಗಿ ವಿಮಾ ಸಂಸ್ಥೆ ಜೊತೆಗ... ಗ್ರಾಹಕರಲ್ಲಿ ಬಹುಪಾಲು ಜನರು 'ಸರ್ಕಾ... ಸ್ವಾಮ್ಯದ ವಿಮಾ ಕಂಪನಿಯತ್ತ ಮುಖ ಮಾಡಿರು... ದರಿಂದ ವ್ಯವಹಾರ'ದಲ್ಲಿ ಏರಿಕೆ ಇದೆ ನಿಜ.

ಆದರೆ ಪ್ರಶ್ನೆ ಅದಲ್ಲ. ಈ ಆರ್ಥಿಕ ಬಿಕ್ಕಟ್ಟಿ... ಕಾರಣದಿಂದ ಭಾರತದ, ಕರ್ನಾಟಕದ ವಿಶೇಷವಾ... ಬೆಂಗಳೂರಿನ, ಕೈಗಾರಿಕೆಗಳು ನೆಲಕಚ್ಚುತ್ತಿ... ಇದರಿಂದಾಗಿ ಲಕ್ಷಾಂತರ ಕಾರ್ಮಿಕರು ಕೆಲ... ಕಳೆದುಕೊಳ್ಳುತ್ತಿದ್ದಾರೆ. ಅದರ ಪರಿಣಾಮ ಅ... ಅಲ್ಪಸ್ವಲ್ಪ ಪ್ರಮಾಣದಲ್ಲಿ ತಮ್ಮ ಕುಟುಂಬ... ಪಡೆದುಕೊಂಡವು. ವಿವಿಧ ರೀತಿಯ ವಿಮ... ಪಾಲಿಸಿಗಳ ಪ್ರೀಮಿಯಂ ಹಣ ತುಂಬಲ... ಸಾಧ್ಯವಾಗುತ್ತಿಲ್ಲ. ಹೀಗಾಗಿ ಈ ಆರ್ಥಿಕ ಸಂಕಷ್ಟ... ಸಿಲುಕಿರುವ ಸಾವಿರಾರು ಜನ ಸಾಮಾನ್ಯ... ಕುಟುಂಬಗಳು ತಾವು ಪಡೆದುಕೊಂಡಿದ್ದ 'ವಿಮ... ಪಾಲಿಸಿ'ಗೆ ಪ್ರೀಮಿಯಂ ತುಂಬಲಾರದ... ಪಾಲಿಸಿಗಳನ್ನೇ 'ಸರಂಡರ್' ಮಾಡುತ್ತಿದ್ದಾ... ಒಂದೆಡೆ, ಖಾಸಗಿ ಕಂಪನಿಗಳು ನೀಡುತ್ತಿರು... ದೋಷಪೂರಿತ ಸೇವೆಯಿಂದಾಗಿ ಮತ್ತು ಅತ್ಯಂ... ಶ್ರೀಮಂತರು ಪಡೆದುಕೊಳ್ಳುತ್ತಿರುವ ದೊಡ್ಡ ಮೊತ್ತ... ಪಾಲಿಸಿಯಿಂದಾಗಿ ಸರ್ಕಾರಿ ಹಾಗೂ ಕ್ಷೇತ್ರ... ವ್ಯವಹಾರದ ಮೇಲೆ ಯಾವುದೇ ಪರಿಣಾಮ... ಬೀರಿಲ್ಲವಾದರೂ ಅದೇ ವೇಳೆಗೆ ಇದುವರೆಗ... 'ವಿಮಾ ವ್ಯಾಪ್ತಿಯಿಂದ ಹೊರಗುಳಿದಿರುವ... ಕೋಟ್ಯಾಂತರ ಜನಸಮುದಾಯವನ್ನು 'ವಿಮ... ವ್ಯಾಪ್ತಿಗೆ' ಒಳಪಡಿಸಬೇಕೆನ್ನುವ 'ಭಾರತೀಯ ... ವಿಮಾ ನಿಗಮ' ಮತ್ತು ಸಾಮಾನ್ಯ ವಿಮಾ ನಿಗಮಗ... ಮೂಲ ಗುರಿಗಂತೂ ಈ ಆರ್ಥಿಕ ಬಿಕ್ಕಟ... ತಡೆಯೊಡ್ಡಿದೆ ಎನ್ನಬಹುದು.

'ಹಿರೇಳಾಗಕ್ಕ ಮುಂಚೇನ ಮುತ್ತು ಕಟ್ಟಿಸ್ಯಾರ್ರೀ'

ದೇವದಾಸಿಯರ ರ್‍ಯಾಲಿ

ಅದು ಫೆಬ್ರವರಿ 20, 2009 ರೈಲು ನಿಲ್ದಾಣದ ಬಳಿ ಜನಜಾತ್ರೆ. ಬಹುತೇಕ ಮಹಿಳೆಯರು, ಮಹಿಳೆಯರನ್ನೇ ಅಲ್ಲವೇ ಈ 'ವ್ಯವಸ್ಥೆ' ದೇವದಾಸಿ ಎಂಬ ಸ್ಥಿತಿಗೆ ತಳ್ಳಿರುವುದು. ದೇವದಾಸಿ ಪದ್ಧತಿಯೇ ಒಂದು ದುಷ್ಟ ವ್ಯವಸ್ಥೆ ಎಂಬುದು ಈಗ ದೊಡ್ಡ ಸಂಖ್ಯೆಯ ದೇವದಾಸಿಯರ ಅರಿವಿಗೆ ಬಂದಿದೆ. ಅವರು ಸಂಘಟಿತರಾಗುತ್ತಿದ್ದಾರೆ. ಒಂದು ಆತ್ಮಗೌರವದ ಬದುಕನ್ನು ರೂಪಿಸಿಕೊಳ್ಳಲು ಆಗ್ರಹಿಸುತ್ತಿದ್ದಾರೆ. ಇದೋ ಇಲ್ಲೇ ಸಾಕ್ಷಿ ಇದೆ.


"ದೇವದಾಸಿ ಮಹಿಳೆಯರನ್ನು ಬೀದಿಪಾಲು ಮಾಡುವ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ.... ದೇವದಾಸಿ ಮಹಿಳೆಯರಿಗೆ ತಲಾ ಎರಡು ಎಕರೆ ಭೂಮಿ ಕೊಡಲೇಬೇಕು.... ಮಕ್ಕಳಿಗೆ ಉಚಿತ ಹಾಸ್ಟೆಲ್ ಕಟ್ಟಸ್ಲೇಬೇಕು... ತಿಂಗಳಿಗೆ 750 ರೂಪಾಯಿ ಪರಿಹಾರ ವೇತನ ಸಿಗಲೇಬೇಕು...." ಕೂಗು ಕೇಳುತ್ತಿದೆಯಲ್ಲವೇ?

ಯಾರೋ 'ಕಮ್ಯೂನಿಸ್ಟ್' ಕಾರ್ಯಕರ್ತರು ಇದನ್ನು ಕೂಗುತ್ತಿದ್ದಾರೆಂದು ಭಾವಿಸಬೇಡಿ. ಸ್ವತಃ ದೇವದಾಸಿಯಾಗಿದ್ದ ಮಹಿಳೆ ಕೊಪ್ಪಳ ಜಿಲ್ಲೆ, ತವಲೂರಿನ ಶಿವಗಂಗ ಕೈಯಲ್ಲಿ ಮೈಕ್ ಹಿಡಿದು ಗಟ್ಟಿ ದನಿಯಲ್ಲಿ ಕೂಗುತ್ತಿದ್ದರೆ, ನೆರೆದ ದೇವದಾಸಿಯರು ಅದಕ್ಕೆ ಪ್ರತಿದನಿ ಕೊಡತೊಡಗಿದ್ದರು.

ಬಳ್ಳಾರಿ, ಕೊಪ್ಪಳ, ರಾಯಚೂರು.... ಹೀಗೆ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಬಂದ ಮಹಿಳೆಯರು ಮೆರವಣಿಗೆ ಹೊರಟರು. ಮೆರವಣಿಗೆಯ ಕೊನೆಗೆ ತಡ ರೈಲಿನಲ್ಲಿ ಬಂದ ಹಾವೇರಿಯ ತಂಡವೂ ಸೇರಿತು. ಆನಂದರಾವ್ ವೃತ್ತದ ಮೇಲ್ಸೇತುವೆ ಮೇಲೆ ಹಾದು ಬರುತ್ತಿದ್ದರೆ ಎನಿಸುವುದು - ಎಷ್ಟೊಂದು ಜನ ದೇವದಾಸಿಯರು!! ಸಂತೋಷ ಪಡಬೇಕೋ, ದುಃಖ ಪಡಬೇಕೋ? ಸಂತೋಷಪಡಬೇಕು. ಇಷ್ಟು ದೊಡ್ಡ ಸಂಖ್ಯೆಯ ದೇವದಾಸಿಯರು ಹೊಸ ಬದುಕಿನೆಡೆಗೆ ಹೆಜ್ಜೆ ಇಟ್ಟು ಸಂಘಟಿತರಾಗಿದ್ದಾರೆ.

ಎಂದಿನಂತೆ ಬೆಂಗಳೂರಿನ ಸೆಂಟ್ರಲ್ ಜೈಲಿನ ಗೋಡೆಯ ನೆರಳಲ್ಲಿ ಬಹಿರಂಗಸಭೆ, ದೇವಮ್ಮ 2 ಮಕ್ಕಳ ತಾಯಿ. 6 ವರ್ಷದ ರಮೇಶ, ಸೋಮಶೇಖರ 9 ತಿಂಗಳ ಕೂಸು. ಕೂಸಿಗೆ ಹಾಲು ಕುಡಿಸುತ್ತಾ ಮುಖಂಡರ ಮಾತಿಗೆ ಕಿವಿಗೊಟ್ಟಿದ್ದಾಳೆ ದೇವಮ್ಮ.

"ನನಗೆ ಖೂನಿಲ್ಲರಿ. ಹಿರೇಳಾಗಕ್ಕ ಮುಂಚೇನ ಮುತ್ತು ಕಟ್ಟಿಸ್ಯಾರ್ರೀ... ನಮಗಂತ ಆಧಾರ ಏನಿಲ್ಲ. ಕೂಲಿ ಕೆಲಸ ಮಾಡ್ತೀವ್ರಿ... ಶಕ್ತಿ ಇರೋವರ್‍ಗೆ ದುಡಿತೀವಿ. ಆಮೇಲ ಏನ್ಮಾಡ್ತೋದು?" ಆಕೆಗೆ ಭವಿಷ್ಯದ ಚಿಂತೆ. ಮಕ್ಕಳ ಭವಿಷ್ಯದ ಚಿಂತೆ. ಆಕೆಯ ಊರು ಎರಡು ಓಣಿ, ಬೂದುಗುಂಪೆ. ಅದು ಕೊಪ್ಪಳ ಜಿಲ್ಲೆ ರಾಮಸಾಗರದ ಸಮೀಪದಲ್ಲಿದೆ.



ಗಂಡು ಮಕ್ಕಳಿಲ್ಲ ಅಂತ....

"ನಮ್ಮ ತಾಯಿ, ತಂದೇನೇ ನಮಗ ಮೋಸ ಮಾಡಿದರು. ಗಂಡು ಮಕ್ಕಳಿಲ್ಲ. ನಂಬಲ್ಲಿ(ನಮ್ಮಲ್ಲಿ - ಅಂದರೆ ಮಾದಿಗರಲ್ಲಿ ಅಂತ) ಅಳಿಯಂದಿರು ಮನೆಯಲ್ಲಿ ಉಳಿಯಂಗಿಲ್ಲ ಅಂತ ನನ್ನ ದೇವಿಗೆ ಬಿಟ್ಟರು...."

ಸಿರುಗುಪ್ಪ ತಾಲ್ಲೂಕು ಅಗಸನೂರು ಗ್ರಾಮದ ಲಕ್ಷ್ಮಮ್ಮ ಹೀಗಂತ ಹೇಳಿ ನಿಟ್ಟುಸಿರು ಬಿಟ್ಟರು. ತಂದೆ ತಾಯಿ ಮೋಸ ಮಾಡಿದರು ಅನ್ನುವಷ್ಟು ಪ್ರಜ್ಞೆ ಈಕೆಗೆ ಬಂದಿದೆ. ಆದರೆ ಆ ತಂದೆ - ತಾಯಿಗೆ ಈ ಪಾಳೆಗಾರಿ ವ್ಯವಸ್ಥೆ, ಪುರುಷ ಪ್ರಧಾನ ವ್ಯವಸ್ಥೆ ಮಾಡಿದ ಮೋಸದ ಬಗೆಗೆ ಸ್ಪಷ್ಟವಾಗಿ ಗೊತ್ತಿದೆಯೋ ಇಲ್ಲವೋ ಗೊತ್ತಾಗಲಿಲ್ಲ. ಆದರೆ ಅದರ ಸುಳಿವಂತೂ ಆಕೆಗಿದೆ. ಗಂಡು ಮಕ್ಕಳಿಲ್ಲ ಅಂತ ದೇವಿಗೆ ಬಿಟ್ಟಿದ್ದಾರೆ!!

ವಯಸ್ಸಾದ ಕಾಲಕ್ಕೆ ತಂದೆ ತಾಯಿಗೆ ಆಶ್ರಯ ಬೇಕು. ಮದುವೆ ಮಾಡಿಕೊಟ್ಟ ಮಗಳು ಗಂಡನ ಮನೆಗೆ ಹೋಗುತ್ತಾಳೆ. ಅವಳು ದುಡಿದದ್ದು ಅಲ್ಲಿಗೆ ಸಲ್ಲುತ್ತದೆ. ದೇವದಾಸಿಯಾದರೆ ಮಗಳು ಮನೆಯಲ್ಲೇ ಉಳಿಯುತ್ತಾಳೆ. ಅವಳ ದುಡಿಮೆಯ ಫಲ - ಮುಪ್ಪಿನ ಕಾಲಕ್ಕೆ ಆಶ್ರಯ ಎರಡೂ ಸಿಗುತ್ತದೆ!! ಹೇಗಿದೆ ವ್ಯವಸ್ಥೆಯ ಬಲೆ!!.

ಮುಖಂಡರು ಮಾತನಾಡುತ್ತಿದ್ದಾರೆ. ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಅಧ್ಯಕ್ಷೆ ಬಿ.ಮಾಳಮ್ಮ ಮಾತನಾಡಿ 13 ಪ್ರಮುಖ ಬೇಡಿಕೆಗಳನ್ನು ಕುರಿತು ವಿವರಿಸಿದರು. 3 ತಿಂಗಳಲ್ಲಿ ಮುಗಿಸಬೇಕಾಗಿದ್ದ ದೇವದಾಸಿ ಮಹಿಳೆಯರ ಪುನರ್ ಸರ್ವೇ ಒಂದೂವರೆ ವರ್ಷವಾದರೂ ಮುಗಿದಿಲ್ಲ. ಹೊಸ ಸಮೀಕ್ಷಾ ಪಟ್ಟಿಯನ್ನು ಬೇಗ ಬಿಡುಗಡೆ ಮಾಡಲು ಅವರು ಆಗ್ರಹಿಸಿದರು. ಪರಿಹಾರ ವೇತನ ನಿಗದಿಗೆ ಸರ್ಕಾರವು 45 ವರ್ಷದ ಮೇಲ್ಪಟ್ಟವರಾಗಿರಬೇಕೆಂದು ಕನಿಷ್ಠ ವಯೋಮಿತಿ ನಿಗದಿ ಮಾಡುವುದನ್ನು ಖಂಡಿಸಿದ ಅವರು ಎಲ್ಲಾ ದೇವದಾಸಿ ಮಹಿಳೆಯರಿಗೂ ಮಾಸಿಕ 750 ಪಿಂಚಣಿ ನೀಡಬೇಕೆಂದು ಆಗ್ರಹಿಸಿದರು.

ಸಂಘಟನೆಯ ಗೌರವ ಸಲಹೆಗಾರರಾದ ಯು.ಬಸವರಾಜು, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ, ಸ್ತ್ರೀಶಕ್ತಿ ಸಂಘಟನೆಗಳ ಒಕ್ಕೂಟದ ರಾಜ್ಯ ಸಂಚಾಲಕಿ ವಿ.ಕುಮಾರಿ ಮುಂತಾದವರು ಹೋರಾಟ ಬೆಂಬಲಿಸಿ ಮಾತನಾಡಿದರು. ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮನವಿ ಸ್ವೀಕರಿಸಿದರು.

ಶ್ರಮಜೀವಿಗಳಾದ ಹಮಾಲಿಗಳು ಸಂಘಟಿತರಾಗುತ್ತಿದ್ದಾರೆ ಮತ್ತು ತಮಗಾಗಿರುವ ಅನ್ಯಾಯದ ವಿರುದ್ಧ ರಾಜ್ಯವ್ಯಾಪಿ ಹೋರಾಟ ನಡೆಸಿದ್ದಾರೆ.

ಬಜೆಟ್‌ನಲ್ಲಿ ಅನ್ಯಾಯ

ಬೀದಿಗಿಳಿದ ಹಮಾಲರು ಸ್ತಬ್ಧಗೊಂಡ ಎಪಿಎಂಸಿ ವಹಿವಾಟು

...ಬ್ರವರಿ 5 ಮತ್ತು 6, 2009 ರಂದು ಬೆಂಗಳೂರಿನಲ್ಲಿ ...ರಾರು ಹಮಾಲಿ ಕಾರ್ಮಿಕರು ಸೇರಿ ...ನಲ್ಲಿ' ಹಮಾಲಿ ಕಾರ್ಮಿಕರಿಗಾಗಿ ಪ್ರತ್ಯೇಕ ... ಮಂಡಳಿ ರಚನೆಗೆ ಒತ್ತಾಯಿಸಿದ್ದರು. ...ವರಿ 6 ರಂದು ಹಮಾಲರು ನಡೆಸಿದ ...ಖ್ಯಮಂತ್ರಿ ಮನೆ ಚಲೋ' ಕಾರ್ಯಕರ್ತರಲ್ಲಿ ...ಖ್ಯಮಂತ್ರಿಗಳ ಪರವಾಗಿ ಸಮಾಜ ಕಲ್ಯಾಣ ...ವರಾದ ಈ ಸುಧಾಕರ್ ಸ್ವತಃ ಭಾಗವಹಿಸಿ ...ಾಲಿ ಕಾರ್ಮಿಕರ ಬೇಡಿಕೆಗಳಿಗೆ ಬಜೆಟ್‌ನಲ್ಲಿ ...ಯ ಸಲ್ಲಿಸಲು' ಒತ್ತಡ ತರುತ್ತೇನೆ ಮತ್ತು ಅದರಲ್ಲಿ ... ಯಶಸ್ವಿಯಾಗುತ್ತೇನೆ ಎಂಬ ಭರವಸೆ ನೀಡಿ ...ಾಲರಿಂದ ಚಪ್ಪಾಳೆ ಗಿಟ್ಟಿಸಿದ್ದರು. ಅಲ್ಲದೆ ...ಖ್ಯಮಂತ್ರಿಗಳೊಂದಿಗೆ ನಿಮ್ಮ ಪದಾಧಿಕಾರಿಗಳ ... ನಡೆಸುವ ಆಶ್ವಾಸನೆಯನ್ನು ನೀಡಿ ಅಲ್ಲಿಂದ ...ಾಗಲು ಯತ್ನಿಸಿದರು. ಆದರೆ ಪ್ರತಿಭಟನೆಯ ...ವಲ್ಲಿದ್ದ ಚಳ್ಳಕೆರೆಯ ನಮ್ಮ ಹಮಾಲಿ ಸಂಘದ ...ಳಾ ಮುಖಂಡರಾದ ತಿಪ್ಪಮ್ಮ ಮತ್ತು ...ಂಗ್ ಮತ್ತು ಅನ್‌ಲೋಡಿಂಗ್ ಸಂಘದ ...ಬಿ.ರಾಜು, 'ಏ ಸುಮ್ಮಿರಪ್ಪೊ ನೀನು ...ದಷ್ಟೇ? ಆ ಮೇಲೆ ಏನು ಮಾಡೋಲ್ಲ ...ೋದು ನಮಗೆ ಚೆನ್ನಾಗಿ ಗೊತ್ತಿದೆ' ಎಂದು ...ವರನ್ನು ಅಲ್ಲೇ ತರಾಟೆಗೆ ತಗೊಂಡಿದ್ರು. (ಈ ...ವ ಹಿಂದೆ ಕಾಂಗ್ರೆಸ್‌ನಿಂದ ಚಳ್ಳಕೆರೆ ಎಂಎಲ್‌ಎ ...ಗಿದ್ದ. ಈಗ ಹಿರಿಯೂರಿನಿಂದ ಪಕ್ಷೇತರನಾಗಿ ... ಸಚಿವರಾಗಿದ್ದರು)

...ಅದಾದನಂತರ ಹಮಾಲಿ ಫೆಡರೇಷನ್ ಮೂಲಕ ...ಚಿವರಿಗೆ ಪ್ರತ್ಯೇಕ ಪತ್ರ ಬರೆದು ಮುಖ್ಯಮಂತ್ರಿಗಳ ...ತೆ ಮಾತುಕತೆ ನಡೆಸಲು ನಮ್ಮ ...ಧಿಕಾರಿಗಳನ್ನು ಆಹ್ವಾನಿಸುವ ಬಗ್ಗೆ ಮತ್ತು ನಮ್ಮ ...ುಖ ಬೇಡಿಕೆಗಳನ್ನು ಬಜೆಟ್‌ನಲ್ಲಿ ಸೇರಿಸುವ ... ನೆನಪಿಸಲಾಯಿತು ಮಾತ್ರವಲ್ಲ. ಕಾರ್ಮಿಕರಿಗೆ ...ವರಿಗೆ, ಕೃಷಿ ಮಾರುಕಟ್ಟೆ ಸಚಿವರಿಗೂ ಹಾಗೂ ...ಖಾ ನಿರ್ದೇಶಕರಿಗೆ ಈ ಬಗ್ಗೆ ಪತ್ರ ...ಲಾಗಿತ್ತು.

...ತಿಗೆ ತಪ್ಪಿದ ಮಂತ್ರಿಗಳು

...ವರಿ 5 ರಂದು ಸಿಐಟಿಯು ನೇತೃತ್ವದ ಸಭೆಗೆ ...ಮಿಸಿ ಸುಮಾರು 30 ಸಾವಿರ ಕಾರ್ಮಿಕರ ಎದುರು ...ಸನೆ ನೀಡಿದ್ದ ಮತ್ತು ಆ ದಿನ ಕಾರ್ಮಿಕ ವರ್ಗದ ...ತ್ರ ವಿರೋಧವನ್ನು ಎದುರಿಸಿದ ಸಚಿವ ...ುಚಂದ್ರಗೌಡ ಮತ್ತು ಹಮಾಲರ ಪ್ರತಿಭಟನಾ ...ಕ್ಕೆ ಬಂದು ಭರವಸೆ ನೀಡಿದ್ದ ಸಚಿವ ಸುಧಾಕರ್ ...ರೂ ತಾವು ನೆರೆದ ಜನರ ಎದುರು ಏನೇನೆಲ್ಲಾ ...ದರೋ ಆದನ್ನೆಲ್ಲಾ ಮರೆತೆ ಹೋದರೆಂದು ...ುತ್ತಿದೆ. ಯಾಕೆಂದರೆ ಫೆ-20 ರಂದು ಮುಖ್ಯಮಂತ್ರಿ ...ಡಿಯೂರಪ್ಪ ಮಂಡಿಸಿದ್ದ ರಾಜ್ಯದ ಕೋಟ್ಯಾಂತರ ...ರ ತೆರಿಗೆ ಹಣದ ಬಜೆಟ್‌ನಲ್ಲಿ ಹಮಾಲರು ...ದಂತೆ ಯಾವುದೇ ಕಾರ್ಮಿಕ ವಿಭಾಗಕ್ಕೆ ...ವುದೇ ಭರವಸೆ ಸಿಗಲಿಲ್ಲ. 1.5 ಕೋಟಿ ...ಘಟಿತ ಕಾರ್ಮಿಕರ ವರ್ಗಕ್ಕೆ ಮುಖ್ಯಮಂತ್ರಿಗಳು ...ಟಿಸಿದ್ದು ಕೇವಲ 10 ಕೋಟಿ. ಇದು ಮೂಗಿಗೆ ...ತ್ತ ಹಚ್ಚುವ ಕೆಲಸ ಮಾತ್ರ. ಇನ್ನೂ ಆಟೋ ... ಡ್ರೈವರ್‌ಗಳಿಗೆ, ಅಂಗನವಾಡಿ ನೌಕರರಿಗೆ ... ಮಾತ್ರ ಹಣ ಎತ್ತಿಡಲಾಗಿದೆ. ಗುಡಿ ಗುಂಡಾರ-...ಮಂದಿರ-ಜಾತಿಗಳಿಗೆ ತೀರ್ಥ ಹಂಚುವಂತೆ ...ಕೋಟಿ ಹಣ ಹಂಚಿದ ಮುಖ್ಯಮಂತ್ರಿಗಳು ಸಿಕ್ಕಿಲ್ಲ.

ಬಜೆಟ್‌ನಲ್ಲಿ ತಮ್ಮ ವಿಭಾಗಕ್ಕೇನೂ ಭರವಸೆ ನೀಡದ ಮುಖ್ಯಮಂತ್ರಿ ವಿರುದ್ಧ ಫೆಬ್ರವರಿ 20ರ ಮಧ್ಯಾಹ್ನದಿಂದಲೇ ಫೋನ್‌ಗಳನ್ನು ಮಾಡುವ ಮೂಲಕ ತಮ್ಮ ಸಿಟ್ಟನ್ನು ಪ್ರದರ್ಶಿಸತೊಡಗಿದರು. ಕೆಲವರಂತೂ ಆವತ್ತಿನಿಂದಲೇ ಹೋರಾಟಕ್ಕೆ ಕರೆ ನೀಡಬೇಕೆಂದು ರಾಜ್ಯ ಮುಖಂಡರನ್ನು ಒತ್ತಾಯಿಸಿದ್ದರು. ಮಾರ್ಚ್ 2 ರಿಂದ 5ರವರೆಗೆ 'ಸಿಐಟಿಯು' ಕರೆಯ ಭಾಗವಾಗಿ ಮಾರ್ಚ್2 ರಿಂದ

ಚಳ್ಳಕೆರೆ : ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ 'ಎಪಿಎಂಸಿ' ಹಮಾಲಿ ಕಾರ್ಮಿಕರು ವಸತಿಗಾಗಿ ನಿರಂತರ ಹೋರಾಟ ನಡೆಸುತ್ತಿದ್ದರೂ 'ಕೆಲವು ಸ್ಥಾಪಿತ ಹಿತಾಸಕ್ತಿ'ಗಳ ಮಧ್ಯಪ್ರವೇಶದಿಂದಾಗಿ ಇದುವರೆಗೂ ನಿವೇಶನ ಮನೆ ಪಡೆಯಲು ಸಾಧ್ಯವಾಗಲಿಲ್ಲ. ಹೋರಾಟದ ಫಲವಾಗಿ 'ಭೂಮಿ' ಖರೀದಿಗೆ ಜಿಲ್ಲಾಧಿಕಾರಿಗಳು ಒಪ್ಪಿಗೆ ನೀಡಿದ್ದರೂ, ಅದಿನ್ನು ಜಾರಿಯಾಗಿಲ್ಲ. ಈ ಹಿನ್ನೆಲೆಯಲ್ಲಿ ಮಾರ್ಚ್ 2 ಮತ್ತು 3 ರಂದು ಬಜೆಟ್‌ನಲ್ಲಿ ಆಗಿರುವ ಅನ್ಯಾಯ

ಮಾಲೀಕರಿಗೆ ಎಚ್ಚರಿಕೆ ಘಂಟೆ ನೀಡಿದೆ. ಹುಬ್ಬಳ್ಳಿ ಎಪಿಎಂಸಿ ಮಾರ್ಕೆಟ್, ಕಾಳು ಕಡಿ ಮಾರ್ಕೆಟ್, ಹಣ್ಣು ತರಕಾರಿ, ಮಾರ್ಕೆಟ್ ಮತ್ತು ಅಕ್ಕಿ ಹೊಂಡದ ಸಗಟು ಮಾರ್ಕೆಟ್ ಮಾರ್ಚ್ 11 ರ ರಾತ್ರಿ 12 ಗಂಟೆಯಿಂದ ಮಾರ್ಚ್ 3 ರ ರಾತ್ರಿ 10 ಗಂಟೆವರೆಗೂ 'ಸಂಪೂರ್ಣ' ಬಂದ್ ಆಗಿದ್ದವು. ಇದು ಇಡೀ ಹುಬ್ಬಳ್ಳಿ ಹಮಾಲಿ ಕಾರ್ಮಿಕರು ಇತ್ತೀಚಿನ ದಿನಗಳಲ್ಲಿ ನಡೆಸಲಾದ ಸಂಪೂರ್ಣ ಯಶಸ್ವಿಬಂದ್ ಕಾರ್ಯಕ್ರಮ ಆಗಿತ್ತು. ಅಲ್ಲದೆ ಹುಬ್ಬಳ್ಳಿ ಇತಿಹಾಸದಲ್ಲಿ ತರಕಾರಿ ಮಾರ್ಕೆಟ್ 22 ಗಂಟೆಗಳ ಕಾಲ ಬಂದ್ ಆಗಿತ್ತು. ತರಕಾರಿ ಮಾರ್ಕೆಟ್ ಬಂದ್ ಕೈ ಬಿಡುವಂತೆ ಸ್ವತಃ ತಹಶೀಲ್ದರ್ ವಿನಂತಿಸಿದರೂ ಹಮಾಲರು ಹಿಂದೆ ಸರಿಯಲಿಲ್ಲ. ಬೆಳಿಗ್ಗೆಯೋ ನೂರಾರು ಹಮಾಲರು ಎಪಿಎಂಸಿ ಬಂದ್ ಮಾಡಿದ್ದರು. ನಂತರ ಹುಬ್ಬಳ್ಳಿಗೆ ಆಗಮಿಸಿ, ಬಜಾರ್ ಹಮಾಲರೊಂದಿಗೆ ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆ ನಡೆಸಿ ಹುಬ್ಬಳ್ಳಿ ಕೇಂದ್ರ ಭಾಗವಾದ 'ರಾಣಿ ಚನ್ನಮ್ಮ' ಸರ್ಕಲ್‌ನಲ್ಲಿ ಬೃಹತ್ ಸಭೆ ನಡೆಸಿದರು. ಅಲ್ಲಿಗೆ ಬಂದ ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು. ಸಭೆಯನ್ನುದ್ದೇಶಿಸಿ ಸಿಐಟಿಯು ಜಿಲ್ಲಾ ಸಹ ಸಂಚಾಲಕ ಮಹೇಶ್ ಪತ್ತಾರ್, ರೈತ ಮುಖಂಡರಾದ ಬಿ.ಎಸ್.ಸೊಪ್ಪಿನ್, ರಾಜ್ಯ ಉಪಾಧ್ಯಕ್ಷರಾದ



ಎಪಿಎಂಸಿಗಳನ್ನು ಬಂದ್ ಮಾಡಿ ಪ್ರತಿಭಟಿಸಲು ರಾಜ್ಯ ಹಮಾಲಿ ಫೆಡರೇಷನ್ ಕರೆ ನೀಡಿತ್ತು.

ಮಹಾಲಿಂಗಪುರ: ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ 'ಎಪಿಎಂಸಿ ಹಮಾಲಿ ಕಾರ್ಮಿಕರು ಮಾರ್ಚ್ 2 ರಂದು 'ಸಂಪೂರ್ಣ' ಮಾರುಕಟ್ಟೆ ಬಂದ್ ಮಾಡಿದ್ದಾರೆ. ಅವರೊಂದಿಗೆ 'ಬಜಾರ್'ಗಳಲ್ಲಿ ಕೆಲಸ ಮಾಡುತ್ತಿರುವ ಹಮಾಲರು ಸೇರಿ 250-300 ಹಮಾಲಿ ಕಾರ್ಮಿಕರ ಮೆರವಣಿಗೆಯನ್ನು ಹಿರಿಯ ಮುಖಂಡರಾದ ಕಲ್ಲಪ್ಪ ಕಡಬಲ್‌ನವರ ನೇತೃತ್ವದಲ್ಲಿ ನಡೆಸಿದ್ದಾರೆ.

ಜಮಖಂಡಿ: ಮುಖ್ಯಮಂತ್ರಿಗಳು ಜಿಲ್ಲೆಗೆ ಬರುತ್ತಿರುವುದರಿಂದ 'ಪ್ರತಿಭಟನೆಗೆ ಅವಕಾಶ' ನೀಡುವುದಿಲ್ಲವೆಂದು ಪೋಲೀಸರು ಆರಂಭದಲ್ಲೇ ಅನುಮತಿ ನಿರಾಕರಿಸಿದ್ದಾರೆ. ಆದರೆ ಮಾರ್ಚ್-4 ರಂದು 'ಎಪಿಎಂಸಿ ಹಮಾಲರು' ಪಟ್ಟು ಬಿಡದೆ ಜಿಲ್ಲೆಯ ಮುಖಂಡರಾದ ಕಲ್ಲಪ್ಪ ಕಡಬಲ್‌ನವರ ಮತ್ತು 'ಎಪಿಎಂಸಿ ಹಮಾಲಿ ಸಂಘದ ಬಸಪ್ಪ ಡಕ್ಕಪ್ಪ ಕಾರ್ಯದರ್ಶಿ ನಾಗಪ್ಪ ಬೂದಿ ಮೊದಲಾದವರ ನೇತೃತ್ವದಲ್ಲಿ 'ಎಪಿಎಂಸಿ ಸಂಪೂರ್ಣ' ಬಂದ್ ನಡೆದು ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ಮತ್ತು ಸ್ಥಳೀಯ ನಿವೇಶನ ಪ್ರಶ್ನೆಯು ಇತ್ಯರ್ಥಕ್ಕಾಗಿ "ಎರಡು ದಿನ ಸಂಪೂರ್ಣ" ಎಪಿಎಂಸಿ ಬಂದ್ ಮಾಡಿ ತೀವ್ರ ಸ್ವರೂಪದ ಹೋರಾಟ ನಡೆಸಲಾಯಿತು. ಮಾರ್ಚ್ 4 ರಂದು 'ಎಪಿಎಂಸಿ' ಕಛೇರಿಗೆ ಮುತ್ತಿಗೆ ಹಾಕಿ ಇಡೀ ಎಪಿಎಂಸಿ ಮಾರುಕಟ್ಟೆಯನ್ನೇ ಸಂಪೂರ್ಣ ಗೇಟ್ ಹಾಕಿ ಬಂದ್ ಮಾಡಲಾಯಿತು. ಸುಮಾರು ಅರ್ಧ ಗಂಟೆಗಿಂತ ಹೆಚ್ಚಿನ ಕಾಲ ಪೋಲೀಸ್‌ರೊಂದಿಗೆ ತಳ್ಳಾಟ, ಕೂಡ ನಡೆಯಿತು. ನಂತರ 1 ತಿಂಗಳೊಳಗೆ ನಿವೇಶನ ಹಕ್ಕು ಪತ್ರ ನೀಡುವ ಭರವಸೆಯನ್ನು ಎಪಿಎಂಸಿ ಆಡಳಿತ ನೀಡಿದ ನಂತರ ಹೋರಾಟ ಹಿಂಪಡೆಯಲಾಯಿತು. ರಾಜ್ಯ ಫೆಡರೇಷನ್ ಉಪಾಧ್ಯಕ್ಷ ಬಿ.ನಾಗರಾಜ್, ತಾ|| ಅಧ್ಯಕ್ಷ ಇ.ನಾಗರಾಜ್, ಮಹಿಳಾ ಮುಖಂಡರಾದ ತಿಪ್ಪಮ್ಮ,ಜಿಲ್ಲಾ ಕಾರ್ಯದರ್ಶಿ ತಿಪ್ಪೇಸ್ವಾಮಿ, ನಿಂಗಣ್ಣ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಪಿ.ಎಂ.ಮುಚಿಯಪ್ಪ ನೇತೃತ್ವ ವಹಿಸಿದ್ದರು.

ಸಂಪೂರ್ಣ ಬಂದ್ ಹುಬ್ಬಳ್ಳಿ ಮಾರ್ಕೆಟ್

ಮಾರ್ಚ್ 3 ರಂದು ಹುಬ್ಬಳ್ಳಿಯಲ್ಲಿ ನಡೆಸಲಾದ ಹಮಾಲರ ಹೋರಾಟ ಹುಬ್ಬಳ್ಳಿಯ ಅಂಗಡಿಗಳ ...

ದುರುಗಪ್ಪ ಚಿಕ್ಕ ತುಂಬಳ ಮೊದಲಾದವರು ಮಾತನಾಡಿದರು. ಹೋರಾಟದ ನೇತೃತ್ವವನ್ನು.ಎಪಿಎಂಸಿ ಹಮಾಲಿ ಸಂಘದ ಮುಖಂಡರಾದ ಗುರುಸಿದ್ದಪ್ಪ, ಅಂಬಣ್ಣ ನವನೂರು, ಈರಪ್ಪ, ಹಣ್ಣು-ತರಕಾರಿ ಹಮಾಲಿ ಸಂಘದ ಮುನ್ನ, ಜಮಖಂಡಿ, ಎಂ.ಡಿ.ಕತಾಲ್, ಭಗತ್‌ಸಿಂಗ್ ಬಜಾರ್ ಹಮಾಲರ ಸಂಘದ ಭಾಷಾಸಾಬ್ ಗೋಡೆಕಾರ್, ಅಕ್ಕಿ ಸಗಟು ಹಮಾಲರ ಸಂಘದ ಹನುಮಂತಪ್ಪ ಶ್ರೀನಿವಾಪುರ ಮತ್ತು ಸಿಟಿ ಮಾರ್ಕೆಟ್ ಹಮಾಲಿ ಕಾರ್ಮಿಕ ಮುಖಂಡರಾದ ಬಸವರಾಜ್ ಎಲಿಜ ಮೊದಲಾದವರು ವಹಿಸಿ ಯಶಸ್ವಿಗೊಳಿಸಿದರು.

ಧಾರವಾಡ ಎಪಿಎಂಸಿ ಬಂದ್

ಧಾರವಾಡದಲ್ಲಿ ಎಪಿಎಂಸಿ ಸಂಪೂರ್ಣ ಬಂದ್ ನಡೆದು ಅಲ್ಲಿಯ ಹಮಾಲರು ಎಪಿಎಂಸಿ ಕಛೇರಿ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಎಪಿಎಂಸಿ ಹಮಾಲಿ ಕಾರ್ಮಿಕರ ಸಂಘದ ಅಧ್ಯಕ್ಷ ಶೇಖಣ್ಣ ನಲವಾಡಿ, ಸಿಐಟಿಯು ಜಿಲ್ಲಾ ...

ಪುಟ 14ಕ್ಕೆ

ಬೀದಿಗಿಳಿದ ಹಮಾಲರು.......

ಪುಟ 14 ರಿಂದ

ಸಂಚಾಲಕರಾದ ಆರ್.ಹೆಚ್.ಆಯಿ ಮತ್ತು ಗ್ರಾ.ಪಂ. ನೌಕರರ ಸಂಘದ ಮುಖಂಡ ಕಾಂ: ಈಳಿಗೇರಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಇದೇ ಮೊದಲ ಬಾರಿಗೆ ಕಲಘಟಗಿ ಎಪಿಎಂಸಿ ಮಾರ್ಕೆಟ್ ಅಲ್ಲಿಯ ಮುಖಂಡ ವಿಠ್ಠಲ ನೇತೃತ್ವದಲ್ಲಿ ನವಲಗುಂದ ಎಪಿಎಂಸಿ ಮಾರ್ಕೆಟ್, ಅಲ್ಲಿಯ ಸಂಘದ ಅಧ್ಯಕ್ಷರಾದ ಸಂಗಪ್ಪ ಹುಬ್ಬಳ್ಳಿ ನೇತೃತ್ವದಲ್ಲಿ 'ಬಂದ್ ಆಗಿದೆ. ಈ ಸಭೆಗೆ ಮಾಜಿ ಸಚಿವ ಕೆ.ಎನ್.ಗಡ್ಡಿ ಆಗಮಿಸಿ ಹೋರಾಟಕ್ಕೆ ಬೆಂಬಲಿಸಿದ್ದಾರೆ.

ಯಶವಂತಪುರ ಮಾರ್ಕೆಟ್‌ನಲ್ಲೂ ಹೋರಾಟದ ಕಾವು

ಬೆಂಗಳೂರಿನ ಯಶವಂತಪುರ ದೇಶದಲ್ಲೇ ಅತಿ ದೊಡ್ಡ ಮಾರುಕಟ್ಟೆ. ದಿನಕ್ಕೆ ನೂರಾರು ಕೋಟಿ ವ್ಯವಹಾರ ನಡೆಯುತ್ತದೆ. ಸುಮಾರು 5 ಸಾವಿರಕ್ಕಿಂತ ಹೆಚ್ಚಿನ ಹಮಾಲರಿದ್ದಾರೆ. ಇಲ್ಲಿ ಹಲವು ಹಮಾಲಿ ಸಂಘಗಳಿವೆ. ಇತ್ತೀಚಿನ ದಿನಗಳಲ್ಲಿ ಆ ಸಂಘಗಳ ಜೊತೆ ರಾಜ್ಯ ಹಮಾಲಿ ಫೆಡರೇಷನ್ ಸಂಪರ್ಕ ಸಾಧಿಸಲು ಪ್ರಯತ್ನ ನಡೆಸಿದೆ. ಅದರ ಪರಿಣಾಮವಾಗಿಯೇ. 'ಯಶವಂತಪುರ ಎಪಿಎಂಸಿ ಮಂಡಿ ಹಮಾಲ ಕಾರ್ಮಿಕರ ಸಂಘ' ದ ನೇತೃತ್ವದಲ್ಲಿ ಪ್ರಪ್ರಥಮ ಬಾರಿಗೆ ಮಾರ್ಚ್ 3 ರಂದು ಸುಮಾರು 50ಕ್ಕೂ ಹೆಚ್ಚಿನ ಹಮಾಲರು ಎಪಿಎಂಸಿ ಕಛೇರಿ ಮುಂದೆ ಮತ ಪ್ರದರ್ಶನ ನಡೆಸಿದರು. ಈ ಹೋರಾಟದ ನೇತೃತ್ವವನ್ನು ಅಲ್ಲಿಯ ಸಂಘದ ಅಧ್ಯಕ್ಷರಾದ ಸುಖದೇವರ್, ಕಾರ್ಯದರ್ಶಿ, ಸಂದೀಪ್, ಸಲಹೆಗಾರ ಕುಮರೇಶನ್ ಮೊದಲಾದವರು ವಹಿಸಿದ್ದರು. ರಾಜ್ಯ ಫೆಡರೇಷನ್


ಬಾಗಲಕೋಟೆ ಹಮಾಲರ ಹೋರಾಟ

ಪ್ರಧಾನ ಕಾರ್ಯದರ್ಶಿ, ಕೆ.ಮಹಾಂತೇಶ್, ಸಿಐಟಿಯು ಮುಖಂಡರಾದ ಹನುಮಂತ ಹವಾಲ್ದಾರ್, ಶಿವರುದ್ರಯ್ಯ, ಸಭೆಯಲ್ಲಿ ಮಾತನಾಡಿದರು.

'ಗದಗ್ ಜಿಲ್ಲೆಯಲ್ಲಿ ಬಂದ್ ಆದ ಎಪಿಎಂಸಿ ವಹಿವಾಟು'

ಇದೇ ಪ್ರಥಮಬಾರಿಗೆ ಗದಗ ಎಪಿಎಂಸಿ ಮಾರ್ಕೆಟ್ ಅಲ್ಲಿಯ ಮುಖಂಡರಾದ ಅಯ್ಯಪ್ಪ ನೇತೃತ್ವದಲ್ಲಿ ಸಂಪೂರ್ಣ ಬಂದ್ ಆಗಿದೆ. ಅಲ್ಲದೆ ಗಜೇಂದ್ರಗಡ, ಲಕ್ಷ್ಮೇಶ್ವರ, ನರಗುಂದ, ಮುಂಡರಗಿ ಮಾರ್ಕೆಟ್‌ಗಳಲ್ಲಿ ಹಮಾಲರ ಮುಷ್ಕರದಿಂದಾಗಿ ಸಂಪೂರ್ಣ ವಹಿವಾಟು ಸ್ತಬ್ಧಗೊಂಡಿತ್ತು. ಗದಗದಲ್ಲಿ ಸಿಐಟಿಯು ಮುಖಂಡರಾದ ಶರಣಬಸವ ಮರದ್, ಮುಂಡರಗಿಯಲ್ಲಿ ಹಮಾಲಿ ಫೆಡರೇಷನ್ ಜಿಲ್ಲಾ ಸಂಚಾಲಕ ಎಂ.ಎಸ್. ಹಡಪದ, ಗಜೇಂದ್ರಗಡದಲ್ಲಿ ಸಿಐಟಿಯು ಮುಖಂಡ ರವೀಂದ್ರ ಹೂನವಾಡ ಪಾಲ್ಗೊಂಡಿದ್ದರು. ನರಗುಂದದಲ್ಲಿ ದಾಹುಲ್‌ಸಾಬ್ ದಫೆದಾರ್ ನೇತೃತ್ವ ವಹಿಸಿದ್ದರು.

ಇದಲ್ಲದೆ ಗಂಗಾವತಿಯಲ್ಲಿ ಎಪಿಎಂಸಿ ಹಮಾಲರು, ಸಂಘದ ಅಧ್ಯಕ್ಷರಾದ ಶಂಕರಪ್ಪ, ಕಾರ್ಯದರ್ಶಿ ತಿಮ್ಮಣ್ಣ ಮತ್ತು ಫೆಡರೇಷನ್ ರಾಜ್ಯ ಉಪಾಧ್ಯಕ್ಷರಾದ ಎ.ಹುಲುಗಪ್ಪ ನೇತೃತ್ವದಲ್ಲಿ ಬಂದ್ ಮಾಡಿ ಪ್ರತಿಭಟನೆ ನಡೆಸಿದ್ದಾರೆ. ಬೆಳಗಾಂ ಜಿಲ್ಲೆಯ ಸವದತ್ತಿ ಎಪಿಎಂಸಿಯು ಸಂಘದ ಅಧ್ಯಕ್ಷರಾದ ಸಿದ್ದಪ್ಪ, ಕಾರ್ಯದರ್ಶಿ ಮಲ್ಲಿಕಾಸಾಬ್ ನೇತೃತ್ವದಲ್ಲಿ ಬಂದ್ ಆಗಿದೆ. ರಾಮದುರ್ಗದಲ್ಲಿ ಎಕ್ಕಗಾಡಿ ಹಮಾಲಿ ಕಾರ್ಮಿಕರು ಸಂಘದ ಅಧ್ಯಕ್ಷರಾದ ಈರಪ್ಪ, ಕಾರ್ಯದರ್ಶಿ ನಾಗರಾಜ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಗೈಬು ಜೈನೆಖಾನ್ ನೇತೃತ್ವದಲ್ಲಿ ಎತ್ತಿನ ಗಾಡಿಗಳ ಮೆರವಣಿಗೆ ನಡೆಸಿದ್ದಾರೆ. ಅದೇ ರೀತಿ ಚಿಕ್ಕೋಡಿಯಲ್ಲಿ ಪುರಂದರ ನೇತೃತ್ವದಲ್ಲಿ, ಸಿಂಧನೂರಿನಲ್ಲಿ ವೆಂಕಪ್ಪ ನೇತೃತ್ವದಲ್ಲಿ ಹಮಾಲರು ಪ್ರತಿಭಟನೆ ನಡೆಸಿದ್ದಾರೆ. ಮಾರ್ಚ್ 7 ರಂದು ಶಿರಸಿ ಎಪಿಎಂಸಿ ಹಮಾಲರು ಸಂಘದ ಅಧ್ಯಕ್ಷರಾದ ನಾಗಪ್ಪ, ಕಾರ್ಯದರ್ಶಿ ವೆಂಕಟೇಶ ನೇತೃತ್ವದಲ್ಲಿ ಬಂದ್ ಮಾಡಿ ಪ್ರತಿಭಟನೆ ನಡೆಸಿದ್ದಾರೆ.

○ ಮಹಾಂತೇಶ್. ಕೆ

ಹೊಣೆಗೇಡಿ ಸರ್ಕಾ

ಪುಟ 3 ರಿಂದ

ಆದರೆ ಸಚಿವರು, ಅಧಿಕಾರಿಗಳು
ಉಲ್ಲಂಘಿಸುವವರಿಗೇ ಕುಮ್ಮಕ್ಕು
ಹೋದರೆ... ಅರಾಜಕತೆಯೇ ಸೃಷ್ಟಿಯಾ
ಯುವತಿಯರ ಮೇಲೆ ದಾಳಿ ನಡೆ
ಪತ್ನಿಯನ್ನೇ ಕೊಂದ ಆರೋಪಿತ
ಸಂವಿಧಾನಕ್ಕೆ ವಿರುದ್ಧವಾಗಿ ಸಮಾಜ
ಕೃತ್ಯಗಳಲ್ಲಿ ಭಾಗಿಯಾದ ಭಜರ
ಶ್ರೀರಾಮಸೇನೆಗಳಂತಹ ಗೂಂ
ಖುಲಾಸೆಯಾಗುವುದು, ಕೇಸ್ ಹಿಂತೆಗೆ
ಸರ್ಕಾರದಿಂದ ರಕ್ಷಣೆ ಸಿಗುತ್ತಿರುವುದು ಯಾ
ನೀಡುತ್ತದೆ? ಹೀಗಾಗಿ ಬಿಜೆಪಿ
ಅಧಿಕಾರಕ್ಕೇರಿದ ಮೇಲೆ ಗಮನಾ
ಅಪರಾಧಗಳು ಹೆಚ್ಚಾಗಿವೆ. ಅಂತಹ ಅಪ
ಪೋಲೀಸ್ ಠಾಣೆಗಳ ಮೇಲೆ ನಿ
ಸಾಧಿಸಿರುತ್ತಾರೆ. ಇತ್ತೀಚೆಗೆ ಅಪ
ನಿಯಂತ್ರಣವನ್ನು ಸಮುದಾಯ
ವಹಿಸಲಾಗುವುದು ಎನ್ನುತ್ತಿದ್ದಾರೆ. ಸರ್ಕಾ
ಇವರ ದೃಷ್ಟಿಯಲ್ಲಿ ಸಮುದಾಯವೆಂದ
ಪ್ರದೇಶಗಳ ಜಾತಿ-ಧರ್ಮಗಳ ತಂಡಗಳು,
ಸಂಘ ಪರಿವಾರಿಗಳೇ ನೇತೃತ್ವ ವಹಿಸಿ
ಕಾಪಾಡುವುದು! ಅಂದರೆ ಕಳ್ಳನಿಗೆ ಮನೆ
ಕೆಲಸ ವಹಿಸುವುದು! ಹೇಗಿದೆ ಚಿಂತನೆ,
ಯೋಜನೆ?!

ಇದಕ್ಕೆಲ್ಲಾ ಅವಕಾಶ ಕೊಡ
ಹೊಣೆಗೇಡಿತನ, ಅರಾಜಕತೆ ಸೃಷ್ಟಿ
ಗುರಿಯಾಗಿಸಿಕೊಂಡಿರುವ ಕ್ರಿಮಿನಲ್
ಕಾಯುವ ಸರ್ಕಾರಕ್ಕೆ ಛೀಮಾರಿ
ಸಂವಿಧಾನದತ್ತ ಹೊಣೆ ನಿಭಾಯ
ಒತ್ತಾಯಿಸಬಾರದೇಕೆ?

..........ಮೂರನೇ ಪರ್ಯಾಯ

ಪುಟ 9 ರಿಂದ

ತಿದ್ದುಪಡಿ, ಇಂತಹ ಯುಪಿಎ ಸರ್ಕಾರದ ಪ್ರಯತ್ನಗಳು ಕೈಗೂಡಲು ಎಡಪಕ್ಷಗಳು ಬಿಡಲಿಲ್ಲ. ಹಾಗೇನಾದರೂ ಈ ನೀತಿಗಳು ಜಾರಿಯಾಗಿ ಬಿಟ್ಟಿದ್ದರೆ, ಜಾಗತಿಕ ಆರ್ಥಿಕ ಬಿಕ್ಕಟ್ಟು ಭಾರತ ಆರ್ಥಿಕತೆಯ ಮೇಲೆ ವಿನಾಶಕಾರಿಯಾಗಿ ತನ್ನ ಪರಿಣಾಮ ಬೀರುತ್ತಿತ್ತು.

ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳ ಜೊತೆಗೆ ಕೋಮುವಾದಿ ಶಕ್ತಿಗಳ ವಿರುದ್ಧ ದೃಢತೆಯಿಂದ ವರ್ತಿಸಲಾರದ ಯುಪಿಎ ಸರ್ಕಾರದ ದುರ್ಬಲತೆಯೂ ಸೇರಿತು. ಗುಜರಾತಿನ ಹಲವು ಹೀನಾಯ ಕೋಮು ಹಿಂಸಾಚಾರ, ಗಲಭೆಗಳ ಬಗೆಗೆ ಸುಪ್ರೀಂಕೋರ್ಟ್ ಸಿಬಿಐ ತನಿಖೆಗೆ ಆದೇಶದ ನೀಡಿದರೂ ಈ ವಿಚಾರದಲ್ಲಿ ಮಹತ್ವದ್ದೇನೂ ಆಗಲಿಲ್ಲ. ಇಂತಹ ಕಾರಣಗಳಿಂದಾಗಿ ಗುಜರಾತ್‌ನಲ್ಲಿ ಮತ್ತೆ ಭೀಕರ ಕೋಮು ಗಲಭೆಗಳನ್ನು ಸಂಘಟಿಸಿದ ಅದೇ ಕೋಮುವಾದಿ ಸರ್ಕಾರವೇ ಅಧಿಕಾರಕ್ಕೆ ಬಂದಿತು. ಇಂಥದ್ದೆ ಕಾರಣದಿಂದಲೇ ಕೆಲವು ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿಯೂ ಬಿಜೆಪಿ ಅಧಿಕಾರ ಗಳಿಸಿತು. ಮತ್ತು ಈಗ ಬಿಜೆಪಿ ತನ್ನ ಉಗ್ರ ಹಿಂದುತ್ವದ ವಿಚಾರಗಳನ್ನು ಮುಂದಿಟ್ಟುಕೊಂಡು ಕೋಮುವಾದಿ ವಿಷವನ್ನು ಹರಡುತ್ತಿದೆ.

ಸಮಾನ ಕನಿಷ್ಠ ಕಾರ್ಯಕ್ರಮದ ಆಧಾರಭೂತ ಅಂಶಗಳಿಗೆ ತದ್ವಿರುದ್ಧವಾಗಿ ಯುಪಿಎ ಸಕಾರವು ಅಮೇರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ವ್ಯೂಹಾತ್ಮಕ (ಸಮರ) ಮೈತ್ರಿಗೆ ಮುಂದಾಯಿತು. ಅಣು ಒಪ್ಪಂದ ಎನ್ನುವುದು ಭಾರತ ಹಿತಾಸಕ್ತಿಗೆ ಗಂಭೀರವಾದ ಹಾನಿತರುವ ಅಮೇರಿಕಾ-ಭಾರತ ದೇಶಗಳ ನಡುವಿನ ಮೈತ್ರಿ ಬೆಸುಗೆಯನ್ನು ಮರೆ ಮಾಚುವ ಒಂದು ನೆಪವಷ್ಟೇ. ಯುಪಿಎ ಸರ್ಕಾರವು ಇತ್ತೀಚೆಗೆ ಪಾರ್ಲಿಮೆಂಟ್‌ನಲ್ಲಿ ಕುದುರೆ ವ್ಯಾಪಾರದ ಮೂಲಕ ಅಧಿಕಾರವನ್ನು ಉಳಿಸಿಕೊಂಡ ರೀತಿಯು ಅತ್ಯಂತ ನಾಚಿಕೆಗೇಡಿನದು.

ಭ್ರಮೆಯಲ್ಲಿ ತೇಲುತ್ತಿರುವ ಕಾಂಗ್ರೆಸ್

ಇತ್ತೀಚಿನ ಕೆಲವು ವಿಧಾನಸಭಾ ಚುನಾವಣೆಯಲ್ಲಿ ಗಳಿಸಿದ ಗೆಲುವಿನಿಂದ ಕಾಂಗ್ರೆಸ್ ಕೇಂದ್ರದಲ್ಲೂ ಮರಳಿ ಅಧಿಕಾರಕ್ಕೆ ಬರುವ ಭ್ರಮೆಯಲ್ಲಿ ತೇಲುತ್ತಿದೆ. 2004ರಲ್ಲಿ 'ಭಾರತ ಪ್ರಕಾಶಿಸುತ್ತಿದೆ' 'ಇಂಡಿಯಾ ಶೈನಿಂಗ್' ಎಂಬ ಭ್ರಮಾತ್ಮಕ ಘೋಷಣೆ ನೀಡಿ ಮರಳಿ ಅಧಿಕಾರಕ್ಕೆ ಬರಲು ಎನ್‌ಡಿಎ ಯೋಜಿಸಿದ್ದು, ಯುಪಿಎಯೂ ಈಗ ಅದನ್ನೇ ಅನುಸರಣೆ ಮಾಡುತ್ತಿದೆ.

ವಸ್ತು ಸ್ಥಿತಿ ಏನು?

ಕಳೆದ ಸುತ್ತಿನ ವಿಧಾನಸಭಾ ಚುನಾವಣೆಗಳ ಫಲಿತಾಂಶವನ್ನೇ ಸರಿಯಾಗಿ ನೋಡಿದರೆ, ಕಾಂಗ್ರೇಸೇತರ, ಬಿಜೆಪಿಯೇತರ, ಇತರರು ಗಣನೀಯ ಪ್ರಮಾಣದ ಮತಗಳಿಸಿರುವುದು ಸ್ಪಷ್ಟವಾಗಿದೆ.

ಮಧ್ಯಪ್ರದೇಶದಲ್ಲಿ ಶೇ.37.8 ಮತಗಳಿಸಿ ಬಿಜೆಪಿ ಮರಳಿ ಅಧಿಕಾರಕ್ಕೆ ಬಂದರೆ ಅಲ್ಲಿ 'ಇತರರಿಗೆ' ಶೇ.21.6 ಮತ ದೊರಕಿದೆ. ರಾಜಸ್ಥಾನದಲ್ಲಿ 36.8 ಶೇ. ಮತಗಳಿಸಿ ಕಾಂಗ್ರೆಸ್ ಸರ್ಕಾರ ರಚಿಸಿದರೆ ಶೇ.29 ಮತಗಳು 'ಇತರರಿಗೆ' ದೊರೆತಿದೆ. ದೆಹಲಿಯಲ್ಲಿ ಶೇ.40.5 ಮತಗಳೊಂದಿಗೆ, ಕಾಂಗ್ರೆಸ್ ಸರ್ಕಾರ ಉಳಿಸಿಕೊಂಡರೆ 'ಇತರರು' ಶೇ.23 ರಷ್ಟು ಮತಗಳನ್ನು ಗಳಿಸಿದ್ದಾರೆ. ಛತ್ತೀಸ್‌ಗಢದಲ್ಲಿ ಬಿಜೆಪಿ 40.6 ಶೇ ಮತ ಪಡೆದರೆ ಶೇ.20.6 ಮತ ಇತರರಿಗೆ ಸಿಕ್ಕಿದೆ. ಮಿಜೋರಾಂ 38.9 ಶೇ. ಮತ ಕಾಂಗ್ರೆಸ್ ಗಳಿಸಿದರೆ ಶೇ.30.1 ಮತ ಇತರರಿಗೆ ಸಿಕ್ಕಿದೆ.ಇದರ ರಾಜಕೀಯ ಸಂದೇಶ ಸ್ಪಷ್ಟವಾಗಿದೆ. ತಮ್ಮ ಬದುಕಿನ ಬವಣೆಗಳಿಗೆ, ಹೊಟ್ಟೆ ಪಾಡಿಗೆ ಸಂಬಂಧಿಸಿದ

ಪ್ರಶ್ನೆಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್
ಅನುಸರಿಸುವ ನೀತಿಗಳ ನಡುವೆ ಬಹ
ವ್ಯತ್ಯಾಸವಿಲ್ಲ. ಇದು -
ಜೀವನಾನುಭವವಾಗಿದೆ. ಒಂದು ಜನಪ
ಬದಲಿ ನೀತಿಗಳ ಆಧಾರದಲ್ಲಿ ಒಂದು ದೃ
ರಾಜಕೀಯ ಪರ್ಯಾಯವನ್ನು ಜನರ ಮು
ಖಂಡಿತವಾಗಿಯೂ ಜನತೆ ಅದನ್ನು ಬೆಂಬ
ಸಿದ್ಧವಾಗಿದ್ದಾರೆ.

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ತೀವ್ರ ಪರಿ
ಸಿಲುಕುತ್ತಿರುವ ಕೋಟ್ಯಾಂತರ ಭಾರತೀಯ
ಬದುಕನ್ನು ರಕ್ಷಿಸುವ ದೃಷ್ಟಿಯಿಂದ
ಪರ್ಯಾಯವೊಂದನ್ನು ರೂಪಿಸುವುದು,
ಮಹತ್ವದ್ದಾಗಿದೆ. ಯುಪಿಎ ಸರ್ಕಾರ
ಪರಿಹಾರವಾಗಿ ಸಾಮೂಹಿಕ ಉದ್ಯೋಗ ಸೃ
- ಜನರ ಕೊಳ್ಳುವ ಶಕ್ತಿ ಹೆಚ್ಚಿಸುವ
ಕಾರ್ಯಕ್ರಮಕ್ಕೆ ಬದಲಿಗೆ ಅದು ಕಾರ್ಪೋ
ಕಂಪನಿಗೆ ಕೊಡುಗೆಗಳ ಪ್ಯಾಕೇಜ್ ನೀ
ಇದುವರೆಗೂ ಘೋಷಿಸಲಾದ
ಉತ್ತೇಜನಗಳು ಅತ್ಯಂತ ಅಲ್ಪಪ್ರಮಾಣ
ಇಂತಹ ಘಟ್ಟದಲ್ಲಿ ಈ ನೀತಿಗಳಿಗೆ ಪರ
ನೀತಿ, ರಾಜಕೀಯ ಪರ್ಯಾಯ ಅಗತ್ಯವ



ಆರ್ಥಿಕ ಬಿಕ್ಕಟ್ಟಿನಿಂದ ಕಾರ್ಮಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಲು ಆಗ್ರಹಿಸಿ
...ಐಟಿಯುವಿನಿಂದ ಪ್ರತಿಭಟನೆ. ಕಾರ್ಮಿಕ ಆಯುಕ್ತರ ಕಛೇರಿ ಮುಂದೆ - ಬೆಂಗಳೂರು.



...ನವಾಡಿ ಕಾರ್ಯಕರ್ತೆಯರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಕಛೇರಿ ಮುತ್ತಿಗೆ



ಗಂಗಾವತಿ : ಗಂಜ್ ಹಮಾಲರ ಹೋರಾಟ



ತುಮಕೂರು ಪೌರ ಕಾರ್ಮಿಕರ ಹೋರಾಟ

ಬಂಡಾಯ ಸಾಹಿತಿ, ಸಂಶೋಧಕ, ಕವಿ ಎಸ್.ಎಸ್.ಹಿರೇಮಠರವರ ನಿಧನಕ್ಕೆ ಸಿಪಿಐ(ಎಂ) ಸಂತಾಪ

ಬಂಡಾಯ ಸಾಹಿತಿ, ಸಂಶೋಧಕ, ಕವಿ ಎಸ್.ಎಸ್.ಹಿರೇಮಠ (ಶಿವರುದ್ರಯ್ಯ, ಸದಾಶಿವಯ್ಯ ಹಿರೇಮಠ್) ರವರ ನಿಧನಕ್ಕೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.



ಇತ್ತೀಚೆಗೆ ತೀವ್ರವಾಗಿದ್ದ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದ ಅವರು ಬೆಳಗಾಂ ಜಿಲ್ಲೆಯ ಬೈಲಹೊಂಗಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ 59 ವರ್ಷ ವಯಸ್ಸಾಗಿತ್ತು. ಇಬ್ಬರು ಗಂಡುಮಕ್ಕಳು, ಒಬ್ಬ ಮಗಳು, ಪತ್ನಿಯನ್ನು ಅವರು ಅಗಲಿದ್ದಾರೆ.

ಪ್ರೊ. ಎಸ್.ಎಸ್. ಹಿರೇಮಠರವರು ಬೈಲಹೊಂಗಲದ ಸಾಣಿಕೊಪ್ಪ ಗ್ರಾಮದವರು, ಬೆಳಗಾವಿಯಲ್ಲಿ ಪದವಿ ಶಿಕ್ಷಣ ಮುಗಿಸಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದರಲ್ಲದೇ ಕನ್ನಡದಲ್ಲಿ ಚಿನ್ನದ ಪದಕ ಪಡೆದ ಪ್ರತಿಭಾವಂತ. ಖ್ಯಾತ ಸಂಶೋಧಕ ಡಾ.ಎಂ.ಎಂ.ಕಲಬುರ್ಗಿಯವರ ನೆಚ್ಚಿನ ವಿದ್ಯಾರ್ಥಿಯಾಗಿದ್ದರು. ನಂತರ ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ವಿಜಯನಗರ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಆರಂಭಿಸಿದರು. ಹರಪನಹಳ್ಳಿ, ಹಡಗಲಿ ಅಲ್ಲದೆ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿಯೂ ಕೆಲಕಾಲ ಸೇವೆ ಸಲ್ಲಿಸಿ ಕೊಟ್ಟೂರಿನ ವೀರಶೈವ ವಿದ್ಯವರ್ಧಕ ಸಂಘದ ಕಾಲೇಜಿನ ಪ್ರಾಚಾರ್ಯರಾಗಿ ಇತ್ತೀಚೆಗೆ ನಿವೃತ್ತರಾದರು.

1977 ರ ತುರ್ತು ಪರಿಸ್ಥಿತಿ ನಂತರದಲ್ಲಿ ಮಾರ್ಕ್ಸ್‌ವಾದದ ವಿಚಾರಧಾರೆಗೆ ಆಕರ್ಷಿತರಾಗಿ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ವಿಶೇಷವಾಗಿ ಬಂಡಾಯ ಸಾಹಿತ್ಯ ಸಂಘಟನೆ, ಸಮುದಾಯ ಸಂಸ್ಕೃತಿಕ ಸಂಘಟನೆ, ದಲಿತ ಸಂಘಟನೆ ಮುಂತಾದ ಚಳುವಳಿ ಹಾಗೂ ಸಂಘಟನೆಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಆರಂಭಿಸುವಲ್ಲಿ ಅತ್ಯಂತ ಪ್ರಧಾನ ಪಾತ್ರ ವಹಿಸಿದ್ದರು. 1980 ರ ದಶಕ ಆರಂಭದ ಹಲವಾರು ವರ್ಷಗಳಲ್ಲಿ ಸಿಪಿಐ(ಎಂ)ನ ಬಳ್ಳಾರಿ ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರಾಗಿದ್ದರು. ರೈತ ಕಾರ್ಮಿಕ ಚಳುವಳಿ ಬೆಳವಣಿಗೆಗೂ ಅವರ ಒತ್ತಾಸೆಯಿತ್ತು. ವ್ಯವಸ್ಥೆಯನ್ನು ನಿಷ್ಠುರವಾಗಿ ಪ್ರಶ್ನಿಸಿದ ಕಾರಣಕ್ಕಾಗಿ ಹೀಗಾಗಿ ಅವರ ವೃತ್ತಿ ಜೀವನದಲ್ಲಿಯೂ ಹಲವಾರು ಅಡೆ, ತಡೆಗಳನ್ನು ಎದುರಿಸಿದ್ದರು. ರೈತ ಕಾರ್ಮಿಕರ ಪ್ರಶ್ನೆಗಳಾಧಾರದಲ್ಲಿ ಜಿಲ್ಲಾಮಟ್ಟದಲ್ಲಿ ಸಮುದಾಯದಿಂದ ಹಲವಾರು ಸಾಂಸ್ಕೃತಿಕ ಜಾಥಾಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಸಮುದಾಯದಿಂದ

ನರಗುಂದ, ನವಲಗುಂದ ಬಂಡಾಯ ರಾಜ್ಯದಾದ್ಯಂತ ವಿಸ್ತರಿಸಿದ ರೈತನತ್ತ ಸಾಂಸ್ಕೃತಿಕ ಜಾಥಾ, ಭೀಕರ ಬರದೆದುರು ಜಾಥಾ, ಯುದ್ಧ ವಿರೋಧಿ ಶಾಂತಿಗಾಗಿ, 'ನೂರು ಅಡಿಗಳ ಬಣ್ಣದ ನಡೆ ಅಣು ಸಮರಕ್ಕೆ ತಡೆ, ಜಾಥಾ, ಮುಂತಾದವುಗಳನ್ನು ಯಶಸ್ವಿಗೊಳಿಸುವಲ್ಲಿ ಶ್ರಮಿಸಿದರು. ಅವರದ್ದೇ ಮುತುವರ್ಜಿಯಿಂದಾಗಿ ಬಂಡಾಯಸಾಹಿತ್ಯ ಸಂಘಟನೆಯ ಪುಸ್ತಕ ಜಾಥಾ ರಾಜ್ಯದಲ್ಲಿ ಗುರುತಿಸುವಂತಹದಾಗಿತ್ತು.

ಬಹುಮುಖ ಪ್ರತಿಭೆಯ ಹಿರೇಮಠರವರು ನವ್ಯ, ಬಂಡಾಯದ ಕಾವ್ಯದಲ್ಲಿ ಕೃಷಿ ಮಾಡಿದವರು. ಬಯಕೆ, ಬಯಲು, ಕಪ್ಪು ಸೂರ್ಯನ ಕೆಂಪು ಹಾಡು, ಇತ್ಯಾದಿ ಕಾವ್ಯ ಮತ್ತು ಜಾತ್ರೆಗಳು ಹಬ್ಬಗಳು ಮುಂತಾದ ಸಂಶೋಧನೆ ಗ್ರಂಥ, ಚಾರ್ವಾಕ, ಲೋಕಾಯತರ ತಾತ್ವಿಕ ಚಿಂತನೆಗಳು ಅಲ್ಲದೇ ಕನ್ನಡ ಜನ ಸಂಸ್ಕೃತಿಯ ಅಧ್ಯಯನ ನಡೆಸಿದ್ದಾರೆ.

ಹಿರೇಮಠರ ನಿಧನ ಪ್ರಗತಿಪರ, ಪ್ರಜಾಸತ್ತಾತ್ಮಕ ಜನ ಚಳುವಳಿಗೆ ಆದ ನಷ್ಟ. ಅವರ ನಿಧನಕ್ಕೆ ಶ್ರದ್ಧಾಂಜಲಿಯನ್ನು, ಕುಟುಂಬಕ್ಕೆ ಸಾಂತ್ವನವನ್ನು ಸಿಪಿಐ(ಎಂ) ವ್ಯಕ್ತಪಡಿಸಿದೆ. ○

ಅಭಿವ್ಯಕ್ತಿ ಸ್ವಾತಂತ್ರ್ಯ, ಸೌಹಾರ್ದತೆಯ ಉಳಿವಿಗಾಗಿ ಮಾರ್ಚ್ 14, ಮಂಗಳೂರು ಚಲೋ

ಸೌಹಾರ್ದತೆಯೆಡೆಗೆ ನಮ್ಮ ನಡಿಗೆ


ಮಧ್ಯಾಹ್ನ 3 ಗಂಟೆಗೆ - ಸೌಹಾರ್ದ ನಡಿಗೆ - ಹಳೇ ಸರ್ವಿಸ್ ಬಸ್ ನಿಲ್ದಾಣದಿಂದ
ಸಂಜೆ 4 ಗಂಟೆಗೆ ಬೃಹತ್ ಸೌಹಾರ್ದ ಸಮಾವೇಶ

ಜಿಲ್ಲಾಧಿಕಾರಿಗಳ ಕಛೇರಿ ಎದುರು ನಾಡಿನ ಬುದ್ಧಿಜೀವಿಗಳು, ಚಿಂತಕರು, ಧಾರ್ಮಿಕ ಪ್ರಮುಖರು, ಸಾಮಾಜಿಕ ಕಾರ್ಯಕರ್ತರು, ಜನ ಸಂಘಟನೆಗಳು ಮುಂತಾದವರು ಭಾಗವಹಿಸಲಿದ್ದು ತಾವು ಸಮಾನ ಮನಸ್ಕ ಸ್ನೇಹಿತರೊಂದಿಗೆ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ

ವ್ಯವಸ್ಥೆ: ಮಾನವತಾ ವೇದಿಕೆ, ಮಂಗಳೂರು

ಗುಲ್ಬರ್ಗಾದಲ್ಲಿ ಇತ್ತೀಚೆಗೆ ನಡೆದ ಕನ್ನಡ ಗಜಲ್‌ನ ವಿಶಿಷ್ಟ ಕಾರ್ಯಕ್ರಮದ ವರದಿ ಇಲ್ಲಿದೆ.

'ಗಜಲ್ ಕಿ ಏಕ್ ಶಾಮ್ ಶಾಂತರಸ್ ಕೆ ನಾಮ್'



ಗಜಲ್ ಉರ್ದು ಸಾಹಿತ್ಯದ ಅಪರೂಪದ ರೂಪ. ಗಜಲ್ ಪ್ರಕಾರದ ವಸ್ತು ಮತ್ತು ಅದರ ಹಾಡುಗಾರಿಕೆಯ ಆಕರ್ಷಕ ಶೈಲಿಯಿಂದಾಗಿ ಜಾಗತಿಕ ಕಾವ್ಯ ಪರಂಪರೆಯಲ್ಲಿ ಅದಕ್ಕೊಂದು ವಿಶಿಷ್ಟ ಸ್ಥಾನವಿದೆ. ಅಷ್ಟಕ್ಕೂ ಗಜಲ್ ಓದುಗಬ್ಬವಲ್ಲ. ಶುದ್ಧಾಂಗವಾಗಿ ಹಾಡುಗಬ್ಬ ಬೆಳದಿಂಗಳಿನ ಸ್ನಿಗ್ಧ ರಾತ್ರಿಗಳಲ್ಲಿ ಇಸ್ಲಾಂ ಸೂಫಿ ತತ್ವ ಸಿದ್ಧಾಂತಗಳನ್ನು ಪ್ರಧಾನವಾಗಿ ಬಿಂಬಿಸುವ ಗಜಲ್‌ಗಳು ಕನ್ನಡದ ಶರಣಪತಿ ಲಿಂಗಪತಿ ಭಾವದ ಉತ್ಕೃಷ್ಟ ಮಾದರಿಗಳಾಗಿವೆ. ಇಂಥ ಸಾಹಿತ್ಯ ಪ್ರಕಾರಗಳು ಉರ್ದುವಿನ ಭಾಷಿಕ ಸಾಮರ್ಥ್ಯವನ್ನು ಹಿಗ್ಗಲಿಸಿವೆ. ಅಷ್ಟೇ ಅಲ್ಲ ಆ ಭಾಷೆಗೆ ಸಂಗೀತದ ಮಾಧುರ್ಯವನ್ನು ಸಂಗತಗೊಳಿಸಿವೆ.

ಉರ್ದುವಿನ ತವರು ಮನೆಯಾಗಿರುವ ಹೈದ್ರಾಬಾದ್ ಕರ್ನಾಟಕದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ನೂರಾರು ವರ್ಷಗಳಿಂದ ಗಜಲಿನ ಮೆಹಫಿಲ್‌ಗಳು ಅನುರಣಿಸುತ್ತಿರುತ್ತವೆ. ಅದರೊಟ್ಟಿಗೆ ಶೇರ್, ಶಾಯರಿ, ಮುಷಾಯರ್‌ಗಳು, ಕವ್ವಾಲಿ ಗಾಯನಗೋಷ್ಠಿಗಳು ಖ್ವಾಜಾ ಬಂದಾನವಾಜ್ ದರ್ಗಾ, ಲಾಡ್ಲೆ ಮಶಾಕ್, ದರ್ಗಾಗಳಲ್ಲಿ, ತಿಂಥಿಣಿ ಮೋನಪ್ಪಯ್ಯ, ರಾಣೋಜಿಪೀರ್ ಹೀಗೆ ಹಲವಾರು ಗುಡಿಗುಂಡಾರಗಳಲ್ಲಿ ನಿರಂತರ ನಡೆದಿರುತ್ತವೆ.

ಉರ್ದುವಿನ ಪರಿಸರದಲ್ಲಿ ಬಾಳಿ ಬದುಕಿದ್ದ ಡಾ: ಶಾಂತರಸರಿಗೆ ಗಜಲ್ ಲೋಕವೆಂದರೆ ಅದಮ್ಯ ಉತ್ಸಾಹ. ಅದೇನೋ ಸೆಳೆತ. ಕನ್ನಡ ಮತ್ತು ಉರ್ದುವಿನಲ್ಲಿ ಪ್ರಗಲ್ಭ ಪಾಂಡಿತ್ಯವನ್ನು ಪಡೆದಿದ್ದ ಶಾಂತರಸರಿಗೆ ಕನ್ನಡದಲ್ಲೂ ಯಾರ್ಯಾರೋ ಕಳಪೆ ಪ್ರೇಮಗೀತೆಗಳನ್ನು ಬರೆದು ಅದಕ್ಕೆ ಗಜಲ್‌ಗಳೆಂದು ಹೆಸರಿಸಿದಾಗ ತುಂಬಾ ಕಸಿವಿಸಿಯಾಯ್ತು. ಗಜಲಿನ ಘನತೆ, ಗೌರವ, ಗಾಂಭೀರ್ಯವನ್ನು ಬಲ್ಲ ಅವರು ಒಮ್ಮೆಲೆ ಸಿಡಿದೆದ್ದರು.

ಉರ್ದು ಗಜಲಿನ ರೂಪ ರಚನೆ ಸಂಗೀತ ಸಾಹಚರ್ಯೆ ಕುರಿತ ಗಂಭೀರ ಅಧ್ಯಯನ ಕೈಗೊಂಡರು. ತತ್ಪರಿಣಾಮವಾಗಿ ಕನ್ನಡದಲ್ಲಿ ಖುದ್ದಾಗಿ ಗಜಲ್‌ಗಳನ್ನು ರಚಿಸಿ ಯಶಸ್ವಿಯಾದರು. ಕನ್ನಡದ ಗಜಲ್ ರಚನೆಗೆ ಶಾಂತರಸ ಮತ್ತು ಅವರ ಮಗಳು ಮುಕ್ತಾಯಕ್ಕರೇ ಆದ್ಯರು. ಹಾಗೆ ನೋಡಿದರೆ ಶಾಂತರಸರು ಯಾವತ್ತೂ ಸಮೂಹಜೀವಿ ಮತ್ತು ಸಂಘರ್ಷದ ಕವಿ. ಅವರು ಈ ಭಾಗದಲ್ಲಿ ಹತ್ತಾರು ಪ್ರಗತಿಪರರನ್ನು ಕಟ್ಟಿಕೊಂಡು ಬದುಕಿನುದ್ದಕ್ಕೂ ಸಾಮಾಜಿಕ ಬದ್ಧತೆಗಾಗಿ ಬಡಿದಾಡಿದ್ದಾರೆ.

ಕಾಶಿನಾಥ ಅಂಬಲಗಿ, ಜಂಬಣ್ಣ ಅಮರಚಿಂತ, ಚಿದಾನಂತ ಸಾಲಿ, ಸಿದ್ಧರಾಮಯ್ಯ ಹಿರೇಮಠ, ಪ್ರಭು ಖಾನಾಪುರೆ, ಮಹಾಂತೇಶ್ ನವಲಕರ್ ಮುಂತಾದವರು ಶಾಂತರಸರ ಒತ್ತಾಸೆ, ಸ್ಫೂರ್ತಿಯಿಂದಾಗಿಯೇ ಪುಂಖಾನು ಪುಂಖವಾಗಿ ಕನ್ನಡ ಗಜಲ್‌ಗಳನ್ನು ರಚಿಸುತ್ತಿದ್ದಾರೆ. ಶಾಂತರಸರ ಒಡನಾಡಿಗಳಾಗಿದ್ದ "ಸಮುದಾಯ" ಸಾಂಸ್ಕೃತಿಕ ಸಂಘಟನೆಯ ಗೆಳೆಯರಿಗೆ ಶಾಂತರಸರ ನೆನಪಿನಲ್ಲಿ ಉರ್ದು-ಕನ್ನಡ ಗಾಯನಗೋಷ್ಠಿಯನ್ನು ನಡೆಸಬೇಕೆಂಬುದು ಕಾಡುತ್ತಲೇ ಇತ್ತು. ಅಂತೂ ಭರತ ಹುಣ್ಣಿಮೆಯ ಮುನ್ನಾದಿನವಾದ ದಿನಾಂಕ ಫೆಬ್ರವರಿ,8 2009 ರಂದು ರಾತ್ರಿ ಕನ್ನಡ ಗಜಲ್ ಮೆಹಫಿಲ್‌ನ್ನು ಅಣಿ ನೆರೆಸಲು ಅವರೆಲ್ಲ ಕಟಿಬದ್ಧರಾದರು. ಅದರ ಫಲವಾಗಿಯೇ ಅಂದು ಪ್ರಜ್ಞಾ ಕಾನೂನು ಸಲಹಾ ಸಮಿತಿ, ಸಮುದಾಯ ಸಂಘಟನೆ, ಅಖಿಲ ಭಾರತ ಉರ್ದು ಮಂಚ್ ಮತ್ತು ಗುಲ್ಬರ್ಗಾ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತುಗಳಿಂದ ಜಂಟಿಯಾಗಿ "ಗಜಲ್ ಕೀ ಏಕ್ ಶಾಮ್ ಶಾಂತರಸ ಕೇ ನಾಮ್' ಎಂಬ ವಿನೂತನ ಪ್ರಯೋಗ ಮಾಡಿದವು.

ಮಾಲಾಶ್ರೀ ಕಣವಿ, ಕುಮಾರ ಕಣವಿ, ರಾಜೇಂದ್ರಸಿಂಗ್ ಶಬ್ಬೀರ್‌ಖಾನ್, ನಬಿಬೇಗ್ ಇವರುಗಳು ಕನ್ನಡದ ಗಜಲ್‌ಗಳಿಗೆ ರಾಗ ಸಂಯೋಜಿಸಿ ಹಾಡುವ ಮೂಲಕ ಸಭಿಕರನ್ನು ಮಂತ್ರ ಮುಗ್ಧಗೊಳಿಸಿದರು. ನಂತರ ತೈಯೂಬ್ ಯಾಕೂಬಿ, ರೌಫಖಾದ್ರಿಯವರು ಪ್ರಸಿದ್ಧವಾದ ಉರ್ದು ಗಜಲ್‌ಗಳನ್ನು ಹಾಡಿ ರಂಜಿಸಿದರು.

ಮೊದಲ ಬಾರಿಗೆ ಮುಸ್ಲಿಂ ಕಾವ್ಯರಸಿಕ ಕನ್ನಡದ ಗಜಲ್ ಪರಂಪರೆಗೆ ಕಿವಿಗೊಟ್ಟು ಪುಳಕಿತರಾದರು. ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ಹಿರಿಯ ಗಜಲ್ ಪ್ರೇಮಿಗಳು ಇದೊಂದು ಅದ್ಭುತ ಭಾವೈಕ್ಯತೆಯ ಸೇತುವೆಯಾಗಿದೆ. ಬಹುದಿನಗಳ ನಂತರ ಇಂಥದೊಂದು ಸಾಂಸ್ಕೃತಿಕ ಸಂಜೆ ಪರಸ್ಪರ ಪ್ರೀತಿ, ಗೌರವ,ಅಭಿಯಾನಗಳ ಸಂಕೇತವಾಗಿ ನೆರೆದಂತಾಗಿದೆ. ಈ ತೆರನ ಉರ್ದು ಕನ್ನಡ ಪುತ್ರರ ಗಾಯನಗೋಷ್ಠಿಗಳು ಶತಮಾನಗಳ ಕರುಳುಬಳ್ಳಿಯ ಬಂಧವನ್ನು ತಾಜಾಗೊಳಿಸಿವೆ. ಉರ್ದು ಭಾಷೆಯ ಯಾವತ್ತೂ ನಿರ್ದಿಷ್ಟ ಸಮುದಾಯ, ನಿರ್ದಿಷ್ಟ ಧರ್ಮ, ಜಾತಿಗಳ ಸ್ವತ್ತಲ್ಲ ಉರ್ದು ಬೆಳೆದದ್ದೆ ಇಸ್ಲಾಂ-ಹಿಂದೂ ಸಂಸ್ಕೃತಿಯ ಸಂಕರದಲ್ಲಿ. ಆದ್ದರಿಂದ ಕೋಮುವಾದ, ಭಯೋತ್ಪಾದನೆ ಎಲ್ಲೆಲ್ಲೂ ತಾಂಡವವಾಡುತ್ತಿರುವ ಈ ಹೊತ್ತಿನಲ್ಲಿ ಧರ್ಮ ನಿರಪೇಕ್ಷ ನೆಲೆಯ ಇಂಥ ಗಾಯನಗೋಷ್ಠಿಗಳು ಅವಶ್ಯಕ.

ಮೆಹರಾಜ್ ಪಟೇಲ್ ಸ್ವಾಗತ ಮಾಡಿದರೆ ಮೀನಾಕ್ಷಿ ಬಾಳಿ ಪ್ರಾಸ್ತಾವಿಕ ಮಾತನಾಡಿದರು. ಮಹಾಂತೇಶ ನವಲ್‌ಕಲ್ ವಂದಿಸಿದರು. ಉಳಿದಂತೆ ಭಾಷಣ, ಹಾರ, ತುರಾಯಿ, ಗೌಜುಗದ್ದಲ ಏನೇನೂ ಇಲ್ಲದ ಸದರಿ ಕಾರ್ಯಕ್ರಮ ಕಲಾರಸಿಕರ ಪ್ರಗತಿಪರ ಮೆಚ್ಚುಗೆ ಪಡೆಯಿತು.

ಕವಿತೆ

ಸಮತೆಯ ಹಾಡನು ಹಾಡೋಣ

ಗಣಿಯ ಧಣಿಗಳ ಕಾರುಬಾರಿನಲಿ
ನರಕವಾಯ್ತು ಬದುಕು
ಹಣದ ಅಮಲಿನ ದರ್ಪಕೆ ಸಿಲುಕಿ
ಜೀವ ನರಳಿ ಹೋಯ್ತು

ಬಡವರ ಬೆವರು ನೆತ್ತರು ಹೀರಿ
ಕೊಬ್ಬಿ ಬೆಳೆದ ಜನರು
ವಿಧಾನಸೌಧದ ಗದ್ದುಗೆಯಲ್ಲಿ
ಮೆರೆವರು ಅಟ್ಟಹಾಸದಲಿ

ನೆಲದ ಎದೆ ಬಗೆದು ಲೂಟಿಯ ಮಾಡಿ
ಕೋಟ್ಯಾಧಿಪತಿಗಳಾದವರು
ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿ
ಭ್ರಷ್ಟಾಚಾರವ ಮೆರೆದವರು

ಗಣಿಯ ಕುಣಿಯಲ್ಲಿ ಹೂತುಹೋದವು
ಬಸವರ ಏಸೋ ಕನಸುಗಳು
ಹಸಿದ ಹೊಟ್ಟೆಯ ತಳವಳ ಸಂಕಟ
ಹಾದಿ, ಬೀದಿಯ ಮಾತುಗಳು

ಕೆಂಪು ಕೆಸರಿನಲಿ ಹಸಿರು ಹೊಲವೆಲ್ಲ
ಬಂಜರಾದವಲ್ಲೋ
ಮಣ್ಣಿನ ಮಗನ ಕೈಯ್ಯ ಕಸುಬನ್ನು
ಅವರು ಕಸಿದರಲ್ಲೋ

ಗಣಿಯ ಧೂಳಿನ ರೋಗ ರುಜಿನದಲಿ
ನರಳುವ ಜೀವಗಳೆಷ್ಟೋ
ದಮ್ಮು ಕೆಮ್ಮು ಕ್ಷಯರೋಗಕೆ ನರಳಿ
ಸಾಯುವ ಜೀವಗಳೆಷ್ಟೋ

ಏಳು ಎದ್ದೇಳು ಕೂಲಿಗೆಳೆಯನೆ
ಕುಲ ಮತ ಮರೆತು ಒಂದಾಗೋಣ
ರಣ ವಾದ್ಯಗಳ ಹಿಡಿದು ಕೈಯಲ್ಲಿ
ಸಮತೆ ಹಾಡನು ಹಾಡೋಣ.

■ ಹುಲಿಕಟ್ಟಿ ಚನ್ನಬಸಪ್ಪ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH